BUDGET ESTIMATES FOR 1966-67—DEMANDS FOR GRANTS

Demand Nos. 20, 38, and 51

Mr. SPEAKER.—Most of the Members are either Agriculturists or interested in agriculture. A very large number of Members are desirous of participating in the Debate. Several members have already met me and the Whips have written to me about the number of members who are willing to participate in the Debate. The time allotted for this may not be sufficient and it may be difficult for me to comply with. There are Ministers in-charge to reply. If the House agrees we can sit tomorrow morning also.

SOME HON'BLE MEMBERS.—Both in the Morning and in the Evening.

Mr. SPEAKER.—I will have to take away the Question Hour for tomorrow and put it for the day-after. If the House agrees we can do so.

HON'BLE MEMBERS.—Yes.

Mr SPEAKER.—There will be no Question Hour tomorrow. The Questions will be taken up day-after-tomorrow and afterwards. The reply to the discussion on the demand will be tomorrow. Soon after the reply, we will begin the other Demands *viz.* Animal Husbandry, Revenue and several others which are very important. So, tomorrow we will have reply and debate on the rest of the Demands. Every Member will please adhere to the time limit and not transgress beyond the time limit.

Sri S. NIJALINGAPPA.—Sir, on the recommendation of the Governor of Mysore, I beg to move :

> "That a sum not exceeding Rs. 5,65,05,000 be granted to the Government to defray the charges which will come in course of payment during the financial year for the period ending 31st day of March 1967, in respect of 'Agriculture'."

Similarly, Sir, on behalf of the Minister for Forests and Fisheries, and on the recommendation of the Governor of Mysore, I beg to move :

> "That a sum not exceeding Rs. 5,96,77,000 be granted to the Government to defray the charges which will come in course of payment during the financial year for the period ending 31st day of March 1967, in respect of 'Forest'."

Sir, again, on behalf of the Minister for Forests and Fisheries and on the recommendation of the Governor of Mysore, I beg to move :

> "That a sum not exceeding Rs. 9,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Forests'."

MR. SPEAKER.—Motion moved :

"That a sum not exceeding Rs. 5,65,05,000 be granted to the Government to defray the charges which will come in course of payment during the financial year for the period ending 31st day of March 1967, in respect of 'Agriculture'."

"That a sum not exceeding Rs. 5,96,77,000 be granted to the Government to defray the charges which will come in course of payment during the financial year for the period ending 31st day of March 1967, in respect of 'Forest'."

"That a sum not exceeding Rs. 9,00,000 be granted to the Government to defray the charges which will come in course of payment during the financial year for the period ending 31st day of March 1967 in respect of 'Capital Outlay on Forests'."

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೆ, ನಮ್ಮ ದೇಶದಲ್ಲಿ ಅತಿ ಹೆಚ್ಚು ಜನ ಅವಲಂಬಿಸಿಕೊಂಡಿರತಕ್ಕ ಒಂದು ವೃತ್ತಿಗೆ ಸಂಬಂಧಪಡಿಪಟ್ಟಂತಹ ಡಿಮ್ಯಾಂಡ್ ಎಂದರೆ ವ್ಯವಸಾಯ. ಇವತ್ತು ವ್ಯವಸಾಯಕ್ಕೆ ಸಂಬಂದಪಟ್ಟಂತೆ ಮಂಡನೆ ಮಾಡಿರತಕ್ಕ ಡಿಮ್ಯಾಂಡನ್ನು ನಾನು ಬಹಳ ತೀವ್ರತೆಯಿಂದ ವಿರೋಧಿಸಬೇಕಾಗಿದೆ. ಆದಕ್ಕೆ ಕಾರಣ ಇಷ್ಟೆ, ಯಾವ ಕಸಬನ್ನು ನಮ್ಮ ದೇಶದಲ್ಲ ಶೇಕಡ 75ರಷ್ಟು ಜನ ಅವಲಂಬನೆ ಮಾಡಿದ್ದಾರೋ ಆ ಕಸಬು ಶತಮಾನ ಗಳಿಂದಲೂ ಒಂದೇ ಸಮನೆ ಈ ದೇಶದ ಜನರು ಕೈಗೊಂಡು ಬಂದಿರುವ ಕಸುಬು ಎಂದರೆ ವ್ಯವಸಾಯ. ವ್ಯವಸಾಯ ಪ್ರದಾನವಾದ ನಮ್ಮ ದೇಶದಲ್ಲಿ, ರೈತನು ತನ್ನ ಕಾಲ ಮೇಲೆ ತಾನೇ ನಿಂತು ಜೀವನವನ್ನು ಮಾಡಿಕೊಳ್ಳುತ್ತಿದ್ದಾನೆಯೋ ಹೋರತು, ಸರ್ಕಾರ ಇಂತಹ ಒಂದು ಕಸಬನ್ನು ಅಭಿವೃದ್ಧಿ ಪಡಿಸಿದೆಯೋ ಅನ್ನತಕ್ಕಂಥ ವಿಚಾರವನ್ನು ನಾವು ನೋಡುವುದಾದರೆ ಸರ್ಕಾರ ಈ ಬಗ್ಗೆ ಇವತ್ತು ಬೇರೆ ಯಾವ ದೇಶ ತನ್ನ ಮುಖ್ಯ ಕಸಬು ವ್ಯವಸಾಯವನ್ನು ಅವಲಂಬಿಸಿಕೊಂಡಿದೆಯೋ ಆ ದೇಶ ಯಾವ ರೀತಿ ವ್ಯವಸಾಯಕ್ಕೆ ತಕ್ಕ ಪ್ರೋತ್ಸಾಹವನ್ನು, ಪ್ರಾಶಸ್ತ್ಯವನ್ನು ಮತ್ತು ಸಾಕಷ್ಟು ಮರ್ಯಾದೆಯನ್ನು ಕೊಡುತ್ತಿದೆಯೋ, ಅದೇ ರೀತಿ ನಮ್ಮ ಸರ್ಕಾರವೂ ಸಹ ವ್ಯವಸಾಯಕ್ಕೆ ಯಾವ ಪ್ರೋತ್ಸಾಹವನ್ನೂ ಕೊಟ್ಟಿಲ್ಲದಿರುವುದು ನಾವೆಲ್ಲರೂ ಶೋಕಪಡತಕ್ಕಂಥ, ವ್ಯಥೆ ಪಡತಕ್ಕಂಥ ಸಮಾಚಾರವಾಗಿದೆ. ರೈತನ ಯಾವ ಕಸಬು ದೇಶಕ್ಕೆ ಅನ್ನ ತುಂಬಬೇಕೋ ಅಂತಹ ಕಸಬಿಗೆ ಯಾವ ಸ್ಥಾನಮಾನ ಕೊಟ್ಟಿದ್ದಾರೆ ಎಂದು ಹೇಳುವುದಾದರೆ, ಎಲ್ಲಾ ಕಸಬುಗಳಿಗೂ ಕೊನೆಯ ದರ್ಜೆಯಲ್ಲಿಟ್ಟು ನೋಡುತ್ತಿದ್ದಾರೆ. ಯಾವ ದೇಶ ವ್ಯವಸಾಯದೇಶವೆಂದು ಹೇಳುತ್ತಿದ್ದಾರೋ ಯಾವ ದೇಶದಲ್ಲಿ ಹೆಚ್ಚಿನ ಜನ ವ್ಯವಸಾಯವನ್ನೇ ಅವಲಂಬನೆ ಮಾಡಿದ್ದಾರೋ, ಅಂತಹ ನಮ್ಮ ದೇಶದಲ್ಲಿ ಅದಕ್ಕೆ ತಕ್ಕ ಪ್ರೋತ್ಸಾಹ ಕೊಡದಿರುವುದಕ್ಕಾಗಿ ಶೋಕಪಡಬೇಕಾಗಿದೆ. ಈ ಕಸಬನ್ನು ಅಭಿವೃದ್ಧಿ ಮಾಡದೇ ಇರುವುದರಿಂದ ದೇಶದ ಎಲ್ಲಾ ಸಂಪತ್ತು ಕೂಡ ಕೆಳಗೆ ಇಳಿಯುತ್ತಿದೆ. ವ್ಯವಸಾಯ ಉತ್ಪಾದನೆ ಮೇಲೆ ಇವತ್ತು ದೇಶದ ಸಾಂಪತ್ತಿಕ ಅಭಿವೃದ್ಧಿಗಳು ಕೂಡ ನಿಂತಿದೆ. ವ್ಯವಸಾಯ ಅಭಿವೃದ್ಧಿ ಎಷ್ಟರಮಟ್ಟಿಗೆ ಇದೆ, ಎಷ್ಟರ ಮಟ್ಟಿಗೆ ಆ ದೇಶದ ಸಂಪತ್ತು ಮತ್ತು ಅಭಿವೃದ್ಧಿಗಳ ಕಾರ್ಯ ನಡೆದಿದೆ ಎನ್ನುವುದನ್ನು ಥರ್ಮಾಮೀಟರ್ ಮೂಲಕ ನೋಡಬೇಕಾಗಿದೆ. ಇವತ್ತು ಇಂಡಿಯಾ ದೇಶದಲ್ಲಿ ಈ ವ್ಯವಸಾಯ ಸುಮಾರು ಎರಡು-ಮೂರು ಸಾವಿರ ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ವೃತ್ತಿಯಾಗಿದೆ. ಇಡೀ ಪ್ರಪಂಚದಲ್ಲೇ, ನಮ್ಮ ದೇಶ ವ್ಯವಸಾಯದಲ್ಲಿ ಹಿಂದುಳಿದಿದೆ. ಪ್ರಾಚೀನ ಕಾಲದಿಂದಲೂ, ನಮ್ಮ ದೇಶ ವ್ಯವಸಾಯವನ್ನೇ ಅವಲಂಬಿಸಿಕೊಂಡು ಬಂದಿದ್ದರೂ, ನಮ್ಮಷ್ಟು ನಿರ್ಗತಿಕರು ಪ್ರಪಂಚದಲ್ಲಿ ಮತ್ತಾವ ದೇಶದಲ್ಲೂ ಇಲ್ಲ. ಹೆಸರು ವ್ಯವಸಾಯ ದೇಶ. ಅದೇ ರೀತಿ ಅಸಂಖ್ಯಾತ ಜನ ವ್ಯವಸಾಯವನ್ನೇ ಮಾಡುತ್ತಿದ್ದಾರೆ. ಆದರೆ ಅವರ ಸ್ಥಿತಿ ಚಿಂತಾಜನಕವಾಗಿದೆ. ಮತ್ತು ಅವಹೇಳನಕರವಾಗಿದೆ. ಯಾವ ಸರ್ಕಾರವೇ ಇರಲಿ, ಅದಕ್ಕೆ ಒಂದು ಪರೀಕ್ಷೆಯ ಕಾಲವೆಂದರೆ, ಆ ಸರ್ಕಾರ ದೇಶದಲ್ಲಿ ವ್ಯವಸಾಯವನ್ನು ಎಷ್ಟರ-ಮಟ್ಟಿಗೆ ಮುಂದುವರೆಸಿದೆ ಎಂಬುದನ್ನು ಅಳತೆ ಮಾಡಿ ನೋಡಬೇಕಾಗಿದೆ. ಮೈಸೂರು ದೇಶ ರೈತನ ಅಭಿವೃದ್ಧಿ ಕಾರ್ಯಗಳಲ್ಲಿ ಎಷ್ಟರಮಟ್ಟಿಗೆ ತೊಡಗಿದೆಯೆಂದರೆ, ವ್ಯವಸಾಯ ಇಲಾಖೆಯಿಂದ ನಮ್ಮ ರೈತನಿಗೆ ಏನೇನೂ ಸಹಾಯವಾಗಿಲ್ಲವೆಂದು ಹೇಳಬಹುದು. ಈ ಸರ್ಕಾರದವರು ವ್ಯವಸಾಯ ಇಲಾಖೆ,

(ಶ್ರೀ ಎಸ್. ಶಿವಪ್ಪ)

ವ್ಯವಸಾಯ ಕಾಲೇಜು, ಮತ್ತು ವ್ಯವಸಾಯ ಶಾಖೆಗಳು ಚೆನ್ನಾಗಿ ಕೆಲಸಮಾಡುತ್ತಿವೆಯೆಂದು ಹೇಳಬಹುದು. ನಮ್ಮ ದೇಶದಲ್ಲಿ ವ್ಯವಸಾಯ ಶಾಸ್ತ್ರ ಮತ್ತು ವ್ಯವಸಾಯದ ಇಲಾಖೆಯಿಂದ ಅನ್ನದ ಉತ್ಪತ್ತಿಗೆ, ಅಹಾರವನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗಿದೆಯೆ ಎಂದು ನಾನಾದರೂ ಕೇಳುತ್ತೇನೆ. ಒಂದು ಎಲೆ ಬಿಡುವ ಕಡೆ ಎರಡು ಎಲೆ ಬಿಡುವಂತೆ, ಒಂದು ಕಾಳು ಬೆಳೆಯುವ ಕಡೆ ಎರಡು ಕಾಳು ಹೇಗೆ ಬೆಳೆಯಬೇಕು ಎಂಬುದನ್ನು ಶಾಸ್ತ್ರಜ್ಞರು ಲ್ಯಾಬರೇಟರಿಯ ಜ್ಞಾನವಿಜ್ಞಾನ ಮಂದಿರದ ಮೂಲಕ ಯಾವ ರೀತಿ ರೈತನಿಗೆ ಪ್ರಸಾರ ಮಾಡಿದ್ದಾರೆ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ನಮ್ಮ ವ್ಯವಸಾಯ ತಾಂತ್ರಿಕ ಶಾಸ್ತ್ರ ಏನಿದೆ ಅದು ಕೇವಲ ವಿಜ್ಞಾನ ಮಂದಿರದಲ್ಲಿ ಇದೆಯೇ ಹೊರತು, ರೈತನ ಕಡೆಗೆ ಇನ್ನೂ ಪ್ರಸಾರವಾಗಿಲ್ಲ. ಇವತ್ತು ರೈತನು ಎಷ್ಟರಮಟ್ಟಿಗೆ ಉತ್ತಮವಾಗಬೇಕು ಎನ್ನುವುದನ್ನು ವ್ಯವಸಾಯ ಪರಿಶೋಧನ ಮಂದಿರಗಳು ರೀಸರ್ಚ್‌ಮಾಡಿ, ಅದಕ್ಕೆ ಒಂದು ಔಷಧವನ್ನು ಇವತ್ತಿನವರೆಗೂ ಕಂಡುಹಿಡಿದಿಲ್ಲ. ಶಾಸ್ತ್ರದ ಮಂದಿರಗಳಲ್ಲಿ ಪರಿಣತರುಗಳು ಕುಳಿತಿದ್ದಾರೆ. ವ್ಯವಸಾಯದ ಪರಿಶೋಧನೆಯಲ್ಲಿ ತೊಡಗಿರತಕ್ಕಂಥ ಪರಿಣಿತರುಗಳಲ್ಲಿ ಎಷ್ಟು ಜನ ಹೊಲಗದ್ದೆಗಳಲ್ಲಿ ತಮ್ಮ ಹ್ಯಾಟ್ ಬೂಟ್‌ಗಳನ್ನು ಕಳಚಿ ಕಾಕಿ ಜುಬ್ಬ, ಕಾಕಿ ಚಡ್ಡಿ ಧರಿಸಿ ಕೆಲಸ ಮಾಡಿದ್ದಾರೆ?

ತಾಂತ್ರಿಕ ಪರೀಕ್ಷೆ ಮಾಡಿದವರು ಹೊಲಗದ್ದೆಗಳಿಗೆ ಹೋಗಬೇಕು. ಅವರು ಸ್ವತಃ ಕೆಲಸ ಮಾಡಬೇಕು. ಆದರಿಂದ ದೇಶದ ವ್ಯವಸಾಯ ಅಭಿವೃದ್ಧಿ ಆಗಬೇಕಾಗಿದೆ. ಬರಿಯ ಜ್ಞಾನ ಮಾತ್ರದಿಂದಲೇ ವ್ಯವಸಾಯ ಅಭಿವೃದ್ಧಿ ಆಗುವುದಿಲ್ಲ. ಯಾವ ದೇಶಗಳಲ್ಲಿ ವ್ಯವಸಾಯದಲ್ಲಿ ಹಿಂದುಳಿದಿದ್ದಾರೋ ಯಾವ ದೇಶ ಪರದೇಶದಿಂದ ಆಹಾರವನ್ನು ಆಮದು ಮಾಡಿಕೊಂಡು ಜೀವನ ಮಾಡುತ್ತಿದ್ದಾರೋ, ಅಂತಹ ದೇಶಗಳು ವ್ಯವಸಾಯದಲ್ಲಿ ಈಗ ಮುಂದುವರಿದುಬಿಟ್ಟಿವೆ. ಅಲ್ಲಿನವರು ವಿಜ್ಞಾನವನ್ನು ಅಳವಡಿಸಿಕೊಂಡು ಅದರಿಂದ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಿದ್ದಾರೆ. ಯಾವ ದೇಶ ಪರಾವಲಂಬಿಗಳಾಗಿದ್ದವೋ ಅವು ಸ್ವಂತ ಉಪಯೋಗಕ್ಕೆ ಬೇಕಾದ ಆಹಾರವನ್ನು ಬೆಳೆದು ಪರದೇಶಕ್ಕೂ ರಫ್ತು ಮಾಡತಕ್ಕ ಶಕ್ತಿಯನ್ನು ಬೆಳೆಸಿಕೊಂಡಿವೆ. ನಮ್ಮ ದೇಶ ವ್ಯವಸಾಯದ ದೇಶ. ವ್ಯವಸಾಯದ ಕಸಬಿನಲ್ಲಿ ಶೇಕಡ 70 ರಷ್ಟು ಜನ ನಿರತರಾಗಿರುವವರು ನಮಗೆ ಬೇಕಾದ ಆಹಾರವನ್ನು ಪರದೇಶದಿಂದ ಭಿಕ್ಷೆ ಬೇಡಿ ತರತಕ್ಕ ಪರಿಸ್ಥಿತಿಗೆ ಬಂದಿದ್ದೇವೆ. ಇದು ಎಂತಹ ಅವಹೇಳನಕಾರವಾದ ವಿಷಯ! ವ್ಯವಸಾಯದಲ್ಲಿ ತ ರ ಬೇ ತಾ ದ ಮತ್ತು ವ್ಯವಸಾಯ ವೃತ್ತಿಯೇ ರಕ್ತಗತವಾಗಿರತಕ್ಕ ಜನ ಇದ್ದಾರೆ. ಅವರಿಗೆ ಸಾಕಷ್ಟು ಸಹಾಯ ಇಲ್ಲ, ಸಾಕಷ್ಟು ಸವಲತ್ತುಗಳು ದೊರಕಿಲ್ಲ. ವ್ಯವಸಾಯ ಮಾಡತಕ್ಕ ಜನಗಳಿಗೆ ಏನೂ ಸಹಾಯ ದೊರೆತಿಲ್ಲ. ಆದುದರಿಂದ ವ್ಯವಸಾಯದ ಅಭಿವೃದ್ಧಿ ಎಷ್ಟು ವೇಗದಲ್ಲಿ ಹೋಗಬೇಕಾಗಿತ್ತೋ ಅಷ್ಟು ವೇಗದಲ್ಲಿ ಹೋಗಲಿಲ್ಲ. ವ್ಯವಸಾಯ ಕುಂಟುತ್ತಾ ಓಬೀರಾಯನ ಕಾಲದ ಕಂದಾಚಾರದ ಪದ್ಧತಿ ಅವಲಂಬನೆ ಮಾಡುತ್ತಾ ಇರುವುದರಿಂದ ಅದು ಮುಂದುವರಿಯುವುದಕ್ಕೆ ಸಾಧ್ಯ ಆಗಿಲ್ಲ. ನಮ್ಮ ದೇಶದಲ್ಲಿ ದಿನೇದಿನೇ ಜನಸಂಖ್ಯೆ ಒಂದೇ ಸಮನಾಗಿ ಏರುತ್ತಾ ಇದೆ. 77·78 ಲಕ್ಷ ಜನ ಕೂಲಿಗಾರರು ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಅಂದರೆ ದೇಶದ ವರ್ಕಿಂಗ್ ಫೋರ್ಸಸ್ ಏನು ಇದ್ದಾರೆ, ಅದರಲ್ಲಿ 77.78 ಲಕ್ಷ ಜನ ಈ ವೃತ್ತಿಯಲ್ಲಿ ತೊಡಗಿದ್ದಾರೆ. ದೇಶದ ಸಂಪತ್ತು ಏನು ಇದೆ, ಅದರಲ್ಲಿ 360 ಕೋಟಿ ರೂಪಾಯಿಯಷ್ಟು ಉತ್ಪಾದನೆ ವ್ಯವಸಾಯದ ಬಾಬಿನಿಂದ ಬರುತ್ತಾ ಇದೆ. ನಮ್ಮ ನ್ಯಾಷನಲ್ ಇನ್‌ಕಂನಲ್ಲಿ ಸುಮಾರು ಸೇಕಡ 50ರಷ್ಟು ವ್ಯವಸಾಯದಿಂದ ಬರುತ್ತಾ ಇದೆ. ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಸುಮಾರು 2½ ಕೋಟಿ ಎಕರೆ ಇದೆ ಎಂದರೆ ತಲಾ ಒಂದಕ್ಕೆ 1·2 ಎಕರೆಯಷ್ಟು ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ನಮ್ಮ ದೇಶದಲ್ಲಿ ಇದೆ. ಮೈಸೂರು ದೇಶ ಕೆಲವು ಬೆಳೆಗಳ ವಿಚಾರದಲ್ಲಿ ಎಂದರೆ ರಾಗಿ, ಕಾಫಿ ಮತ್ತು ಏಲಕ್ಕಿ ಬೆಳೆ ಆಗತಕ್ಕದ್ದರಲ್ಲಿ ಇಂಡಿಯಾ ದೇಶದಲ್ಲಿ ಮೊದಲನೆಯದು, ಮತ್ತು ತೆಂಗು, ಅಡಿಕೆ ಬೆಳೆಯುವುದರಲ್ಲಿ ಎರಡನೆಯದು. ಕೆಲವು ಬೆಳೆಗಳಲ್ಲಿ ಮೈಸೂರು ದೇಶ ಇಂಡಿಯಾ ದೇಶದಲ್ಲಿ ಪ್ರಖ್ಯಾತಿಯಾದ ಸ್ಥಾನವನ್ನು ಗಳಿಸಿಕೊಂಡಿರತಕ್ಕ ದೇಶ. ಮೈಸೂರು ದೇಶದಲ್ಲಿ ಇವೊತ್ತಿನ ದಿವಸ ಎಷ್ಟು ಕಡಿಮೆ ದರ್ಜೆಯಲ್ಲಿ ಗ್ರಾಸ್ ಪ್ರಾಫಿಟ್ ಇದೆಯೆಂದರೆ ಒಂದು ಎಕರೆಗೆ ಸುಮಾರು 160 ರೂಪಾಯಿ ಗ್ರಾಸ್ ಪ್ರಾಫಿಟ್ ಇದೆ. ನಮ್ಮ ಮೈಸೂರು ದೇಶದ್ದು ಇಂಡಿಯಾ ದೇಶಕ್ಕೆ ಹೋಲಿಸಿಕೊಂಡರೆ 27 ರೂಪಾಯಿ ಕಡಿಮೆ ಇದೆ. ಇಂಡಿಯಾ ದೇಶದ ಸರಾಸರಿ 187 ಇದೆ. ಅದಕ್ಕೆ ಏನು ಕಾರಣ ಎಂದರೆ ಮೈಸೂರು ರಾಜ್ಯದಲ್ಲಿ ನೀರಾವರಿ ಸವಲತ್ತುಗಳು ಇಲ್ಲ. ಯಾವಾಗಲೂ ಕೂಡ ಬರಗಾಲಕ್ಕೆ ತುತ್ತಾಗಿರತಕ್ಕ ರಾಜ್ಯ. ನೀರಾವರಿ ನಮ್ಮ ದೇಶದಲ್ಲಿ 100ಕ್ಕೆ 8ರಷ್ಟು ಮಾತ್ರ ಇದೆ. ಇಂಡಿಯಾ ದೇಶದ ಸರಾಸರಿ ತೆಗೆದು

ಕೊಂಡರೆ ಅದು ಸುಮಾರು 18ರಷ್ಟು ಇದೆ. ನೆರೆಹೊರೆಯ ಪ್ರಾಂತಕ್ಕೆ ಹೋಲಿಸಿದರೆ; ನಮ್ಮದು ಬಹಳ ಕಡಿಮೆ ಇದೆ. ಆಂಧ್ರದಲ್ಲಿ ಶೇಕಡ 35–40 ಇದೆ. ಮದ್ರಾಸ್‌ನಲ್ಲಿ 30ರಷ್ಟು ಇದೆ. ಹೀಗೆ ನೀರಾವರಿ ಉಪಯೋಗ ಪಡೆಯುವ ರಾಜ್ಯಗಳಲ್ಲಿ ಮೈಸೂರು ಕಡೆಯದಾಗಿದೆ. ಹೀಗೆ ಮೈಸೂರು ರಾಜ್ಯದಲ್ಲಿ ನೀರಾವರಿಯಿಂದ ಹೆಚ್ಚು ಬೆಳೆಯನ್ನು ತೆಗೆದುಕೊಳ್ಳುವ ಪ್ರದೇಶ ಬಹಳ ಕಡಿಮೆ ಇದೆ. ಇಂಡಿಯಾ ದೇಶದಲ್ಲಿ ವರ್ಷಕ್ಕೆ ಒಂದು ಬೆಳೆಗಿಂತ ಹೆಚ್ಚು ಎಂದರೆ ಎರಡು ಮೂರು ಬೆಳೆಯನ್ನು ಬೆಳೆಯತಕ್ಕ ಪ್ರದೇಶ ಸರಾಸರಿ ಸುಮಾರು 15ರಷ್ಟು ಇದೆ. ಮೈಸೂರಿಗೆ ಹೋಲಿಸಿದರೆ, ನಮ್ಮ ರಾಜ್ಯದಲ್ಲಿ ಎರಡನೆ ಬೆಳೆ, ಮೂರನೇ ಬೆಳೆ ಬೆಳೆಯತಕ್ಕ ಪ್ರದೇಶ ಶೇಕಡಾ 3.5 ಇದೆ. ನಮ್ಮ ರಾಜ್ಯ ಅಂತಹ ಬಡತನದ ದೇಶ, ಇಷ್ಟು ನೀರಾವರಿ ಅಭಾವದಿಂದ ನಮ್ಮ ರಾಜ್ಯ ಕೆಳಗ್ಗೆ ಹೋಗಿದೆ. ಗೊಬ್ಬರ ಕೆಮಿಕಲ್ ಫರ್ಟಿಲೈಸರ್ಸ್ ಹೆಚ್ಚಿಗೆ ಉಪಯೋಗಿಸಬೇಕಾದರೆ ನೀರಾವರಿ ಬೇಕು. ನೀರಾವರಿ ಎಷ್ಟು ಹೆಚ್ಚಾಗಿದ್ದರೆ ಅಷ್ಟು ಗೊಬ್ಬರವನ್ನು ಹಾಕಿ ಫಸಲನ್ನು ತೆಗೆಯಬಹುದು. ನೀರು ಇಲ್ಲದೇ ಹೋದರೆ ಫರ್ಟಿಲೈಸರ್ಸ್ ಎಷ್ಟು ಹಾಕಿದರೂ ಅದು ಭೂಮಿಯನ್ನು ಸುಟ್ಟು ಹಾಕುತ್ತದೆ. ಭೂಮಿಯಿಂದ ಉತ್ಪಾದನೆ ಜಾಸ್ತಿ ಮಾಡಬೇಕಾದರೆ ಹೆಚ್ಚು ಫರ್ಟಿಲೈಸರ್ಸ್ ಉಪಯೋಗಿಸುವ ಶಕ್ತಿ ಬರಬೇಕು. ಆ ಶಕ್ತಿ ಬರಬೇಕಾದರೆ ಅದಕ್ಕೆ ಹೆಚ್ಚಿನ ನೀರು ಬೇಕಾಗುತ್ತದೆ. ಹೆಚ್ಚಿನ ನೀರಿನ ಅನುಕೂಲ ಪಡೆಯದೇ ಹೋದರೆ ಸಾಕಷ್ಟು ಪರಿಣಾಮಕಾರಿಯಾದ ರೀತಿಯಲ್ಲಿ ಬೆಳೆ ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. $2\frac{1}{2}$ ಕೋಟಿ ಎಕರೆ ಭೂಮಿ ಮೈಸೂರು ಪ್ರಾಂತ್ಯದಲ್ಲಿ ಇದೆ. $2\frac{1}{2}$ ಕೋಟಿ ಎಕರೆ ಇರತಕ್ಕ ಮೈಸೂರು ರಾಜ್ಯದಲ್ಲಿ ಆಹಾರದ ಕೊರತೆ ಇರುವುದು ಕೇವಲ 4–5 ಲಕ್ಷ ಟನ್‌ಗಳು. 48 ಲಕ್ಷ ಟನ್ ಆಹಾರ ಬೇಕಾಗುವಾಗ, 43–44 ಲಕ್ಷ ಟನ್ ಬೆಳೆಯುತ್ತಾ ಇದ್ದೇವೆ. ಹೀಗಿರುವಾಗ ಮೈಸೂರು ರಾಜ್ಯದಲ್ಲಿ ಕೇವಲ 5–6 ಲಕ್ಷ ಟನ್ ಹೆಚ್ಚಿಗೆ ಬೆಳೆಯುವುದು ದೊಡ್ಡದಲ್ಲ. 4–5 ಲಕ್ಷ ಟನ್ ಆಹಾರವನ್ನು ಮನಸ್ಸು ಮಾಡಿದರೆ, ಒಂದೆರಡು ವರ್ಷಗಳಲ್ಲಿಯೇ ಬೆಳೆದು ಡಿಫಿಸಿಟ್ ಇಲ್ಲದಂತೆ ಮಾಡಬಹುದು. ಆಹಾರದ ಕೊರತೆ ಇರುವುದಕ್ಕೆ ಕಾರಣ ವ್ಯವಸಾಯವನ್ನು ಅಲಕ್ಷ್ಯ ಮಾಡಿದ್ದೀರಿ. ಬೇರೆ ಕೈಗಾರಿಕೆಗಳಲ್ಲಿ ಮತ್ತು ಕಸಬುಗಳಲ್ಲಿ ನಿರತರಾಗಿರುವ ಜನರಿಗೆ ಕೊಡುವಷ್ಟೇ ಉತ್ತೇಜನ, ವ್ಯವಸಾಯದ ವೃತ್ತಿಯಲ್ಲಿ ನಿರತರಾಗಿರುವವರಿಗೆ ಕೊಡುತ್ತಾ ಇಲ್ಲ. ಸಮಾಜದಲ್ಲಿ ಯಾವ ವೃತ್ತಿಯೂ ಸಿಕ್ಕದೇ ಇದ್ದರೆ, ಕೊನೆಯ ವೃತ್ತಿಯು ಹೊಲ ಉಳುವುದು ಆಗಿದೆ. ಇವೊತ್ತು ವಿದ್ಯಾವಂತರಾದರೆ ಕೆಲಸಕ್ಕೆ ಹೋಗಿ ಸಮಾಜದಲ್ಲಿ ಒಳ್ಳೆಯ ಸ್ಥಾನ ಪಡೆದಿರುತ್ತಾರೆ. ಕೈಗಾರಿಕಾ ಕೆಲಸಕ್ಕೆ ಹೋಗುವವರು ಸಮಾಜದಲ್ಲಿ ಹೆಚ್ಚು ಮರ್ಯಾದೆಯನ್ನು ಪಡೆಯುವುದಲ್ಲದೆ ಹೆಚ್ಚು ಸಂಪಾದನೆಯನ್ನೂ ಕೂಡ ಮಾಡುತ್ತಾರೆ. ಒಂದು ಮನೆಯಲ್ಲಿ ಮಗ ಸ್ಕೂಲಿಗೆ ಹೋಗಿ ಎಸ್.ಎಸ್.ಎಲ್.ಸಿ. ಓದಿದ ಮೇಲೆ ಅವನು ಓದು ಮಗನಾಗುತ್ತಾನೆ, ಆಮೇಲೆ ವ್ಯವಸಾಯಕ್ಕೆ ಹೋಗುವುದಿಲ್ಲ. ಹೊಲದ ಹತ್ತಿರ ಹೋಗುವುದು ಎಂದರೆ ಅವನಿಗೆ ಅಪಮಾನ. ವ್ಯವಸಾಯ ಮಾಡುವವರು ಕೊಳಕು ಬಟ್ಟೆ ಹಾಕಿರುವವರು, ವಿದ್ಯೆ ಬಾರದೆ ಇರುವವರು. ಇವೊತ್ತು ಈ ವೃತ್ತಿಗೆ ಸಾಕಷ್ಟು ಸಮಾಜದಲ್ಲಿ ಮರ್ಯಾದೆ ಇಲ್ಲದಂತಾಗಿದೆ. ಆದುದರಿಂದ ವಿದ್ಯಾವಂತರೂ ಕೂಡ ವ್ಯವಸಾಯಕ್ಕೆ ಹೋಗಬೇಕು ಎಂದರೆ ಇದು ಬಹಳ ಕಡಿಮೆ ದರ್ಜೆಯ ವೃತ್ತಿ ಆಗಿದೆ. ಏತಕ್ಕೆ ಹೋಗಬೇಕು, ಎಂದು ಹಿಂದೆ ಮುಂದೆ ನೋಡತಕ್ಕದ್ದು ಸ್ವಾಭಾವಿಕವಾಗಿ ಬಂದಿರತಕ್ಕ ಪದ್ಧತಿ ಆಗಿದೆ. ಅದು ಹೋಗಬೇಕು. ಇಂಗ್ಲೆಂಡ್, ಅಮೇರಿಕಾಗಳಲ್ಲಿ ಫಾರ್ಮರ್ ಎಂದರೆ ಎಲ್ಲರಿಗಿಂತಲೂ ಸಮಾಜದಲ್ಲಿ ಅವನಿಗೆ ಗೌರವ ಹೆಚ್ಚು. ಅವನು ಮೋಟಾರ ಕಾರ್ ಇಟ್ಟುಕೊಂಡಿರುತ್ತಾನೆ; ಬಂಗಲೆ ಇಟ್ಟುಕೊಂಡಿರುತ್ತಾನೆ, ವಿದ್ಯಾವಂತನಾಗಿರುತ್ತಾನೆ. ಫಾರ್ಮರ್ ಆಗಬೇಕು ಎಂದು ಅಮೇರಿಕಾ ದೇಶದಲ್ಲಿ ನಿವೃತ್ತಿ ಹೊಂದಿದ ಅಧ್ಯಕ್ಷರು ಆಸೆಪಡುತ್ತಾರೆ. I will go to a farm, ಎಂದು ಹೇಳುತ್ತಾರೆ. ಅಲ್ಲಿ ವ್ಯವಸಾಯಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದಾರೆ, ಮರ್ಯಾದೆ ಕೊಟ್ಟಿದ್ದಾರೆ. ದೊಡ್ಡವರೂ ಕೂಡ ಆ ಕೆಲಸಕ್ಕೆ ಹೋಗುತ್ತಾರೆ. ವ್ಯವಸಾಯ ಎಂದರೆ ಇಲ್ಲಿ ಬೇರೆ ಯಾವ ವೃತ್ತಿಯೂ ಸಿಕ್ಕದೇ ಇರುವವರು ಹೋಗುತ್ತಾರೆ. ನಮ್ಮ ಮಗನಿಗೆ ಬುದ್ಧಿ ಇಲ್ಲ, ಅವನು ವ್ಯವಸಾಯಕ್ಕೆ ಹೋಗಿದ್ದಾನೆ. ಕೆಲಸಕ್ಕೆ ಹೋಗಿಲ್ಲ ಎಂದು ಹೇಳುತ್ತಾರೆ. ಈ ಮನೋಭಾವ ಹೋಗಬೇಕು. ವ್ಯವಸಾಯ ಇವೊತ್ತು ಆಕರ್ಷಣೀಯವಾಗಬೇಕು. ಹಳ್ಳಿಯ ಜೀವನ ಆಕರ್ಷಣೀಯವಾಗಬೇಕು. ವಿದ್ಯಾವಂತರು ಎಲ್ಲರೂ ಇದು ಒಂದು ಜೀವನದ ಮಾರ್ಗ ಎಂದು ತಿಳಿದುಕೊಂಡು ಕೆಲಸಕ್ಕೆ ಬರುವಂತೆ ಮಾಡಬೇಕು. ಇದನ್ನು ಆಕರ್ಷಣೀಯವಾಗಿ ಮಾಡಬೇಕು. ಇದು ಆಕರ್ಷಣೀಯವಾಗಬೇಕಾದರೆ ಜೀವನಕ್ಕೂ ಮತ್ತು ವ್ಯವಸಾಯಕ್ಕೂ ಒಂದು ನಿಕಟ ಸಂಬಂಧ ಇರಬೇಕು. ಹಳ್ಳಿಯ ಜೀವನ ಆಕರ್ಷಣೀಯವಾಗಿ ಇರಬೇಕಾದರೆ, ವ್ಯವಸಾಯಕ್ಕೆ ಆಧುನಿಕ ಉಪಕರಣಗಳನ್ನು ಉಪಯೋಗಿಸಿಕೊಂಡು ಬೆಳೆಯತಕ್ಕ ಪದ್ಧತಿಯನ್ನು ಅನುಸರಿಸಬೇಕಾಗುತ್ತದೆ.

(ಶ್ರೀ ಎಚ್. ಶಿವಪ್ಪ)

2-30 P.M.

ಇವತ್ತು ದೇಶದಲ್ಲಿ ವ್ಯವಸಾಯವನ್ನು ಚೆನ್ನಾಗಿ ಫಲಕಾರಿಯಾಗಿ ಮಾಡಬೇಕಾದರೆ, ಕನಿಷ್ಠ ಪಕ್ಷ ಒಂದು ಎಕರೆಗೆ ಸಾವಿರ ರೂಪಾಯಿಯನ್ನಾದರೂ ಖರ್ಚು ಮಾಡಬೇಕು. ಆದ್ದರಿಂದ ವ್ಯವಸಾಯವನ್ನು ಮಾಡಬೇಕಾದರೆ, ಅದಕ್ಕೆ ಮುಖ್ಯವಾಗಿ ದುಡ್ಡು ಬೇಕಾಗುತ್ತದೆ. ಒಂದು ಎಕರೆಗೆ ಒಂದು ಸಾವಿರದಷ್ಟು ಖರ್ಚು ಮಾಡಿದರೆ, ಬಹುಶಃ ಅದರಿಂದ ಫಲದಾಯಕವಾದ ಬೆಳೆಯನ್ನು ತೆಗೆಯಬಹುದು. ಹಾಗಿಲ್ಲದೆ, ಬರೆ ಮಳೆ ಬರುತ್ತದೆ, ಎಂದು ವ್ಯವಸಾಯ ಮಾಡಿದರೆ ಅದರಿಂದ ಏನೂ ಅಷ್ಟೊಂದು ಫಲದಾಯಕವಾದ ಪ್ರಯೋಜನವಾಗಲಾರದು. ಆದ್ದರಿಂದ ಇವತ್ತು ರೈತನಿಗೆ ವ್ಯವಸಾಯದಲ್ಲಿ ಏನು ತೊಂದರೆಗಳು ಇವೆ, ಅವನಿಗೆ ಏನು ಹಣದ ಅಭಾವವಿದೆ ಅದನ್ನು ನೋಡಬೇಕು. ಉದಾಹರಣೆಗೆ ನಾವು ನೋಡುವುದಾದರೆ, ಬೆಂಗಳೂರಿನ ಹತ್ತಿರ, ಇರತಕ್ಕ ಕಲ್ಲು ಜಮೀನು ಏನಿದೆ, ಅಲ್ಲಿ ಇವತ್ತಿನ ದಿವಸ ಶ್ರೀಮಂತರಾದವರು ಬೇಕಾದಷ್ಟು ಹಣವನ್ನು ಖರ್ಚು ಮಾಡಿ, ಹಣ್ಣಿನ ತೋಟಗಳನ್ನು ಮಾಡಿದ್ದಾರೆ. ಅದು ಏತಕ್ಕೆ ಅವರಿಗೆ ಮಾಡಲು ಸಾಧ್ಯವಾಯಿತು ಎಂದರೆ, ಅವರ ಹತ್ತಿರ ಹಣ ಇತ್ತು, ಅದನ್ನು ಹಾಕಿ, ಎಷ್ಟೋ ಉತ್ಪಾದನೆಯನ್ನು ತೆಗೆಯುತ್ತಾರೆ. ಅವರಿಗೆ ಶಕ್ತಿ ಇದ್ದುದರಿಂದ, ಬಾವಿಗಳನ್ನು ತೋಡಿಸಿದ್ದಾರೆ, ಪಂಪ್‌ಸೆಟ್ಟುಗಳನ್ನು ಇಟ್ಟಿದ್ದಾರೆ, ಹಾಗೂ ಇನ್ನಿತರ ಮೆಷಿನರಿಗಳನ್ನು ಇಟ್ಟಿದ್ದಾರೆ. ಇದರಿಂದ ಏನು ತಿಳಿಯುತ್ತದೆ ಎಂದರೆ, ವ್ಯವಸಾಯದಲ್ಲಿ ಆದಾಯ ಪಡೆಯಬೇಕಾದರೆ ಅದಕ್ಕೆ ಮೊದಲು ಹಣದ ಅಭಾವವಿರಬಾರದು. ಇವತ್ತು ಇಡೀ ಆಹಾರದ ಉತ್ಪತ್ತಿಯ ಮೂಲ ಇದರಲ್ಲಿ ನಿಂತಿದೆ ಎಂದು ನಾನಾದರೂ ಹೇಳುತ್ತೇನೆ. ನಾವು ಈಗ ಎಷ್ಟು ಹಣವನ್ನು ಭೂಮಿಯ ಮೇಲೆ ಹಾಕುತ್ತೇವೆಯೋ, ಅದರ 2-3ರಷ್ಟು ಸಂಪಾದನೆಯನ್ನು ಮಾಡಬಹುದು ಆದ್ದರಿಂದ ಸರ್ಕಾರದವರು ಯಾವುದೇ ಒಂದು ಯೋಜನೆಯನ್ನಾಗಲೀ ಮಾಡುವಾಗ ಅದರಲ್ಲಿ ರೈತನಿಗೆ ಪ್ರೀತಿ ಉಂಟಾಗುವಂತೆ ಮಾಡಬೇಕು. ವ್ಯವಸಾಯಗಾರನಿಗೆ, ಈ ವ್ಯವಸಾಯವೆಂಬುದು ಒಂದು ಕೈಗಾರಿಕೆಯ ತರಹವಾಗಿ ಇರಬೇಕು. ಅವನಿಗೆ ಒಂದು ಕೈಗಾರಿಕೆಯಲ್ಲಿ ಅಥವಾ ವ್ಯಾಪಾರದಲ್ಲಿ ಇರತಕ್ಕಂತಹ ಆಕರ್ಷಣೆಯು ಅದರಲ್ಲಿ ಬರಬೇಕು. ಇವತ್ತಿನದಿವಸ ವ್ಯಾಪಾರಸ್ಥರು ಶ್ರೀಮಂತರಾಗಿ, ಸುಖಮಯ ಜೀವನವನ್ನು ಉಪ್ಪರಿಗೆಯ ಮನೆಯಲ್ಲಿ ಮಾಡುತ್ತಿದ್ದಾರೆ. ಆದರೆ, ಬಡ ರೈತನು ವರ್ಷದ 365 ದಿವಸ ಕೂಡ ಕಷ್ಟಪಟ್ಟು ದುಡಿದರೆ, ಅವನಿಗೆ ಒಂದು ಸುಖಮಯ ಜೀವನವನ್ನು ಕಾಣಲಾಗುವುದಿಲ್ಲ, ಇದಕ್ಕೆ ಕಾರಣವೇನು ! ಇದಕ್ಕೆಲ್ಲಾ ಕಾರಣ, ಇಂದು ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಅಷ್ಟು ಆಕರ್ಷಣೆಯಿಲ್ಲ, ವ್ಯವಸಾಯಗಾರನೆಂದರೆ, ಅವನಿಗೆ ಅಷ್ಟೊಂದು ಮರ್ಯಾದೆ ಇಲ್ಲ. ಇಂದು ಅವನಿಗೂ, ಇನ್ನುಳಿದ ಜನರಿಗೂ ತುಂಬಾ ಅಂತರವಿದೆ. ಈ ಅಂತರವನ್ನು ಹೋಗಲಾಡಿಸಬೇಕು. ಇದಕ್ಕೆ ವ್ಯಾಪಾರದಲ್ಲಿ ಮತ್ತು ಕೈಗಾರಿಕೆಗಳಲ್ಲಿ ಎಷ್ಟು ಲಾಭ ಸಂಪಾದನೆ ಬರುತ್ತದೋ, ಅದ ವ್ಯವಸಾಯದಲ್ಲೂ ಕೂಡ ಮಾಡಿದರೆ ಬರುತ್ತದೆ ಎನ್ನುವ ಒಂದು ಭಾವನೆಯನ್ನು ದೇಶದಲ್ಲಿ ಹುಟ್ಟಿಸಬೇಕು. ಅವನಿಗೆ ವ್ಯವಸಾಯ ಮಾಡಲಿಕ್ಕೆ ಬೇಕಾದಂತಹ ಅನುಕೂಲತೆಗಳನ್ನು ಒದಗಿಸಬೇಕು. ಮತ್ತು ಅವನು ಬೆಳೆದು ತಂದ ಆಹಾರವನ್ನು ಮಾರಾಟ ಮಾಡತಕ್ಕ ಮಾರುಕಟ್ಟೆಗೂ ಇದಕ್ಕೂ ಒಂದು ಹೊಂದಾಣಿಕೆ ಇರಬೇಕು, ಇದರಿಂದ ವ್ಯವಸಾಯ ಉತ್ಪತ್ತಿಯು ಜಾಸ್ತಿಯಾಗುತ್ತದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ.

ಸ್ವಾಮಿ, ಅಧ್ಯಕ್ಷರೇ, ಈ ಮುಂದೆ ಮಂಡಿಸಿರತಕ್ಕಂತಹ ಬೇಡಿಕೆಯಲ್ಲಿ ಮುಂದಿನ ವರ್ಷದ ಅನೇಕ ಅಭಿವೃದ್ಧಿಗಳಿಗಾಗಿ ಹಣವನ್ನು ಇಟ್ಟಿದ್ದಾರೆ. ಅದರ ಮೇಲೆ ನಾನು ಒಂದೆರಡು ವಿಚಾರಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಇವತ್ತು ವ್ಯವಸಾಯಕ್ಕೆ ಬೇಕಾಗಿರತಕ್ಕದ್ದು ಮುಖ್ಯವಾಗಿ ಗೊಬ್ಬರ. ಎರಡನೆಯದು ಇವತ್ತು ನಮ್ಮ ಸಣ್ಣಪುಟ್ಟ ರೈತರಿಗೆ ಟ್ರಾಕ್ಟರ್ಸ್ ಬದಲು ಪವರ್ ಟಿಲ್ಲರ್ಸ್ ಒದಗಿಸಬೇಕು. ಈ ಪವರ್ ಟಿಲ್ಲರ್ಸ್ ಬಹಳ ಚಿಕ್ಕದಾಗಿ ಕೇವಲ ಒಂದು ಸಾವಿರ ರೂಪಾಯಿಗೆ ದೊರಕಬಹುದೆಂದು ಕಾಣುತ್ತದೆ. ಇದು ಸಣ್ಣ ಸಣ್ಣ ಹೊಲಗಳಲ್ಲಿ ಉಳುವುದಕ್ಕೆ ಯೋಗ್ಯವಾಗಿದೆ. ಇವನ್ನೆಲ್ಲಾ ಸಹಸ್ರಾರು ಸಂಖ್ಯೆಯಲ್ಲಿ ಒದಗಿಸಿ ಕೊಟ್ಟರೆ, ಅವರಿಗೆ ತುಂಬಾ ಅನುಕೂಲವಾಗುತ್ತದೆ. ಇದನ್ನು ಈಗ ದುಡ್ಡು ಕೊಟ್ಟು ತೆಗೆದುಕೊಂಡು ಹೋಗಿ ಎನ್ನುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಅದನ್ನು ಹಾಗೆ ಮಾಡದೆ ಹೈರ್ ಪರ್ಚೇಸ್ ಪದ್ಧತಿಯಲ್ಲಿ ಮಾಡಿದರೆ ಅದರಿಂದ ಸಣ್ಣಪುಟ್ಟ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಪಡೆಯುವುದಕ್ಕೆ ಅನುಕೂಲವಾಗುತ್ತದೆ; ಇದನ್ನು ಸರ್ಕಾರದವರು ಮಾಡಿ ಸಣ್ಣಪುಟ್ಟ ರೈತರಿಗೆ ಅನುಕೂಲಮಾಡಿಕೊಡಬೇಕೆಂದು ನಾನು ಈ ಸಮಯದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇವತ್ತು ಈ ಅಗ್ರಿಕಲ್ಚರಲ್ ಇಲಾಖೆಯಲ್ಲಿ,

ಇಂಜಿನಿಯರಿಂಗ್ ಡಿವಿಜನಿನಲ್ಲಿ ಅನೇಕ ಟ್ರಾಕ್ಟರ್ಸ್ ಮತ್ತು ಬುಲ್‌ಡೋಜರ್ಸ್ ಇತ್ಯಾದಿ ಮೆಷನರಿಗಳು ಇವೆ. ಇವತ್ತಿನ ದಿವಸ ಅವುಗಳಿಂದ ಏನೂ ಪ್ರಯೋಜನವಾಗಬೇಕೋ, ಅದು ಅಷ್ಟು ಮಟ್ಟಿಗೆ ಆಗುತ್ತಿಲ್ಲ. ಏಕೆಂದರೆ, ಅವುಗಳು ಅನೇಕ ಕಡೆ ಹಾಗೆಯೇ ಇವೆ. ಅವು ಹಳ್ಳಿಗಳಲ್ಲಿ ಒಂದು ಸಾರಿ ಕೆಟ್ಟುಹೋದರೆ ವರ್ಷಾನುಗಟ್ಟಲೆ ಹಾಗೆ ನಿಂತುಹೋಗುತ್ತದೆ. ಕೆಲವು ಕಡೆ ಸ್ಪೇರ್ ಪಾರ್ಟ್ಸ್ ಸಿಗುವುದಿಲ್ಲ, ಮತ್ತು ನಡೆಸತಕ್ಕ ಚಾಲಕನಿಲ್ಲದೆ ಇದೆಲ್ಲಾ ಹಾಗೇ ನಿಂತುಬಿಟ್ಟಿದೆ, ಅದು ತಪ್ಪಬೇಕು. ಇದಕ್ಕೋಸ್ಕರ, ಅವಶ್ಯಕವಾದ ಸಾಮಗ್ರಿಗಳನ್ನು ದೊರಕಿಸುವಂತೆ ಮಾಡಲು ಒಂದೊಂದು ಜಿಲ್ಲೆಯ ಕೇಂದ್ರವನ್ನು ಏರ್ಪಾಡು ಮಾಡಿ ಅದರಿಂದ ರೈತರಿಗೆ ಇದರ ಉಪಯೋಗವನ್ನು ಮಾಡಿ ಅನುಕೂಲ ಮಾಡಿಕೊಡಬೇಕು.

ಅದೇ ರೀತಿ, ಗೊಬ್ಬರ. ಇವತ್ತಿನ ದಿವಸ ಗೊಬ್ಬರವನ್ನು ಉಪಯೋಗಿಸತಕ್ಕ ಜನರು ಜಾಸ್ತಿಯಾಗಿದ್ದಾರೆ. ಇದರಿಂದಾಗಿ ಗೊಬ್ಬರಕ್ಕೆ ಹಾಹಾಕಾರ ಜಾಸ್ತಿಯಾಗಿದೆ. ಇವತ್ತು ಗೊಬ್ಬರ ಯಾರಿಗೆ ಬೇಕೋ ಅಂಥವರಿಗೆ ಸಿಗುತ್ತಾ ಇಲ್ಲ. ಇವತ್ತು ಈ ಗೊಬ್ಬರಗಳ ಬ್ಲಾಕ್ ಮಾರ್ಕೆಟಿನಿಂದಾಗಿ ವ್ಯವಸಾಯಕ್ಕೆ ಬೇಕೆಂದರೆ ಹೆಚ್ಚಾಗಿ ಸಿಗುತ್ತಾ ಇಲ್ಲ. ನಾನು ಅನೇಕ ಕಡೆ ನೋಡಿದ್ದೇನೆ, ಈ ಗೊಬ್ಬರವನ್ನು ಬ್ಲಾಕ್ ಮಾರ್ಕೆಟಿನಲ್ಲಿ ಮಾರಾಟ ಮಾಡಿ ಜೀವನ ಮಾಡುತ್ತಾರೆ. ಇವತ್ತಿನದಿವಸ ಜನರಿಗೆ ಈ ಗೊಬ್ಬರದಲ್ಲಿ ನಂಬಿಕೆ ಬಂದು ಬಹಳವಾಗಿ ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಈ ಗೊಬ್ಬರವನ್ನು ಯಾರಿಗೆ ನಿಜವಾಗಿ ಬೇಕೋ ಅವರಿಗೆ ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿ ಬೀಜಗಳನ್ನು ಬೆಳಸಬೇಕೆಂದು ಎಲ್ಲಾ ಕಡೆ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇದು ಬಹಳ ಪ್ರಾಮುಖ್ಯವಾದುದು. ಇವತ್ತು ಈ ಹೈಬ್ರಿಡ್ ಬೀಜಗಳು ಬೇಕಾದ ಕಾಲದಲ್ಲಿ ಸಿಗುತ್ತಾ ಇಲ್ಲ. ಮಳೆ ಬಂದ ಕಾಲಕ್ಕೆ ಈ ಬೀಜಗಳು ಹೆಚ್ಚಾಗಿ ಸಿಗಬೇಕು. ಕೆಲವು ಕಡೆ ಪ್ರಭಾವಶಾಲಿಗಳು ಹಳ್ಳಿಗಳಲ್ಲಿ ಅವರವರ ಜಮೀನುಗಳಲ್ಲಿ ಬೆಳೆಸುತ್ತಿದ್ದ ಬೀಜವನ್ನು ಅಗ್ರಿಕಲ್ಚರಲ್ ಇಲಾಖೆಗೆ ಕೊಟ್ಟುಬಿಡುತ್ತಾರೆ. ಅವರು ಉಳಿದವರಿಗೆ ಮಾರುತ್ತಾರೆ. ಇದು ಹಾಗಾಗಬಾರದು. ಇದು ತಪ್ಪಬೇಕು. ನಿಜವಾಗಿ ಯಾವುದು ಒಳ್ಳೆಯದೋ, ಅದನ್ನು ಸರ್ಕಾರದವರು ನೇರವಾಗಿ ಫಾರ್ಮುಗಳಲ್ಲಿ ತಯಾರಿಸಬೇಕು. ಆಗ ಅದರಿಂದ ಅನೇಕ ಜನರಿಗೆ ಅನುಕೂಲವಾಗುತ್ತದೆ. ಇದರಿಂದ ಸರ್ಕಾರದವರು ರೈತರಿಗೆ ಒಂದು ಸೌಲಭ್ಯವನ್ನು ಒದಗಿಸದಂತಾಗುತ್ತದೆಂದು ನಾನಾದರೂ ಹೇಳುತ್ತೇನೆ.

ಕೊನೆಯದಾಗಿ, ವ್ಯವಸಾಯ ಸಂಶೋಧನೆಯ ವಿಚಾರ. ಅದರ ಮೇಲೆ ನಾನು ಟೀಕೆ ಮಾಡಬೇಕೆಂದು ಹೇಳುತ್ತಾ ಇಲ್ಲ. ಈ ಒಂದು ಸಂಶೋಧನಾ ಕೇಂದ್ರವು ನಾಲ್ಕು ಗೋಡೆಗಳ ಮಧ್ಯ ಇದೆಯೇ ಹೊರತು ಬೇರೇನೂ ಇಲ್ಲ. ಇದು ಒಂದು ದೇವರ ಮಂದಿರದ ಹಾಗೆ ಇದೆಯೇ ಹೊರತು, ಹಳ್ಳಿಹಳ್ಳಿಗಳಿಗೆ ಇದರಿಂದ ಏನೊಂದು ಪ್ರಸಾರವಾಗತಕ್ಕ ಕೆಲಸ ಪರಿಣಾಮವಾಗಿ ಆಗುತ್ತಾ ಇಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮೈಸೂರು ರಾಜ್ಯದಲ್ಲಿ ವ್ಯವಸಾಯ ಇಲಾಖೆಯನ್ನು ಹೊಸ ರೀತಿಯಲ್ಲಿ ಮಾಡಬೇಕೆಂದು ಒಂದು ಅಭಿಲಾಷೆಯನ್ನು ಡಾ. ಕೋಲ್‌ಮೇನ್ ಇಟ್ಟಿದ್ದರು. ಆದರೆ ಇವತ್ತಿನ ದಿವಸ ಆ ರೀತಿಯಾಗದೆ ದಿಕ್ಕೇ ಇಲ್ಲದಂತಾಗಿದೆ. ನಾವು ಎಷ್ಟು ಬೆಳೆಯಬೇಕೋ ಅಷ್ಟನ್ನು ಬೆಳೆಯಲಿಕ್ಕಾಗದೆ ಒಂದು ಚಳಿ ಹಿಡಿದ ಹಾಗೆ ಇದೆ. ಈ ಚಳಿಯನ್ನು ಬಿಡಿಸಬೇಕು. ಇವತ್ತು ಅಧಿಕಾರಿಗಳಿಗೆ, ಹಳ್ಳಿಗೆ ಹೋಗಿ ಖಾಕಿ ಬಟ್ಟೆಯನ್ನು ಹಾಕಿ ರೈತರೊಡನೆ ಸಹಕಾರದಿಂದ ವರ್ತಿಸುವ ಮನೋಭಾವ ಬರಬೇಕು. ಅಧಿಕಾರಿಗಳು ರೈತರ ಮಧ್ಯೆ ನಿಂತು ಸಂಶೋಧನೆಯಿಂದ ಯಾವ ರೀತಿ ಪ್ರಯೋಜನವಾಗುತ್ತದೆ ಎಂಬುದನ್ನು ಅವನಿಗೆ ಅದರಲ್ಲಿ ನಂಬಿಕೆ ಬರುವಂತೆ ತೋರಿಸಿದರೆ ಮಾತ್ರ ಅವನು ಅದರಿಂದ ಜ್ಞಾನವನ್ನು ಪಡೆದು ಖಂಡಿತವಾಗಿಯೂ ಚೆನ್ನಾಗಿ ಬೆಳೆಯಲು ಅನುಕೂಲವಾಗುವುದು ಆ ದೃಷ್ಟಿಯನ್ನು ಇಟ್ಟುಕೊಂಡು ವ್ಯವಸಾಯ ಇಲಾಖೆಯವರು ಹೆಚ್ಚಿನ ಪ್ರೋತ್ಸಾಹ ಕೊಟ್ಟು ಒಂದು ಉತ್ಸಾಹ ರೈತರಲ್ಲಿ ಬೆಳೆಯುವಂತೆ ಮಾಡಬೇಕು, ಇಲ್ಲದೆ ಹೋದರೆ ನಾವು ಎಷ್ಟು ಕೋಟಿ ರೂಪಾಯಿಯನ್ನು ಖರ್ಚು ಮಾಡಿದರೂ ಕೂಡ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ನಾನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಕೊನೆಯದಾಗಿ ನಾನು ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈಗ ಆಹಾರದ ಕೊರತೆ ಇರತಕ್ಕ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಪ್ರತಿ ಎಕರೆಯಲ್ಲಿ ಬರುವ ಉತ್ಪತ್ತಿ ಬಹಳ ಕಡಿಮೆ ಇದೆ. ಇಂಡಿಯಾ ದೇಶದಲ್ಲಿ ಎಲ್ಲರಿಗಿಂತಲೂ ಬಹಳ ಕಡಮೆ ಪ್ರಮಾಣದಲ್ಲಿ ಮೈಸೂರು ರಾಜ್ಯದಲ್ಲಿ ಉತ್ಪತ್ತಿ ಇದೆ. ವ್ಯವಸಾಯವು ಆಕರ್ಷಣೀಯವಾಗಿಲ್ಲದೆ ಇರುವುದರಿಂದ ಅದನ್ನು ಅವಲಂಬನೆ ಮಾಡುವುದಕ್ಕೆ ಜನ ಹಿಂಜರಿಯುತ್ತಾರೆ. ಮೈಸೂರು ಪ್ರಾಂತದಲ್ಲಿ ವ್ಯವಸಾಯವನ್ನು ಆಕರ್ಷಣೀಯವಾಗಿ ಮಾಡಬೇಕಾದರೆ ಅವನು ಬೆಳೆಯತಕ್ಕ ವ್ಯವಸಾಯದ ಕ್ಷೇತ್ರದಲ್ಲಿ ಸರ್ಕಾರ

(ಶ್ರೀ ಎಸ್. ಶಿವಪ್ಪ)

ಎಲ್ಲ ಸಹಾಯವನ್ನೂ ಮಾಡಿ ವ್ಯವಸಾಯ ಹೆಚ್ಚು ಆಕರ್ಷಣೀಯವಾಗುವಂತೆ, ಹೆಚ್ಚು ಬೆಳೆ ಬೆಳೆಯುವಂತೆ ಮಾಡಬೇಕು. ಈಗ ಪರದೇಶಗಳಿಗೆ ಗೋಧಿ, ಅಕ್ಕಿ ಇವುಗಳಿಗಾಗಿ ಯಾಚನೆಗೆ ಹೋಗುತ್ತಿದ್ದೇವೆ. ಇದಕ್ಕೆ 100—200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಈ ಹಣವನ್ನು ನಮ್ಮ ದೇಶದಲ್ಲಿಯೇ ಉಪಯೋಗಿಸಿದರೆ ಹೆಚ್ಚು ಬೆಳೆಯನ್ನು ತೆಗೆಯಬಹುದು. ಮೈಸೂರು ರಾಜ್ಯಕ್ಕೆ ಐದು ಕೋಟಿ ರೂಪಾಯಿಗಳ ಹೆಚ್ಚು ಸಹಾಯವನ್ನು ವ್ಯವಸಾಯಾಭಿವೃದ್ಧಿಗೆ ಖರ್ಚು ಮಾಡಿದರೆ ಅದರಿಂದ ಪ್ರತಿವರ್ಷ 10 ಕೋಟಿ ರೂಪಾಯಿ ಬಾಳತಕ್ಕ ದವಸಧಾನ್ಯವನ್ನು ಹೆಚ್ಚು ಬೆಳೆಯಬಹುದು. ವ್ಯವಸಾಯ ಕ್ಷೇತ್ರ ಒಂದು ರಾಜಕೀಯಕ್ಷೇತ್ರವಲ್ಲ. ವ್ಯವಸಾಯ ಕ್ಷೇತ್ರ ಸಂಪತ್ತನ್ನು ಬೆಳೆಯತಕ್ಕ ಕ್ಷೇತ್ರ. ವ್ಯವಸಾಯ ಹೆಚ್ಚಿದಷ್ಟೂ ದೇಶದ ಸಂಪತ್ತು ಹೆಚ್ಚುತ್ತದೆ. ಮೈಸೂರು ರಾಜ್ಯವು ಕೈಗಾರಿಕೆಯಲ್ಲಿ ಅಭಿವೃದ್ಧಿಯಾಗಬೇಕಾಗಿದ್ದರೆ ಅದು ವ್ಯವಸಾಯದಲ್ಲಿ ಅಭಿವೃದ್ಧಿಯಾಗಬೇಕು. ವ್ಯವಸಾಯಕ್ಕೂ ಕೈಗಾರಿಕೆಗೂ ನಿಕಟವಾದ ಸಂಬಂಧವಿದೆ. ಆ ಒಂದು ದೃಷ್ಟಿಕೋಣವನ್ನು ಇಟ್ಟುಕೊಂಡು ವ್ಯವಸಾಯದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಹಣವನ್ನು ದೊರಕಿಸುವುದಲ್ಲದೆ ಇದರ ಉಪಯೋಗದ ಬೆಳಕನ್ನು ರೈತರಿಗೆ ದೊರಕಿಸುವಂಥ ಕಾರ್ಯವನ್ನು ಸರ್ಕಾರ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗಾಂಜಿ ವೀರಪ್ಪ (ಹರಿಹರ).—ಮಾನ್ಯ ಸಭಾಧ್ಯಕ್ಷರೇ, ವ್ಯವಸಾಯದ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕ ಅನೇಕ ವಿಚಾರಗಳ ಬಗ್ಗೆ ನನ್ನ ಸಮ್ಮತಿಯನ್ನು ಕೊಡುತ್ತಿದ್ದೇನೆ. ಆಹಾರದ ಕೊರತೆ ಇರತಕ್ಕ ಕಾಲದಲ್ಲಿ ನಮ್ಮ ದೇಶದಲ್ಲಿ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೋಸ್ಕರ ಏನೇನು ಪ್ರಯತ್ನ ಮಾಡಬೇಕು, ವ್ಯವಸಾಯದ ಇಲಾಖೆಯನ್ನು ಎಷ್ಟು ಅಭಿವೃದ್ಧಿ ಮಾಡಬೇಕು ಎನ್ನುವ ವಿಚಾರದಲ್ಲಿ ಅವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಈ ದಿವಸ ಅವರ ಭಾಷಣ ಬರೀ destructive ಆಗಿ ಇರದೆ ಕೆಲವು ಉಪಯುಕ್ತವಾದ ಸಲಹೆಗಳಿಂದ ಕೂಡಿದ್ದುದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ.

ಸರ್ಕಾರ ಮತ್ತು ವ್ಯವಸಾಯದ ಇಲಾಖೆ ಏನೂ ಕೆಲಸ ಮಾಡಿಲ್ಲ, ಎಷ್ಟು ಕೆಲಸ ಮಾಡಬೇಕೋ ಅಷ್ಟನ್ನು ಮಾಡಿಲ್ಲ ಎನ್ನುವ ಟೀಕೆಯನ್ನು ಅನೇಕ ಸ್ನೇಹಿತರು ಮಾಡುತ್ತಿದ್ದರು. ಈ ವ್ಯವಸಾಯ ಇಲಾಖೆಯಲ್ಲಿ ಎಷ್ಟುಮಟ್ಟಿಗೆ ಪ್ರಗತಿಯಾಗಿದೆ, ಎಷ್ಟು ಕೆಲಸವಾಗಿದೆ ಎಂದು ತಿಳಿದುಕೊಂಡು, ಇನ್ನೂ ಹೆಚ್ಚು ಕೆಲಸ ಏನು ಆಗಬೇಕು ಎಂದು ತಿಳಿಸಬೇಕಾದ್ದು ನಮ್ಮ ಕರ್ತವ್ಯ. ಹಾಗಿಲ್ಲದೆ ಸರ್ಕಾರದವರು ಈ ವ್ಯವಸಾಯದ ಅಭಿವೃದ್ಧಿಗೆ ಕೆಲಸ ಮಾಡಲಿಲ್ಲವೇನೋ ಎನ್ನುವ ಭಾವನೆ ಈ ಭಾಷಣಗಳಿಂದ ಆಗಬಾರದು ಎಂದು ತಿಳಿಸುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಸಭೆಯಲ್ಲಿ ಅನೇಕ ಸಾರಿ ವ್ಯವಸಾಯದ ಇಲಾಖೆಯ ಬಗ್ಗೆ ತೀವ್ರವಾದ ಟೀಕೆಗಳು ನಡೆದಿವೆ. ಅನೇಕ ಅಧಿಕಾರಿಗಳ ಸ್ಥಾನಗಳನ್ನು ಇಲಾಖೆಯಲ್ಲಿ ಭರ್ತಿ ಮಾಡದೆ ಇಲಾಖೆಯ ಕೆಲಸ ಕೆಟ್ಟು ಹೋಗಿದೆ ಎನ್ನುವ ಟೀಕೆಯನ್ನೂ ಕೇಳಿದ್ದೇವೆ; ಹೆಚ್ಚು ಪ್ರಗತಿಯನ್ನು ಸಾಧಿಸಿಲ್ಲ ಎನ್ನುವುದನ್ನೂ ಕೇಳುತ್ತಿದ್ದೇವೆ. ನನಗೂ ಪ್ರಾರಂಭದಲ್ಲಿ ಒಂದು ವಿಧವಾದ ಅನುಮಾನವಿತ್ತು. ಇಷ್ಟು ಮುಖ್ಯವಾದ ಇಲಾಖೆ ಏನೂ ಕೆಲಸ ಮಾಡಲಿಲ್ಲವೋ ಏನೋ ಎನ್ನುವ ಅನುಮಾನ ನನಗೂ ಇತ್ತು. ದಿವಂಗತ ಜವಹರಲಾಲ ನೆಹರೂ ಅವರು ಹೇಳುತ್ತಿದ್ದರು, ವ್ಯವಸಾಯದ ಇಲಾಖೆಯು ಮುಖ್ಯ ಮಂತ್ರಿಗಳಲ್ಲಿಯೇ ಇರಬೇಕು ಎನ್ನುವ ಸಲಹೆಯನ್ನು ಅವರು ಮಾಡುತ್ತಿದ್ದರು. ವ್ಯವಸಾಯದ ಇಲಾಖೆಯ ಪ್ರಾಮುಖ್ಯತೆ ಹೆಚ್ಚಾಗಬೇಕು, ಮುಖ್ಯ ಮಂತ್ರಿಗಳೇ ಅದರ ಪೋರ್ಟ್‌ಫೋಲಿಯೋ ತೆಗೆದುಕೊಂಡರೆ ಹೆಚ್ಚು ಸಾಧನೆಯಾಗಬಹುದು ಎಂದು ಸಲಹೆ ಮಾಡುತ್ತಿದ್ದರು. ಈ ಇಲಾಖೆಯಲ್ಲಿ ಹೆಚ್ಚಿನ ಪ್ರಗತಿ ಏತಕ್ಕಾಗಿ ಆಗಿಲ್ಲ ಎನ್ನುವುದನ್ನು ನೋಡಲು ನಾನು ಕೆಲವು ಅಂಕಿ ಅಂಶಗಳನ್ನು ಶೇಖರಣೆ ಮಾಡಿದ್ದೇನೆ. ಅದರಲ್ಲಿ ಕೆಲವು ವಿಚಾರಗಳನ್ನು ಈ ಸಭೆಗೆ ತಿಳಿಸುವುದು ಅಗತ್ಯವೆಂದು ನಾನು ತಿಳಿದುಕೊಂಡಿದ್ದೇನೆ.

ಆಹಾರದ ಉತ್ಪಾದನೆಯಲ್ಲಿ 1965–66ನೆ ಇಸವಿಯಲ್ಲಿ ನಮ್ಮ ಗುರಿ ಇದ್ದುದು 2,51,750 ಟನ್. ಆದರೆ ನಮ್ಮ ನಿರೀಕ್ಷೆಗಿಂತ 1,98,900 ಟನ್ ಆಹಾರ ಧಾನ್ಯ ಕಡಮೆ ಆಯಿತು. ಬಹುಶಃ ನಮಗೆಲ್ಲ ಗೊತ್ತಿರುವಂತೆ ದುರದೃಷ್ಟದಿಂದ ಎಲ್ಲ ಕಡೆಯೂ ಮಳೆಯಾಗದೆ ಹೆಚ್ಚು ಬೆಳೆ ಆಗಲಿಲ್ಲ. ಅದೂ ಒಂದು ಪ್ರಬಲವಾದ ಕಾರಣ. ಅದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಎರಡನೆಯ ಕಾರಣವೆಂದರೆ, ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ ನಮ್ಮಲ್ಲಿ ಗೊಬ್ಬರದ ಅಗತ್ಯ ಬಹಳವಿದೆ. ನಮ್ಮ ದೇಶಕ್ಕೆ ಎಷ್ಟು ಗೊಬ್ಬರ ಬೇಕು ಎಂದು ನಿರೀಕ್ಷೆ ಮಾಡಿದ್ದೆವೋ ಅಷ್ಟು ಬರಲಿಲ್ಲ. ಕೇಂದ್ರದವರು ಎಲ್ಲೆಲ್ಲಿ ಎಣ್ಣೆ ಶುದ್ಧಿ ಮಾಡುವ ಕಾರ್ಖಾನೆಗಳಿವೆಯೋ ಅಲ್ಲೆಲ್ಲಿ ಗೊಬ್ಬರದ ಕಾರ್ಖಾನೆಯನ್ನು ಮಾಡಿದ್ದರೆ ಚೆನ್ನಾಗಿತ್ತು. ನೈಟ್ರೊಜಿನಸ್ ಫರ್ಟಿಲೈಸರ್‌ಗೆ ಬೇಕಾಗಿರುವುದು ನ್ಯಾಫ್ತ. ಇದು

ಎಣ್ಣೆ ಶುದ್ಧೀಕರಣ ಕಾರ್ಖಾನೆ ಇರುವ ಕಡೆ ಬರುತ್ತದೆ. ಕೇಂದ್ರ ಸರ್ಕಾರದವರು ಬಹುಶಃ ಪ್ರತಿಯೊಂದು ರಾಜ್ಯದಲ್ಲಿಯೂ ದೊಡ್ಡ ಗೊಬ್ಬರದ ಕಾರ್ಖಾನೆಗಳನ್ನು ಮಾಡಿದರೆ ಬಹುಶಃ ಗೊಬ್ಬರದ ಕಷ್ಟ ಈ ದಿವಸ ನಮಗೆ ಇರುತ್ತಿರಲಿಲ್ಲ. ಮೈಸೂರು ರಾಜ್ಯದಲ್ಲಿ ಗೊಬ್ಬರದ ಕೊರತೆ ಬಹಳ ಹೆಚ್ಚಾಗಿದೆ. ಎಲ್ಲಿ ನೀರಾವರಿ ಜಮೀನು ಬಹಳ ಕಡಮೆ ಇದೆಯೋ ಎಲ್ಲಿ ಆಹಾರದ ಉತ್ಪತ್ತಿ ಬಹಳ ಕಡಮೆ ಇದೆಯೋ, ಅಂಥ ರಾಜ್ಯಗಳಿಗೆ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಗೊಬ್ಬರವನ್ನು ಅಗತ್ಯವಾಗಿ ಕೊಡಬೇಕು. ಕೇಂದ್ರ ಸರ್ಕಾರದವರು ಗೊಬ್ಬರದ ಕಾರ್ಖಾನೆಯನ್ನು ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ಮಾಡುವುದಕ್ಕೆ ಅವಕಾಶವನ್ನು ಕೊಡದೆ ಇರುವುದಕ್ಕೆ ನಿಜವಾಗಿಯೂ ವ್ಯಥೆ ಪಡಬೇಕಾಗಿದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಅವರು ಹೆಚ್ಚು ಪ್ರಯತ್ನ ಮಾಡಿ ಗೊಬ್ಬರದ ಕಾರ್ಖಾನೆ ಒಂದಲ್ಲ, ಎರಡೋ, ಮೂರೋ ಕಾರ್ಖಾನೆಗಳು ಆದಷ್ಟು ಜಾಗ್ರತೆಯಾಗಿ ನಮ್ಮಲ್ಲಿ ಆಗುವುದಕ್ಕೆ ಪ್ರಯತ್ನ ಮಾಡಬೇಕು. ನೈಟ್ರೊಜನಸ್ ಫರ್ಟಿಲೈಸರ್ಸ್‌ಗೋಸ್ಕರ ಯಾವ ಕೊರತೆಯೂ ಇಲ್ಲ. ಅದಕ್ಕೆ ಪರದೇಶಗಳಿಂದ ಯಾವ ಸಾಮಾನುಗಳೂ ಬರಬೇಕಾಗಿಲ್ಲ. ಆದರೆ ಸೂಪರ್ ಫಾಸ್ಫೇಟ್‌ಸ್‌ಗೆ ಬೇಕಾದ ಸಲ್ಫರ್ ಮತ್ತು ಫಾಸ್ಫರಸ್ ಇವುಗಳನ್ನು ಮಾತ್ರ ಆಮದು ಮಾಡಿಕೊಳ್ಳಬೇಕು. ಅದಕ್ಕೆ ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ಮಾಡಿ, ವಿದೇಶಿ ವಿನಿಮಯವನ್ನು ಪಡೆಯಬೇಕು. ಬೆಳಗೊಳದಲ್ಲಿರುವ ಗೊಬ್ಬರದ ಕಾರ್ಖಾನೆಯನ್ನು ವಿಸ್ತಾರ ಮಾಡುವ ಯೋಚನೆ ಇದೆ ಎಂದು ಕೇಳಿದೆ. ಬಹಳ ಸಂತೋಷ. ಈಗ ರಾಯಚೂರು ಜಿಲ್ಲೆಯಲ್ಲಿ ನೀರಾವರಿ ಹೆಚ್ಚಾಗುತ್ತಿದೆ, ಭದ್ರ ಯೋಜನೆಯಿಂದ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿಯೂ ನೀರಾವರಿ ಬಹಳ ಹೆಚ್ಚಾಗಿದೆ. ನೀರಾವರಿ ಇರುವ ಕಡೆ ಗೊಬ್ಬರದ ಕಾರ್ಖಾನೆಗಳು, ಸೂಪರ್‌ಫಾಸ್ಫೇಟ್ ತಯಾರು ಮಾಡುವ ಕಾರ್ಖಾನೆಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಅದನ್ನು ಮಾಡುತ್ತಾರೆಂದು ನಂಬಿದ್ದೇನೆ.

ಕ್ರ್ಯಾಷ್ ಪ್ರೋಗ್ರಾಂನಲ್ಲಿ ಕೇಂದ್ರ ಸರ್ಕಾರದವರು ಹೆಚ್ಚು ಹಣವನ್ನು ನಮ್ಮ ರಾಜ್ಯಕ್ಕೆ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಕೊಡುವ ಶೇಕಡ ನೂರರಷ್ಟು ಸಹಾಯ ಧನವನ್ನು ನಾವು ಖರ್ಚು ಮಾಡದೆ ಹೋದರೆ ಅದು ಲ್ಯಾಪ್ಸ್ ಆಗುತ್ತದೆ. ಆದರೆ ಕೆಲವು ಇಲಾಖೆಗಳಲ್ಲಿ ಹಣವನ್ನು ಖರ್ಚು ಮಾಡಿದ್ದಾರೆ. ಸಣ್ಣ ನೀರಾವರಿ ಯೋಜನೆಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಪಂಪ್‌ಸೆಟ್‌ಗಳು ನಮಗೆ ಹೆಚ್ಚು ಹೆಚ್ಚಾಗಿ ಬೇಕು. ಮೂರನೆಯ ಯೋಜನೆಯಲ್ಲಿ 11 ಸಾವಿರ ಪಂಪ್‌ಸೆಟ್ ಕೊಡಬೇಕು ಎನ್ನುವ ಗುರಿ ಇತ್ತು. ಆದರೆ 27 ಸಾವಿರ ಪಂಪ್‌ಸೆಟ್‌ಗಳನ್ನು ಕೊಟ್ಟಿದ್ದಾರೆ. ನಾಲ್ಕನೆಯ ಯೋಜನೆಯ ಮೊದಲ ವರ್ಷ ಅಂದರೆ 1966—67ರಲ್ಲಿ ಹೆಚ್ಚು ಪಂಪ್‌ಸೆಟ್‌ಗಳನ್ನು ಕೊಡಬೇಕು ಎಂದು ಸರ್ಕಾರದವರು ಯೋಚನೆ ಮಾಡಿದ್ದಾರೆ. ಅದನ್ನೂ ಮಾಡುತ್ತಿದ್ದಾರೆ. ಬಹಳ ತೃಪ್ತಿಕರವಾಗಿ ಕೆಲಸ ನಡೆಯುತ್ತಿದೆ. ಆದರೂ ಕೂಡ ಮದ್ರಾಸ್ ರಾಜ್ಯಕ್ಕೆ ಹೋಲಿಸಿದರೆ ನಮಗೆ ಇನ್ನೂ ಹೆಚ್ಚು ಪಂಪ್‌ಸೆಟ್‌ಗಳು ಬೇಕು. ನಮ್ಮಲ್ಲಿ ನದಿ ನೀರಿನ ಯೋಜನೆಗಳನ್ನು ಹೆಚ್ಚಾಗಿ ಮಾಡುವುದಕ್ಕೆ ಆಗುವುದಿಲ್ಲವಾದ್ದರಿಂದ ಪಂಪ್‌ಸೆಟ್‌ಗಳನ್ನು ಹೆಚ್ಚಾಗಿ ಕೊಡುವುದಕ್ಕೆ ಸರ್ಕಾರ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ಉತ್ತಮವಾದ ಬೀಜವನ್ನು ತಯಾರು ಮಾಡತಕ್ಕ ಯೋಜನೆಯನ್ನು 'ಟೋನ್‌ಅಪ್' ಮಾಡುತ್ತಿದ್ದಾರೆ. ಇದು ಸಂತೋಷದ ವಿಷಯ. ಹೈಬ್ರಿಡ್ ಜೋಳ ಮತ್ತು ಮೇಜ್ ಫೌಂಡೇಷನ್ ಸೀಡ್ಸ್ ತಯಾರು ಮಾಡಬೇಕೆಂದು ಭದ್ರ ಪ್ರದೇಶದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರು ಆ ಕೆಲಸವನ್ನು ತೆಗೆದುಕೊಂಡಿದ್ದಾರೆ. ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಯ ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಸ್ಥಳಗಳಲ್ಲಿ ಅನೇಕ ಖಾಸಗಿ ರೈತರಿಗೆ ಫೌಂಡೇಷನ್ ಬೀಜಗಳನ್ನು ಮಾಡುವುದಕ್ಕೆ ಹಣ ಸಹಾಯ ಮಾಡಿ, ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಮೈಸೂರು ರಾಜ್ಯಕ್ಕೆ ಬೇಕಾಗುವಷ್ಟು ಹೈಬ್ರಿಡ್ ಜೋಳ ಮತ್ತು ಮೇಜ್ ಫೌಂಡೇಷನ್ ಸೀಡ್ಸ್ ನಮ್ಮ ದೇಶದಲ್ಲಿ ಆಗುತ್ತಿದೆ ಎಂದು ಹೇಳಬಹುದು. ಖಾಸಗಿಯವರಿಗೆ ಈ ಬೀಜಗಳನ್ನು ತಯಾರು ಮಾಡುವುದಕ್ಕೆ ಕೊಟ್ಟಿರುವುದರಿಂದ ಅವರಿಗೆ ವ್ಯವಸಾಯ ಇಲಾಖೆಯ ಅಧಿಕಾರಿಗಳು ಹೆಚ್ಚು ತರಪೇತಿಯನ್ನು ಕೊಡಬೇಕು. ಇದು ಬಹಳ ಕಷ್ಟವಾದ ವಿಚಾರ; ಇದನ್ನು ಸೈಂಟಿಫಿಕವಾಗಿ ಮಾಡಬೇಕಾಗುತ್ತದೆ. ಎಂಟನೇ ದಿವಸ, ಹತ್ತನೇ ದಿವಸ, ಸ್ಪ್ರೇ ಮಾಡಬೇಕಾಗುತ್ತದೆ. ಹಾಗೆ ಮಾಡದೆ ಇದ್ದರೆ ಅದು ಸತ್ತುಹೋಗುತ್ತದೆ. ಮಾನ್ಯ ಸದಸ್ಯರಾದ ಕುಂದೂರು ರುದ್ರಪ್ಪನವರು 12 ಎಕರೆಯಲ್ಲಿ ಹೈಬ್ರಿಡ್ ಜೋಳವನ್ನು ಹಾಕಿದ್ದಾರೆ ಮತ್ತು ಇಲಾಖೆಯವರು ಸಹಾಯ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಇಲಾಖೆಯವರು ಸಹಾಯ ಮಾಡದೆ ಇದ್ದರೆ ಮಾಡಿಸಿಕೊಳ್ಳುತ್ತಾರೆ. ಈ ಕಾರ್ಯಕ್ಕೆ ಹೆಚ್ಚು ತರಪೇತಿ ಆದ ಅಧಿಕಾರಿಗಳನ್ನು

(ಶ್ರೀ ಗಾಂಜಿ ವೀರಪ್ಪ)

ಇಟ್ಟುಕೊಳ್ಳಬೇಕು. ಇವರು ರೈತರ ಹತ್ತಿರ ಹೋಗಿ ಮುಖ್ಯವಾದ ಸಮಯದಲ್ಲಿ ಅವರಿಗೆ ಸಹಾಯ ಮಾಡುವಂತೆ ಅಧಿಕಾರಿಗಳಿಗೆ ಹೇಳಬೇಕು. ಹೈಬ್ರಿಡ್ ಜೋಳ ಮತ್ತು ಹೈಬ್ರಿಡ್ ಮೇಯ್ಜ್‌ಗೆ ಸರ್ಕಾರ ಕೊಟ್ಟ ಹಣಕ್ಕಿಂತಲೂ ಜಾಸ್ತಿ ಖರ್ಚಾಗಿದೆ. ಕೇಂದ್ರ ಸರ್ಕಾರದವರು ಏನು ಹಣವನ್ನು ಇದಕ್ಕೆ ಒದಗಿಸಿದ್ದಾರೋ ಅದನ್ನೂ ಕೂಡ ಖರ್ಚುಮಾಡಿದ್ದಾರೆ.

ಇನ್ನು ಮೈನರ್ ಇರ್ರಿಗೇಷನ್ ವಿಷಯ. ಈ ಯೋಜನೆಯಲ್ಲಿ ಸುಮಾರು 79 ಲಕ್ಷರೂಪಾಯಿ ಗಳನ್ನು ಖರ್ಚುಮಾಡಿದ್ದಾರೆ. ಸುಮಾರು 15 ಲಕ್ಷ 20 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಬೆಳೆಗಳಿಗೆ ಪ್ರೊಟೆಕ್ಷನ್ ತಂದಿದ್ದಾರೆ. ಆದರೂ ಇದು ಸಾಲದು. ಶ್ರೀಮಾನ್ ಕುಂದೂರು ರುದ್ರಪ್ಪನವರು ಬೆಳೆಗಳಿಗೆ ಬೀಳತಕ್ಕ ರೋಗಗಳನ್ನು ನಿವಾರಣೆಮಾಡುವುದಕ್ಕೆ ಸಾಕಷ್ಟು ಔಷಧಿಗಳು ಸಿಗುತ್ತಾ ಇಲ್ಲವೆಂದು ಹೇಳಿದರು. ನಾನು ಅದನ್ನು ಸಮರ್ಥನೆಮಾಡುತ್ತಾ ಈ ವಿಚಾರದಲ್ಲಿ ಹಾಗೂ ಕೆಲವು ಕ್ರ್ಯಾಷ್ ಪ್ರೋಗ್ರಾಂಗಳಿಗೆ ಸರ್ಕಾರದವರು ಹೆಚ್ಚು ಹಣ ಕೊಟ್ಟು ಸಂಬಂಧಪಟ್ಟ ಇಲಾಖೆಯ ಸಿಬ್ಬಂದಿಯನ್ನು ಹೆಚ್ಚು ಮಾಡುವುದರ ಮೂಲಕ ಇಲಾಖೆಗಳ ಕೆಲಸವನ್ನು ಚೆನ್ನಾಗಿ ಮಾಡಿಕೊಂಡರೆ ಒಳ್ಳೆಯದು.

ಇನ್ನು ಅನಿಮಲ್ ಹಸ್ಬೆಂಡ್ರಿ ಇಲಾಖೆಗೆ ಸರ್ಕಾರದವರು ಹೆಚ್ಚಿಗೆ ಹಣವನ್ನು ಕೊಟ್ಟಿದ್ದಾರೆ. ನಿಜವಾಗಿ ಈ ಇಲಾಖೆಗೆ ಎಷ್ಟು ಹಣವನು ಕೊಟ್ಟಿತ್ತೋ ಅದೆಲ್ಲವನ್ನೂ ಖರ್ಚುಮಾಡಿದ್ದಾರೆ. ಅದಕ್ಕಿಂತಲೂ ಹೆಚ್ಚಿಗೆ ಖರ್ಚುಮಾಡಿದ್ದಾರೆಂದು ಹೇಳಬಹುದು. ಕೇಂದ್ರ ಸರ್ಕಾರದವರು ಕ್ರ್ಯಾಷ್ ಪ್ರೋಗ್ರಾಂಗಳಿಗೆ ಕೊಟ್ಟಿದ್ದಂಥ ಹಣವನ್ನು ನಮ್ಮ ಇಲಾಖೆಯವರು ಖರ್ಚುಮಾಡಿ ಅನೇಕ ಯೋಜನೆ ಗಳನ್ನು ಕಾರ್ಯಗತಮಾಡುತ್ತಿದ್ದಾರೆ. ಆದರೆ ಇಷ್ಟೇ ಸಾಕು ಎಂಬುದಾಗಿ ತೃಪ್ತಿಪಟ್ಟುಕೊಂಡು ಸರ್ಕಾರದವರನ್ನು ಶಹಬಾಸುಗಿರಿ ಮಾಡುವುದಿಲ್ಲ.

ಇನ್ನು ಅಹಾರ ಕೊರತೆಯನ್ನು ಸರ್ವ ಪ್ರಯತ್ನಮಾಡಿ ನೀಗಿಸಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ ರಾಗಿಯ ಕೊರತೆ ಇಲ್ಲ. ಅಕ್ಕಿ ನಮಗೆ ಕಡಮೆ ಬಂದಿದೆ. ಅದು ಸ್ವಲ್ಪ ದಿನ ಇದೇ ದಾಟಿಯಲ್ಲಿ ಹೋಗಿ ಮುಂದೆ ಹೆಚ್ಚು ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನಮಾಡಬೇಕು. ಸರ್ಕಾರದವರು ರೈತರಿಗೆ ಗೊಬ್ಬರ, ಬೀಜಗಳನ್ನು ಕೊಡುವುದಲ್ಲದೆ ಹೆಚ್ಚಿಗೆ ಹಣ ಸಹಾಯವನ್ನು ಮಾಡಿದರೆ ಬಹುಶಃ ಈಗಿರತಕ್ಕ ಆಹಾರ ಕೊರತೆಯನ್ನು ನೀಗಿ ಪರರಾಜ್ಯಗಳಿಗೆ ನಾವು ಸಹ ಆಹಾರವನ್ನು ಕಳುಹಿಸ ಬಹುದು. ಆದರೆ ಆಂಧ್ರ, ಮದ್ರಾಸ್ ರಾಜ್ಯಗಳು ಬಹಳ ಅಡ್ವಾಂಟೇಜಿಯಸ್ ಪೊಜಿಷನ್ನಿನಲ್ಲಿವೆ. ಆ ರೀತಿಯಾದಂಥ ಪೊಜಿಷನ್ ಮೈಸೂರಿನಲ್ಲಿಯೂ ಒಂದೆರಡು ವರ್ಷಗಳಲ್ಲಿ ಬರಬಹುದು. ಅದರಲ್ಲಿ ಯಾವ ಸಂದೇಹವು ಇಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಮೀನು ಸಂಪತ್ತಿನ ವಿಷಯವಾಗಿ ಹೇಳಬೇಕಾದರೆ ನಾನು ಮಂಗಳೂರಿಗೆ ಹೋಗಿದ್ದಾಗ ಅಲ್ಲಿ ನೋಡಿದೆ. ಬಹಳ ಚೆನ್ನಾಗಿ ಕೆಲಸಗಳು ನಡೆದಿವೆ. ಕ್ರ್ಯಾಷ್ ಪ್ರೋಗ್ರಾಂನಲ್ಲಿ ಎಷ್ಟು ಹಣ ವನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದರೋ ಎಲ್ಲಾ ಹಣವನ್ನೂ ಪೂರ್ತಿಯಾಗಿ ಖರ್ಚು ಮಾಡಿದ್ದಾರೆ. ತುಂಗಭದ್ರಾ ಅಣೆಕಟ್ಟಿನ ಕೆಳಗೆ.........

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಮೀನಿನ ವಿಷಯವನ್ನು ಮಾನ್ಯ ಶ್ರೀ ಗಾಂಜಿ ವೀರಪ್ಪನವರು ಮಂಗಳೂರಿಗೆ ಹೋಗಿ ಬಂದು ಚೆನ್ನಾಗಿ ತಿಳಿದಿದ್ದೇನೆಂದು ಹೇಳಿದರು. ಅದರಲ್ಲಿ ಅವರಿಗೆ ಅನುಭವವಿದೆಯೇ?

ಶ್ರೀ ಗಾಂಜಿ ವೀರಪ್ಪ.—ಮೀನು ತಿಂದರೇನೇ ಮೀನು ಇಲಾಖೆಯ ಅನುಭವ ಇರುತ್ತದೆಂದು ಮಾನ್ಯ ಸದಸ್ಯರು ಹೇಳಬಹುದು. ಆದರೆ ನಾನು ಮೀನು ತಿನ್ನುವುದಿಲ್ಲ. ಈ ಮೀನಿನ ಅಭಿವೃದ್ಧಿ ಬಗ್ಗೆ ಸಾಕಷ್ಟು ಮಾಹಿತಿಯನ್ನು ತಿಳಿಯಲಿಕ್ಕೆ ಪ್ರಯತ್ನಮಾಡಿದ್ದೇನೆ. ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟಿನಲ್ಲಿ ಹೆಚ್ಚು ಹಣ್ಣುಗಳನ್ನು ಬೆಳೆಯುವುದಕ್ಕೆ ಹೆಚ್ಚಿನ ಪ್ರಯತ್ನಗಳನ್ನು ಮಾಡ ಬೇಕಾಗಿದೆ. ಇದು ಈಗಿನ ಆಹಾರ ಕೊರತೆಯನ್ನು ನೀಗಲಿಕ್ಕೆ ಸಹಕಾರಿಯಾಗಿರುತ್ತದೆ. ಹಾಗೆಯೇ ಹೆಚ್ಚಿಗೆ ಮೀನಿನ ಉತ್ಪತ್ತಿಯೂ ಆಗಬೇಕಾಗಿದೆ. ಮೀನು ಬಹಳ ಒಳ್ಳೆಯ ಆಹಾರ. ಸಮುದ್ರತೀರದಲ್ಲಿ ವಾಸಿಸುವವರು ಬರೀ ಮೀನನ್ನೇ ಬಯಸುತ್ತಾರೆ. ಇದು ಬಹಳ ಪುಷ್ಟಿಕರವಾದ ಆಹಾರ. ಮೀನು ತಿಂದವರು ಬಹಳ ಬುದ್ಧಿವಂತರಾಗಿರುತ್ತಾರೆ. ಏಕೆಂದರೆ ಅದರಲ್ಲಿ ಎಲ್ಲಾ ಆಹಾರಾಂಶಗಳು ಒಳಗೊಂಡಿರುತ್ತವೆ. ಅದರಿಂದಲೇ ಮೀನಿನ ಸಂಪತ್ತಿನ ಬಗ್ಗೆ ಹೆಚ್ಚು ಮಾಹಿತಿ ಯನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಮಾಡಿದ್ದೇನೆ. ಈ ವಿಚಾರದಲ್ಲಿ ಸರ್ಕಾರದವರು ಇನ್ನೂ ಹೆಚ್ಚಿಗೆ ಹಣವನ್ನೊದಗಿಸಿ ಮೀನಿನ ಅಭಿವೃದ್ಧಿಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ತುಂಗ

ಭದ್ರಾಕ್ಕೆ ಹೋದರೆ ಅಲ್ಲಿ ಒಂದ ದೊಡ್ಡ ಏರಿಯಾದಲ್ಲಿ ಮೀನು ಬೆಳೆಸಲಿಕ್ಕೆ ಅನುಕೂಲವಾಗಿದೆ. ಸುಮಾರು 146 ಚದುರಮೈಲಿಗಳಷ್ಟು ಏರಿಯಾದಲ್ಲಿ ತುಂಗಭದ್ರಾ ಡ್ಯಾಂ ಹತ್ತಿರ ಮೀನನ್ನ ಬೆಳೆಸಬಹುದು. ಒಂದು ಯೋಜನೆಯನ್ನು ಸರ್ಕಾರದವರು ಕಾರ್ಯರೂಪಕ್ಕೆ ತರಬೇಕಾಗಿದೆ. ಕಲ್ಕತ್ತಾ ಮತ್ತು ಇತರ ಕಡೆಗಳಲ್ಲಿ ಸಣ್ಣಸಣ್ಣ ಬೀಜದ ಮೀನುಗಳನ್ನು ಉತ್ಪತಿ ಮಾಡುತ್ತಿದ್ದಾರೆ ನಾವು ಯಾವ ರೀತಿಯಲ್ಲಿ ಇಂಪ್ರೂವ್ಡ್ ಸೀಡ್ಸ್‌ನಿಂದ ಹೈಬ್ರಿಡ್ ಜೋವರ್ ಮುಂತಾದುವನ್ನು ಬೆಳೆಸುತ್ತೇವೋ ಹಾಗೆ ಈ ಮೀನುಗಳನ್ನು ಒಳನಾಡಿನಲ್ಲಿರತಕ್ಕ ಸಣ್ಣ ಸಣ್ಣ ಕೆರೆಗಳಲ್ಲಿ ಬೆಳೆಸಿದರೆ ಸಮುದ್ರ ತೀರದಲ್ಲಿರುವವರು ಮೀನು ತಿಂದು ಸುಖವಾಗಿ ಜೀವನಮಾಡುವುದಕ್ಕೆ ಅನುಕೂಲವಾಗುತ್ತದೆ. ಸಣ್ಣಸಣ್ಣ ನದಿಗಳಲ್ಲಿ ಮತ್ತು ಕೆರೆಗಳಲ್ಲಿ ಇರತಕ್ಕ ಮೀನನ್ನು ಹಿಡಿದುಕೊಂಡು ಬಂದು ತಿನ್ನುವ ಅಪೇಕ್ಷೆ ಇರುವ ಜನರಿಗೆ ಅದರಿಂದ ಅನುಕೂಲವಾಗುತ್ತದೆ. ಆಹಾರದ ಕೊರತೆಯೂ ಕೂಡ ಕಡಮೆಯಾಗುತ್ತದೆ. ಮೀನನ್ನು ಬೆಳೆಯುವ ಯೋಜನೆಯನ್ನು ಮೀನಿನ ಇಲಾಖೆಯವರು ಇನ್ನೂ ಹೆಚ್ಚಿಗೆ ಮಾಡಿದರೆ ಅದರಿಂದ ಪ್ರಯೋಜನವಾಗುತ್ತದೆ. ಇನ್ನು ಹೆಚ್ಚು ಅಂಕಿಅಂಶಗಳನ್ನು ಕೊಡುವ ಉದ್ದೇಶ ನನಗಿಲ್ಲ. ಕೇಂದ್ರ ಸರ್ಕಾರದವರು ಕ್ರ್ಯಾಷ್ ಪ್ರೋಗ್ರಾಂಗೆ ಕೊಟ್ಟಿರತಕ್ಕ ಹಣವನ್ನು ನಮ್ಮ ಸರ್ಕಾರದವರು ಪೂರ್ತಿಯಾಗಿ ಖರ್ಚುಮಾಡಿದ್ದಾರೆ,

ಇನ್ನು ನಮ್ಮ ವ್ಯವಸಾಯ ಇಲಾಖೆಯವರ ಮೇಲೆ ಹೈಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಿದ್ದರಿಂದ ಅನೇಕ ಸ್ಥಾನಗಳನ್ನು ಭರ್ತಿಮಾಡಲಿಲ್ಲ. ಆ ಅಡಚಣೆ ನಿವಾರಣೆಯಾದ ತಕ್ಷಣ ಎಲ್ಲಾ ಹುದ್ದೆಗಳನ್ನೂ ನ್ಯಾಯವಾಗಿ ಭರ್ತಿಮಾಡುತ್ತಾರೆ. ಅದಕ್ಕೋಸ್ಕರ ಸರ್ಕಾರದವರು ಈ ಇಲಾಖೆಯಲ್ಲಿ ಇನ್ನೂ ಹುದ್ದೆಗಳನ್ನು ಭರ್ತಿಮಾಡಲಿಲ್ಲ. ಅವರ ದೌರ್ಬಲ್ಯವನ್ನು ತೋರಿಸಲಿಲ್ಲ. ಕಾನೂನು ಅಡಚಣೆ ಇದ್ದುದರಿಂದ ಮಾಡಲಿಲ್ಲ. ಇಂಟರ್ ಸ್ಟೇಟ್ ಸೀನಿಯಾರಿಟಿ ಬಗ್ಗೆ ಇರತಕ್ಕ ತೊಡಕುಗಳನ್ನು ಬಗೆಹರಿಸಿದ್ದಾರೆ. ಒಟ್ಟಿನಲ್ಲಿ ವ್ಯವಸಾಯ ಇಲಾಖೆ ಬಹಳ ತಿಳುವಳಿಕೆಯಿಂದ ಕೆಲಸಮಾಡಿದೆ. ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ ನಗದು ರೂಪವಾಗಿ ರೈತರಿಗೆ ವ್ಯವಸಾಯ ಸಾಮಗ್ರಿಗಳನ್ನು ಕೊಡುವುದು ಅಷ್ಟೇ ಅಲ್ಲ, ಅವನ್ನು ಹೈರ್ ಪರ್ಚೇಜ್ ಸಿಸ್ಟಂನಲ್ಲಿ ಕೊಡುವುದು ಒಳ್ಳೆಯದು. ಪುಕ್ಕಟೆಯಾಗಿ ಬೀಜಗಳನ್ನು ರೈತರಿಗೆ ಒದಗಿಸುವುದು ಒಂದು ಒಳ್ಳೆಯ ವ್ಯವಸ್ಥೆ. ಸುಮಾರು 10 ಅಥವಾ 20 ಎಕರೆಗಳಲ್ಲಿ ಸಣ್ಣಸಣ್ಣ ಯಂತ್ರಗಳನ್ನು ಉಪಯೋಗಿಸಿ ವ್ಯವಸಾಯ ಮಾಡಿದರೆ ಹೆಚ್ಚು ಆಹಾರವನ್ನು ಬೆಳೆಯಬಹುದು. ಇತ್ತೀಚೆಗೆ ವ್ಯವಸಾಯಕ್ಕನುಕೂಲವಾಗುವಂತಹ ಸಣ್ಣಸಣ್ಣ ಟ್ರಾಕ್ಟರುಗಳನ್ನು ಪರದೇಶದವರು ಮಾಡಿದ್ದಾರೆ. ಇಲ್ಲಿಯೂ ಅದೇ ರೀತಿಯಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪನೆಮಾಡುತ್ತೇವೆಂಬ ಯೋಚನೆ ನಮ್ಮ ಸರ್ಕಾರಕ್ಕೆ ಇದೆಯೆಂಬ ಅಂಶವನ್ನು ನಾನು ಪತ್ರಿಕೆಗಳಲ್ಲಿ ನೋಡಿದೆ. ಬೆಂಗಳೂರಿನ ಹತ್ತಿರ ಪವರ್ ಟಿಲ್ಲರ್ಸ್ ಮಾಡುವಂತಹ ಒಂದು ಕಾರ್ಖಾನೆಯನ್ನು ಸ್ಥಾಪನೆಮಾಡುತ್ತೇವೆಂದು ಹೇಳಿದರು. ಬಹಳ ಸಂತೋಷ. ಆದ್ದರಿಂದ ಈ ವ್ಯವಸಾಯ ಇಲಾಖೆಯನ್ನು ಹೆಚ್ಚು ಪ್ರಗತಿಗೆ ತಂದು ರೈತರಿಗೆ ಹೆಚ್ಚು ಸೌಕರ್ಯಗಳನ್ನುಂಟುಮಾಡಿ, ರೈತರು ಬೆಳೆದಂತಹ ಆಹಾರಪದಾರ್ಥಗಳ ಧಾರಣೆ ಒಂದೂ ಕಡಮೆಯಾಗದಂತೆ ರೈತರಿಗೆ ಒಂದು ಪ್ರೊಟೆಕ್ಷನ್ ಕೊಟ್ಟರೆ ರೈತರು ಹೆಚ್ಚಿಗೆ ಆಹಾರವನ್ನು ಬೆಳೆಯುವುದರಲ್ಲಿ ಯಾವ ಸಂದೇಹವು ಇಲ್ಲ. ಇದೇ ರೀತಿಯಲ್ಲಿ ಕೆಲಸಕಾರ್ಯಗಳು ತ್ವರಿತವಾಗಿ ನಡೆದು ದೇಶದಲ್ಲಿ ಈಗಿರತಕ್ಕ ಆಹಾರದ ಕೊರತೆ ಜಾಗ್ರತೆ ನೀಗಲಿ ಎಂದು ಹೇಳಿ ಈ ಬೇಡಿಕೆಯನ್ನು ನಾನು ಸಂತೋಷದಿಂದ ಅನುಮೋದಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದೆ ಇರತಕ್ಕ ವ್ಯವಸಾಯ ಬೇಡಿಕೆ ಮತ್ತು ಇತರ ಬೇಡಿಕೆಗಳನ್ನು ನಾನು ಅನುಮೋದಿತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಅಪೇಕ್ಷೆ ಪಡುತ್ತೇನೆ. ಇದುವರೆಗೆ ರಾಯಚೂರು ಜಿಲ್ಲೆಯಲ್ಲಿ ಅದರಲ್ಲೂ ತುಂಗಭದ್ರಾ ಏರಿಯಾದಲ್ಲಿ ಈ ವಿಚಾರದಲ್ಲಿ ಏನೇನೂ ಅಭಿವೃದ್ಧಿಯಾಗಿಲ್ಲ. ನೀರು ಸುಮ್ಮನೆ ಹೋಗುತ್ತಿದೆ. ರೈತರು ಇರ್ರಿಗೇಟೆಡ್ ಮೈಂಡ್‌ನಲ್ಲಿಲ್ಲ. ಈ ಬಗ್ಗೆ ಎಲ್ಲಾ ಕಡೆಗಳಿಂದಲೂ ಟೀಕೆಗಳು ಬಂದಿವೆ. ಆದ್ದರಿಂದ ಇವತ್ತು ಅಲ್ಲಿರತಕ್ಕ ನ್ಯೂನತೆಗಳನ್ನು ಹೆಚ್ಚಿನಮಟ್ಟಿಗೆ ಹೋಗಲಾಡಿಸಿ ಅಲ್ಲಿನ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆ ಅತಿ ತ್ವರಿತವಾಗಿ ವ್ಯವಸ್ಥೆ ಮಾಡಬೇಕು. ಅಲ್ಲಿ ಬಹುಮಟ್ಟಿಗೆ ಮೊಟ್ಟಮೊದಲನೆಯದಾಗಿ ರೊಕ್ಕದ ಅಡಚಣೆ ಇತ್ತು. ಇವತ್ತು ಫೈನಾನ್ಸಿಂಗ್ ಕಾರ್ಪೋರೇಷನ್ನಿನವರು ಸುಮಾರು ಎಂಟೂವರೆ ಕೋಟಿ ರೂಪಾಯಿಗಳನ್ನು ಅಲ್ಲಿನ ಅಭಿವೃದ್ಧಿ ಸಲುವಾಗಿ ಕೊಟ್ಟಿದ್ದಾರೆ. ಇದು ಮಾನ್ಯ ಮುಖ್ಯ ಮಂತ್ರಿಗಳ ಸಹಾಯದಿಂದ ಆಯಿತು ಎಂದು ಹೇಳಿದರೆ ತಪ್ಪಾಗಲಾರದು. ಇದರ ಪೈಕಿ 6 ಕೋಟಿ ರೂಪಾಯಿಗಳ ಅಂದಾಜುಮಾಡಿ ಅದನ್ನು ಅಲ್ಲಿತಕ್ಕ ಜಮೀನುಗಳನ್ನು ಲೆವೆಲ್ ಮಾಡುವುದಕ್ಕೋಸ್ಕರ ಮೀಸಲಾಗಿಟ್ಟಿದ್ದಾರೆಂಬುದಾಗಿ ನನಗೆ ತಿಳಿದು ಬಂದಿದೆ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಮೆಷಿನರಿಗಳನ್ನು ತ್ವರಿತವಾಗಿ ತರಿಸಿ ಈ ಒಂದು

(ಶ್ರೀಮತಿ ಬಸವರಾಜೇಶ್ವರಿ)

ಯೋಜನೆಯನ್ನು ಆದಷ್ಟು ಜಾಗ್ರತೆ ಮಂಜೂರುಮಾಡಿ ಆ ಜಮೀನುಗಳನ್ನು ಲೆವೆಲ್ ಮಾಡಿದರೆ ವ್ಯವಸಾಯಾಭಿವೃದ್ಧಿ ಬಹಳ ತ್ವರಿತವಾಗಿ ನಡೆಯುತ್ತದೆ.

ಎರಡನೆಯದಾಗಿ, ಆಕ್ಸ್‌ಫಾಮ್ ಪ್ರೋಗ್ರಾಂ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳು ಆಹಾರವನ್ನು ನಾವು ಹೆಚ್ಚು ಬೆಳೆಯುತ್ತೇವೆ ಪ್ರತಿಯೊಂದು ಜಮೀನನ್ನು ಉಪಯೋಗಿಸುತ್ತೇವೆಂದು ಹೇಳಿದಾಗ ಮತ್ತು ಅದಕ್ಕೆ ಬೇಕಾದಂಥ ಫರ್ಟಿಲೈಜರ್ಸ್ ಸಹಾಯ ಮಾಡಬೇಕೆಂದು ಕೇಳಿದಾಗ, ಅದರ ಬಗ್ಗೆ ಒಂದು ದೂರ ವಿಚಾರವನ್ನು ಇಟ್ಟುಕೊಂಡು ಜೋನಕ್ಕೆ ಕರೆಸ್‌ಪಾಂಡಾಗಿರತಕ್ಕ ಹೈಬ್ರಿಡ್ ಮೆಯ್ಜ್ ಬೆಳೆಯತಕ್ಕ ರೈತರಿಗೆ ಫರ್ಟಿಲೈಜರ್ಸ್ ಮತ್ತೆ ಬೀಜಗಳನ್ನು ನಮಗೆ ಸರಬರಾಜು ಮಾಡಿದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಯೂನಿವರ್ಸಿಟಿ ಆಫ್ ಅಗ್ರಿಕಲ್‌ಚರಲ್ ಸೈನ್ಸ್ ಅವರಿಗೆ ಆ ರೀತಿ ಸರಬರಾಜು ಮಾಡಿದಂತಹ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ನಮ್ಮ ದೇಶದ ರೈತರಿಗೆ ಹೈಬ್ರಿಡ್ ಮೇಯ್ಜ್ ಬೆಳೆಯುವುದಕೋಸ್ಕರ ಬೀಜಗಳು ಮತ್ತು ಗೊಬ್ಬರವನ್ನು ಒದಗಿಸಿದ್ದಕ್ಕಾಗಿ ನಾನು ನನ್ನ ಕ್ಷೇತ್ರದ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ

3-00 P.M.

ಮತ್ತು ಅದರ ಜೊತೆಗೆ ಹೈಬ್ರಿಡ್ ಸೀಡ್ಸ್ ಫಾರಮ್ ಮಾಡಬೇಕೆಂದು ಜನಗಳು ಮುಂದೆ ಬಂದಾಗ ಇಲಾಖೆಯವರು ಹೆಚ್ಚು ಆಸಕ್ತಿ ವಹಿಸಿ ತುಂಗಭದ್ರಾ ಏರಿಯಾದಲ್ಲಿ ಅದನ್ನು ಸ್ಥಾಪಿಸಲು ಸಹಾಯ ಮಾಡುವುದು ಅಗತ್ಯ. ಅಲ್ಲಿ ಸುಮಾರು 6-7 ಲಕ್ಷ ಎಕರೆ ಜಮೀನು ನೀರಾವರಿ ಆಗುತ್ತದೆ. ಆದ್ದರಿಂದ ಆ ಪ್ರದೇಶದಲ್ಲಿ ಹೈಬ್ರಿಡ್ ಸೀಡ್ಸ್ ಬೆಳೆಯುವುದಕ್ಕೆ ಸರ್ಕಾರದವರು ಅನುಕೂಲ ಮಾಡಬೇಕು. ಅದರಲ್ಲಿ 3-3½ ಲಕ್ಷ ಎಕರೆ ಡ್ರೈ ಕಂ ವೆಟ್ ಏರಿಯಾ ಆಗುತ್ತದೆ. ಅದರಲ್ಲಿ ಜೋಳ ಮುಸುಕಿನ ಜೋಳ, ಮತ್ತು ಇತರ ಆಹಾರ ಪದಾರ್ಥಗಳನ್ನು ಬೆಳೆಯಬಹುದು. ಅದರಲ್ಲಿ 400 ಎಕರೆಯಲ್ಲಿ ಜೋಳ, 200 ಎಕರೆಯಲ್ಲಿ ಗೌನ್ ಜೋಳ 50-60 ಎಕರೆಯಲ್ಲಿ ಸಜ್ಜೆಯನ್ನು ಬೆಳೆಯಬೇಕೆಂದು ಒಂದು ಪ್ರೋಗ್ರಾಮನ್ನು ಹಾಕಿಕೊಂಡಿದ್ದೆವು. ಅದಕ್ಕೆ ನ್ಯಾಷನಲ್ ಸೀಡ್ ಕಾರ್ಪೋರೇಷನ್‌ನವರು ಬೀಜಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಮ್ಮ ವಿನಂತಿಯನ್ನು ತಿಳಿಸಬೇಕಾಗಿದೆ. ಆ ರೀತಿ ನಾವು ಪ್ರೋಗ್ರಾಮ್ ಹಾಕಿಕೊಂಡು ಬೆಳೆಯನ್ನು ಬೆಳೆಯಬೇಕೆಂದು ಹೊರಟಾಗ ತುಂಗಭದ್ರಾ ಮೈನ್ ಕನಾಲ್ ಬ್ರೀಚ್ ಆದಾಗ ನಮ್ಮ ಪ್ರೋಗ್ರಾಂ ಎಲ್ಲಾ ಪಲ್ಲಟವಾಯಿತು. 400 ಎಕರೆಯಲ್ಲಿ ಜೋಳವನ್ನು ಹಾಕಬೇಕೆಂದು ಪ್ರೋಗ್ರಾಮ್ ಹಾಕಿಕೊಂಡದ್ದಕ್ಕೆ ಕೇವಲ 50-60 ಎಕರೆಯಲ್ಲಿ ಮಾತ್ರ ಬೀಜವನ್ನು ಹಾಕುವುದಕ್ಕೆ ಸಾಧ್ಯವಾಯಿತು. ಉಳಿದಂತಹ ಬೀಜವೆಲ್ಲಾ ಹಾಗೆಯೇ ಇದೆ. ಜೂನ್ ತಿಂಗಳಿನಲ್ಲಿ ಅದನ್ನು ಹಾಕುತ್ತೇವೆ. ಈ ರೀತಿ ಕೆನಾಲ್‌ಗಳು ಬ್ರೀಚ್ ಆದಾಗ ಎಮರ್ಜೆನ್ಸಿ ಸ್ಕ್ವಾಡ್ ಅನ್ನು ಇಟ್ಟು ಬೇಗ ಆ ಕೆನಾಲ್ ಅನ್ನು ರಿಪೇರಿ ಮಾಡದಿದ್ದರೆ ರೈತರ ಗತಿ ಏನು ! ರೈತರು ಎಷ್ಟೋ ದುಡ್ಡನ್ನು ಖರ್ಚುಮಾಡಿ ವ್ಯವಸಾಯವನ್ನು ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಅವರಿಗೆ ಸರ್ಕಾರದವರು ಸಹಾಯ ಮಾಡದಿದ್ದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಅದಕ್ಕೋಸ್ಕರ ಸರ್ಕಾರದವರು ಒಂದು ಎಮರ್‌ಜೆನ್ಸಿ ಸ್ಕ್ವಾಡನ್ನು ಇಟ್ಟು, ಅರ್ತ್ ಮೂವಿಂಗ್ ಮೆಷನ್ ಮತ್ತು ಲಾರಿಗಳನ್ನು ಇಟ್ಟು ಕನಿಷ್ಠ ಪಕ್ಷ 7-8 ದಿವಸಗಳಲ್ಲಿ ಬ್ರೀಚಾಗಿರತಕ್ಕ ಕೆನಾಲ್‌ಗಳನ್ನು ರಿಪೇರಿ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದರೆ ರೈತರಿಗೆ ವಿಪರೀತವಾದ ಹಾನಿಯುಂಟಾಗುತ್ತದೆ. ತುಂಗಭದ್ರಾ ಪ್ರಾಜೆಕ್ಟಾಗಲೀ, ಅಥವಾ ಬೇರೆ ಯಾವ ಪ್ರಾಜೆಕ್ಟ್ ಆಗಲೀ ಬ್ರೀಚಾಗಿ ಅನಾನುಕೂಲಗಳು ಆದಾಗ ಆದಷ್ಟುಮಟ್ಟಿಗೆ ತೀವ್ರವಾಗಿ ರಿಪೇರಿ ಮಾಡಿಕೊಡಬೇಕು. ಈಗ ಅದನ್ನು ರಿಪೇರಿ ಮಾಡುವುದಕ್ಕೆ 20-25 ದಿವಸಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಇದು ಸರಿಯಲ್ಲ. ಆದಷ್ಟು ಜಾಗ್ರತೆ ರಿಪೇರಿ ಮಾಡಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಹೈಬ್ರಿಡ್ ಸೀಡ್ ಫಾರಮ್‌ನಲ್ಲಿ 400-500 ಎಕರೆಯಲ್ಲಿ ಬೆಳೆಯನ್ನು ಬೆಳೆಯಬೇಕೆಂದು ನಾವು ಪ್ರೋಗ್ರಾಮ್ ಹಾಕಿಕೊಂಡಿದ್ದೆವು, ಅದಕ್ಕೆ ಬೇಕಾದ ಬೀಜಗಳೇನೋ ಸಿಕ್ಕಿದವು, ಆದರೆ ಅದಕ್ಕೆ ಸಂಬಂಧಪಟ್ಟ ಇನ್‌ಸೆಕ್ಟಿಸೈಡ್ಸ್ ಸಿಕ್ಕಲಿಲ್ಲ. ಇದರಿಂದ ಅಲ್ಲಿ ರೈತರಿಗೆ ತುಂಬಾ ಅನಾನುಕೂಲವಾಯಿತು. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ನಿಗಾ ಕೊಡಬೇಕು. ಇಲಾಖೆಯವರು ರಿಸರ್ಚ್ ಮಾಡಬೇಕು, ಬೆಳೆಗಳಿಗೆ ಯಾವ ಯಾವ ರೋಗ ಬರುತ್ತದೆ ಎಂಬುದನ್ನು ಕಂಡುಹಿಡಿದು ಅದಕ್ಕೆ ಬೇಕಾದಂತಹ ಔಷಧಿಯನ್ನು ಸಕಾಲದಲ್ಲಿ ರೈತರಿಗೆ ಒದಗಿಸಿಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಅಲ್ಲಿ ರೈತರು ಜಾಗ್ರತೆಯಾಗಿ ಹೆಚ್ಚು ಹೆಚ್ಚಾಗಿ ಬೆಳೆಯತಕ್ಕ ಬಿತ್ತನೆ ಬೀಜಗಳನ್ನು ಕೊಯಮತ್ತೂರು

ಮುಂತಾದ ಪ್ರದೇಶಗಳಿಂದ ಒಂದು ಕೆ.ಜಿ.ಗೆ 15 ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡು ಬಂದು ನವಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಬಿತ್ತನೆ ಮಾಡಿದ್ದಾರೆ. ಆದರೆ ಆ ಬೆಳೆಯೆಲ್ಲಾ ಹಾಳಾಗಿ ಹೋಯಿತು. ಸೀಡ್ ಫಾರಮ್‌ಗಳಲ್ಲಿ ಒಬ್ಬೊಬ್ಬರು ಒಂದೊಂದು ತರಹ ಬೀಜಗಳನ್ನು ಬೆಳೆಯುತ್ತಾರೆ. ಅದನ್ನು ಹೇಗೆ ಬೆಳೆಯಬೇಕು, ಯಾವ ರೋಗ ಬಂದರೆ ಯಾವ ಔಷಧಿಯನ್ನು ಹಾಕಬೇಕು, ಯಾವುದನ್ನು ಉಪಯೋಗಿಸಿದರೆ ರೋಗವು ಕಂಪ್ಲೀಟಾಗಿ ಕ್ಯೂರ್ ಆಗುತ್ತದೆ ಎಂಬುದು ರೈತರಿಗೆ ಕಂಡುಬರುವುದಿಲ್ಲ. ಆದ್ದರಿಂದ ಅದನ್ನು ರಿಸರ್ಚ್ ಮಾಡಬೇಕಾದ್ದು ಅಗತ್ಯ. ಮತ್ತು ಬೆಳೆಗಳಿಗೆ ರೋಗ ಬಂದಾಗ ಯಾವ ಔಷಧಿಯನ್ನು ಹೇಗೆ ಎಷ್ಟು ಪ್ರಮಾಣದಲ್ಲಿ ಹೊಡೆಯಬೇಕು, ಎನ್ನುವ ಬಗ್ಗೆ ರೈತರಿಗೆ ತಿಳುವಳಿಕೆಯನ್ನು ಕೊಡಬೇಕು. ಅವರು ವ್ಯವಸಾಯಕ್ಕೆ ಬೇಕಾದಷ್ಟು ದುಡ್ಡನ್ನು ಇನ್‌ವೆಸ್ಟ್ ಮಾಡಿರುತ್ತಾರೆ. ಒಂದು ವೇಳೆ ಬೆಳೆ ಏನಾದರೂ ಕೆಟ್ಟು ಹೋದರೆ ಅವರಿಗೆ ತೊಂದರೆಯಾಗುತ್ತದೆ. ಹೈಬ್ರಿಡ್ ಸೀಡ್ಸ್‌ಗೆ ಪ್ರೊಸೆಸಿಂಗ್ ಯೂನಿಟ್ ಬೇಕಾಗಿದೆ. ನಾವು ಬೆಳೆಯುವ ಬೀಜಗಳಿಗೆ ಸರ್ಟಿಫಿಕೇಟ್ ಸಿಕ್ಕದೇ ಇದ್ದರೆ ಬೀಜಗಳನ್ನು ಹಂಚುವುದಕ್ಕೆ ಅನಾನುಕೂಲವಾಗುತ್ತದೆ ಎಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಎರಡು ಪ್ರೊಸೆಸಿಂಗ್ ಯೂನಿಟ್‌ಗಳು ಬೇಕಾಗುತ್ತದೆ. ಆದ್ದರಿಂದ ಅವುಗಳನ್ನು ಕಾಲಕ್ಕೆ ಸರಿಯಾಗಿ ತರಿಸಿ ಕೊಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ತುಂಗಭದ್ರಾ ಏರಿಯಾದಲ್ಲಿ ಕೆಲಸ ಮಾಡುವುದಕ್ಕೋಸ್ಕರ 30 ಟ್ರ್ಯಾಕ್ಟರುಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಈಗ ಟ್ರ್ಯಾಕ್ಟರುಗಳನ್ನು ನಡೆಸುವುದಕ್ಕೆ ಫುಲ್‌ಟೈಂ ಕೆಲಸ ಮಾಡತಕ್ಕ ಸಿಬ್ಬಂದಿ ವರ್ಗ ಇಲ್ಲ. ಪ್ರೈವೇಟ್ ಏಜೆನ್ಸಿಯವರು ಇಟ್ಟಿರತಕ್ಕ ಟ್ರ್ಯಾಕ್ಟರುಗಳಿಂದ 8 ರಿಂದ 12 ಗಂಟೆಗಳ ಕಾಲ ಕೆಲಸವನ್ನು ಮಾಡುತ್ತಾರೆ. ಸರ್ಕಾರಕ್ಕೆ ಸಂಬಂಧಪಟ್ಟ ಟ್ರ್ಯಾಕ್ಟರುಗಳಲ್ಲಿ ಫುಲ್‌ಟೈಮ್ ಕೆಲಸ ಮಾಡತಕ್ಕವರು ಇಲ್ಲದೆ ಇರುವುದರಿಂದ 5-6 ಗಂಟೆಗಳಕಾಲ ಕೂಡ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ತುಂಗಭದ್ರಾ ಏರಿಯಾಕ್ಕೆ ಸರ್ಕಾರದವರು 30 ಟ್ರ್ಯಾಕ್ಟರುಗಳನ್ನೇನು ಮಂಜೂರು ಮಾಡಿದ್ದಾರೆ ಅವುಗಳಿಗೆ ಸಂಬಂಧಪಟ್ಟ ಹಾಗೆ ಫುಲ್‌ಟೈಮ್ ಕೆಲಸ ಮಾಡತಕ್ಕ ಸಿಬ್ಬಂದಿಯನ್ನು ನೇಮಕ ಮಾಡುವುದಕ್ಕೆ ಸರ್ಕಾರದವರು ಮಂಜೂರು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಟ್ರ್ಯಾಕ್ಟರುಗಳು ಎಲ್ಲಾ ಸಂಪೂರ್ಣವಾಗಿ ಕೆಲಸ ಮಾಡುವಂತಾಗಬೇಕು. ಕೆಲವು ಸಂದರ್ಭಗಳಲ್ಲಿ ಟ್ರ್ಯಾಕ್ಟರುಗಳಿಗೆ ಬೇಕಾದಂತಹ ಸಣ್ಣ ಸಣ್ಣ ಸಾಮಾನುಗಳು ಇಲ್ಲದೆ ಟ್ರಾಕ್ಟರುಗಳು ನಿಲ್ಲುತ್ತವೆ. ಆದ್ದರಿಂದ ಆ ತುಂಗಭದ್ರಾ ಏರಿಯಾದಲ್ಲಿ ಒಂದು ಸರ್ವೀಸ್ ಸ್ಟೇಷನ್ ಮಾಡುವುದು ಅಗತ್ಯ ಇದೆ. ಅದರ ಸಲುವಾಗಿ ಡಿಪಾರ್ಟ್‌ಮೆಂಟ್ ವತಿಯಿಂದ ಆಧುನಿಕ ಪದ್ಧತಿಯ ಪ್ರಕಾರ ಒಂದು ಸರ್ವೀಸ್ ಸ್ಟೇಷನ್ ಅನ್ನು ಪ್ರಾರಂಭ ಮಾಡಬೇಕು. ಅದನ್ನು ಮಾಡುವುದರಿಂದ ಸರ್ಕಾರದ ಟ್ರ್ಯಾಕ್ಟರುಗಳನ್ನೂ ರಿಪೇರಿ ಮಾಡಬಹುದು ಮತ್ತು ಪ್ರೈವೇಟ್ ಆಗಿರತಕ್ಕ ಟ್ರ್ಯಾಕ್ಟರುಗಳನ್ನು ರಿಪೇರಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು Supply of improved seeds ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್‌ನವರು ಸ್ವಲ್ಪ ಇಂಪ್ರೂವ್ಡ್ ಸೀಡ್‌ಗಳನ್ನು ಒದಗಿಸುತ್ತಿದ್ದಾರೆ. ಹೈಬ್ರಿಡ್ ಜೋಳ, ಮೆಕ್ಕೆ ಜೋಳ, ಗೋಧಿ ಮುಂತಾದ ಉತ್ತಮವಾದ ಬೀಜಗಳು ಅವರ ಹತ್ತಿರ ಇದೆಯೆಂದು ಹೇಳಬರುತ್ತದೆ. ಈಗ ಅಲ್ಲಿಂದ ಎರಡು ಜಿಲ್ಲೆಗಳಿಗೆ ಮಾತ್ರ ಬೀಜ ಸಿಕ್ಕುತ್ತಿದೆ. ಆ ಏರಿಯಾದಲ್ಲಿ ಗೋಧಿ ಬಹಳ ಚೆನ್ನಾಗಿ ಬೆಳೆಯುತ್ತದೆ. ಆ ತರಹ ಬೀಜಗಳು ಸಿಕ್ಕುವುದಾದರೆ ಗೋಧಿ ಬೆಳೆಯನ್ನು ಎರಡು ಬೆಳೆ ಬೆಳೆಯಬಹುದು. ಮತ್ತು ಬೆಂಡೆ, ಬದನೆ ಮುಂತಾದ ಕಾಯಿ ಪಲ್ಯಗಳನ್ನು ಅಲ್ಲಿ ಬೆಳೆಯುವುದಕ್ಕೆ ಅವಕಾಶ ಇದೆ. ಸರ್ಕಾರಿ ಸೀಡ್ ಫಾರಮ್‌ಗಳಲ್ಲಿ ಸೀಡ್ಸ್ ಮಲ್ಟಿಪ್ಲೈ ಮಾಡುವುದಕ್ಕೆ ಏರ್ಪಾಡು ಮಾಡಬೇಕು.

ಕೇಂದ್ರದ ಆಹಾರಖಾತೆಯ ಸಚಿವರಾದ ಶ್ರೀ ಸಿ. ಸುಬ್ರಹ್ಮಣ್ಯಂ ಅವರು ನಮ್ಮ ತುಂಗಭದ್ರಾ ಏರಿಯಾಕ್ಕೆ ಬಂದು ಅಲ್ಲಿನ ರೈತರಿಗೆ ದೊಡ್ಡ ಸಹಾಯ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ನಮಗೆ ಗೊಬ್ಬರ ಮತ್ತು ತಾಯಿ ನೆಲ್ಲಿನ ಬೀಜವನ್ನು ಕೊಡುತ್ತೇವೆಂದು ಹೇಳಿದ್ದಾರೆ. ತಾಯಿ ನೆಲ್ಲನ್ನು ಬೆಳೆಯುವುದಕ್ಕೆ ಅದಕ್ಕೆ ಸಂಬಂಧಪಟ್ಟ ಫರ್ಟಿಲೈಜರ್ಸ್ ಮತ್ತು ಇನ್‌ಸೆಕ್ಟಿಸೈಡ್ಸ್ ಅನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆ ಬಗೆಯ ಬತ್ತವನ್ನು ಬೆಳೆದು ಮಾರ್ಕೆಟ್ ರೇಟಿಗೆ ಕೊಡಬೇಕೆಂದು ಅದಕ್ಕೆ ನಮ್ಮ ಒಪ್ಪಿಗೆಯನ್ನು ಕೂಡ ಕೇಳಿದ್ದಾರೆ. ಆದರೆ ಅದಕ್ಕೆ ಕೆಲವರು ಒಪ್ಪಲಿಲ್ಲ. ತಾಯಿ ವೆರೈಟಿ ಬತ್ತವನ್ನು ಬೆಳೆದವರಿಗೆ ಫರ್ಟಿಲೈಜರ್ಸ್ ಕೊಡುತ್ತೇವೆಂದು ಹೇಳಿದ್ದಾರೆ. ಆ ವೆರೈಟಿ ಬತ್ತವನ್ನು ಬೆಳೆದರೆ ಬಹಳ ಜಾಗ್ರತೆಯಾಗಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ; ಆದ್ದರಿಂದ ಅದನ್ನು ಬೆಳೆಯತಕ್ಕವರಿಗೆ ಒಂದು ತರಹ ಸಹಾಯ ಮಾಡಬೇಕೆಂದು ಮಾನ್ಯ ಮಂತ್ರಿ

(ಶ್ರೀಮತಿ ಬಸವರಾಜೇಶ್ವರಿ)

ಗಳು ಆ ಪ್ರದೇಶಕ್ಕೆ ಬಂದಿದ್ದಾಗ ನಾವು ಹೇಳಿದ್ದೆವು. ಮುಖ್ಯ ಮಂತ್ರಿಗಳನ್ನು ಅದನ್ನು ಒಪ್ಪಿ ಕೊಂಡಿದ್ದರು. ಖಾರೀಫ್ ಸೀಜನ್ನಿಗೆ ಸಂಬಂಧಪಟ್ಟ ಹಾಗೆ ಒಂದು ಪ್ರೋಗ್ರಾಮ್ ಹಾಕಿಕೊಂಡು ಇಷ್ಟು ಎಕರೆಯಲ್ಲಿ ನಾವು ತಾಚು ಬತ್ತವನ್ನು ಬೆಳೆಯುತ್ತೇವೆ ಎಂದರೆ ಅದಕ್ಕೆ ಸಕಾಲದಲ್ಲಿ ಫರ್ಟಿ ಲೈಜರ್ಸ್, ಇನ್‌ಸೆಕ್ಟಿಸೈಡ್ಸ್ ಮತ್ತು ಬೀಜ ಇವುಗಳನ್ನು ಕೊಡುತ್ತೇವೆಂದು ಶ್ರೀ ಸುಬ್ರಹ್ಮಣ್ಯಂ ಅವರು ಒಪ್ಪಿಕೊಂಡು ಹೋಗಿದ್ದಾರೆ. ಆದ್ದರಿಂದ ನಮ್ಮ ಇಲಾಖೆಯವರು ಶ್ರೀ ಸುಬ್ರಹ್ಮಣ್ಯಂ ಅವರಿಗೆ ಪತ್ರ ಬರೆದು ಸಕಾಲದಲ್ಲಿ ಬೀಜ, ಗೊಬ್ಬರ ಮತ್ತು ಇನ್‌ಸೆಕ್ಟಿಸೈಡ್‌ಗಳನ್ನು ತರಿಸಿಕೊಡು ವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ರಾಯಚೂರಿಗೆ ಒಂದು ಅಗ್ರಿಕಲ್‌ಚರಲ್ ಕಾಲೇಜನ್ನು ಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಈ ವಿಷಯವನ್ನು ನಾವು ಅನೇಕ ಸಾರಿ ಅರಿಕೆ ಮಾಡಿಕೊಂಡಿದ್ದೇವೆ. ಯಾವ ರೀತಿಯಿಂದಲಾದರೂ ಮಾಡಿ ರಾಯಚೂರಿಗೆ ಆದಷ್ಟು ಬೇಗ ಒಂದು ಅಗ್ರಿಕಲ್‌ಚರಲ್ ಕಾಲೇಜನ್ನು ಕೊಡಬೇಕು. ಆ ಅಗ್ರಿಕಲ್‌ಚರಲ್ ಕಾಲೇಜಿಗೆ ಒಂದು ದೊಡ್ಡ ಪ್ರಮಾಣದ ರಿಸರ್ಚ್ ಸ್ಟೇಷನ್ ಕೊಡಬೇಕು. ಒಂದು ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ಕೊಡಬೇಕು. ಎಲ್ಲಾ ಉಪಕರಣ ಗಳಿಂದಲೂ ಕೂಡಿರತಕ್ಕ ಒಂದು ಉತ್ತಮವಾದ ಅಗ್ರಿಕಲ್‌ಚರಲ್ ಕಾಲೇಜನ್ನು ಅಲ್ಲಿಗೆ ಕೊಡುವುದು ಅಗತ್ಯ ಇದೆ. ಇಲ್ಲಿ ನಾನು ಎರಡು ಮೂರು ವರ್ಷದಿಂದಲೂ ಸೀಡ್ ಆಕ್ಟು ಹಾಗೂ ಪೆಸ್ಟ್ಸ್ ಕಂಟ್ರೋಲು ಆಕ್ಟು ಜಾರಿಗೆ ತಂದು ಅದನ್ನೂ ಚಾಲೂ ಮಾಡಬೇಕೇಂದು ಹೇಳುತ್ತಿದ್ದರೂ ಅದರ ಕಡೆಗೆ ಗಮನ ಕೊಡುತ್ತಿಲ್ಲ. ಈಗ ಹೈ ಬ್ರಿಡ್ ಜೋಳದ ಬೀಜ ಕೆ. ಜಿ. ಒಂದಕ್ಕೆ 15 ರಿಂದ 20 ರೂಪಾಯಿಗಳಷ್ಟು ಆಗಿದೆ ಎಂದು ತಿಳಿದು ಕೆಲವು ಕಡೆಗಳಲ್ಲಿ ಜನಕ್ಕೆ ಮೋಸ ಮಾಡಲು ಅಡಲ್ಟ್ರೇಟೆಡ್ ಸೀಡುಗಳನ್ನು ಮಾರುತ್ತಿರುವುದರಿಂದ ಅನೇಕ ರೈತರಿಗೆ ಇದರಿಂದ ಬಹಳ ಹಾನಿಯುಂಟಾಗುತ್ತದೆ. ಇದಕ್ಕಾಗಿ ಸೀಡ್ ಆಕ್ಟು ಹಾಗೂ ಪೆಸ್ಟ್ ಕಂಟ್ರೋಲ್ ಆಕ್ಟ್‌ಗಳನ್ನು ಜಾರಿಗೆ ತಂದರೆ ಅದರ ಮೂಲಕ ಸೀಡುಗಳನ್ನು ಬೆರಕೆ ಮಾಡುವವರಿಗೆ ಶಿಕ್ಷೆ ಮಾಡಲು ಅನುಕೂಲ ವಾಗುತ್ತದೆ. ಆದುದರಿಂದ ಸರಕಾರ ರೈತರಿಗೆ ಆಗುವ ಅನಾಹುತಗಳನ್ನು ತಪ್ಪಿಸುವ ಸಲುವಾಗಿ ಆದಷ್ಟು ಜಾಗ್ರತೆ ಸೀಡು ಆಕ್ಟು ಹಾಗೂ ಪೆಸ್ಟ್ ಕಂಟ್ರೋಲ್ ಆಕ್ಟುಗಳನ್ನು ಜಾರಿಗೆ ತರಬೇಕೆಂದು ಸೂಚಿಸುತ್ತೇನೆ.

ಮತ್ತೆ ಇಂಡಿಯಾ ಸರಕಾರದವರು ಮೊದಲಿಗೆ ಪವರು ಸ್ಪ್ರೇಯರುಗಳನ್ನು ನಮ್ಮ ಕಡೆಗೆ ಕೊಡುತ್ತೇವೆ ಮತ್ತು ಇದಕ್ಕೆ 1,200 ರೂಪಾಯಿಗಳಷ್ಟು ಬೆಲೆ ಬರುತ್ತೆ ಎಂದು ಇದ್ದದ್ದು ಈಗ 940 ರೂಪಾಯಿಗೆ ಹೊರಗೆ ಮಾರುತ್ತಿದ್ದಾರೆ. ಇದನ್ನು ಕೇವಲ 600 ರೂಪಾಯಿಗಳಷ್ಟು ಬೆಲೆಯಲ್ಲಿ ರೈತರಿಗೆ ಕೊಡುತ್ತೇವೆಂದು ಇಂಡಿಯಾ ಸರಕಾರದವರು ಹೇಳಿದಾಗ ಅದನ್ನು ನಮ್ಮ ಸರಕಾರದಲ್ಲಿ ರುವ ಅಧಿಕಾರಿಗಳು ತೆಗೆದುಕೊಂಡು ಸಹಾಯ ಮಾಡಿಕೊಡದೇಹೋದುದು ತುಂಬಾ ವಿಷಾದಕರ ವಾದ ಸಂಗತಿ. ನಮ್ಮಲ್ಲಿ ಈಗ ಕೂಲಿ ಜನರು ಸಿಗದೇ ಇರುವ ಕಾಲದಲ್ಲಿ ಬ್ರಿಡ್ ಸೀಡುಗಳನ್ನು ಹಾಕುವಾಗ ಇಂತಹ ಪವರು ಸ್ಪ್ರೇಯರುಗಳು ಬಹಳ ಅಗತ್ಯವಾಗಿ ಬೇಕಾಗುತ್ತವೆ. ಈಗಲಾದರೂ ಸರಕಾರ ಇದರ ಕಡೆಗೆ ವಿಶೇಷ ಗಮನ ಕೊಟ್ಟು ನಮ್ಮ ಭಾಗದ ರೈತರಿಗೆ ಆದಷ್ಟು ಜಾಗ್ರತೆ ಪವರು ಸ್ಪ್ರೇಯರುಗಳನ್ನು ಒದಗಿಸಿ ಕೊಟ್ಟರು ನಮ್ಮ ರೈತರಿಗೆ ಎಷ್ಟೋ ಅನುಕೂಲಗಳನ್ನು ಕಲ್ಪನೆ ಮಾಡಿ ಕೊಟ್ಟಂತಾಗುತ್ತದೆ. ಮೊದಲಿಗೆ ಇದರ ಬೆಲೆ 1,200 ಇದ್ದುದನ್ನು ರೈತರು ಕೊಡಲು ಆಗುವುದಿಲ್ಲ ಎಂದು ಇತ್ತು ಈಚೆಗೆ ಇದರ ಬೆಲೆಯನ್ನು 600 ರೂಪಾಯಿಗಳವರೆಗೆ ಇಳಿಸಿರುವುದರಿಂದ ನಮ್ಮ ರೈತರು ಇದನ್ನು ತೆಗೆದುಕೊಳ್ಳಲು ಆತುರರಾಗಿದ್ದಾರೆ. ಸರಕಾರ ಜಾಗ್ರತೆ ಇಂತಹ ಪವರು ಸ್ಪ್ರೇಯರುಗಳನ್ನು ಪಡೆದು ರೈತರಿಗೆ ಹಂಚುವ ವ್ಯವಸ್ಥೆ ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಈಗ ಕೂಲಿ ಜನಕ್ಕೆ ಇಲ್ಲಿ ರೇಟುಗಳನು ಕೊಡುತ್ತಿರುವುದು ಬಹಳ ಕಡಿಮೆ. ಇದರಿಂದಾಗಿ ಸಾಯಿಲ್ ಕನ್‌ಸರ್‌ವೇಷನ್ ಕಾಮಗಾರಿ ತೆಗೆದುಕೊಂಡಾಗ ಕೂಲಿ ಕಡಿಮೆ ಎಂದು ಕೂಲಿಗಾರರು ಕೆಲಸ ಮಾಡಲು ಮುಂದೆ ಬರುವುದಿಲ್ಲ. ಇವೊತ್ತು ಒಂದು ಕೆ. ಜಿ. ಜೋಳ ಅಥವಾ ಬೇರೆ ದವಸ ಸಿಗುತ್ತಿಲ್ಲ. ಇದರಿಂದ ಇವರು ಒಂದು ಮೈಲಿ ಗುಂಡಿ ಅಗೆಯಿರಿ ಎಂದು ಅವರಿಗೆ ಕಡಿಮೆ ಕೂಲಿ ಕೊಟ್ಟರೆ ಅದರಿಂದ ಯಾವ ರೀತಿ ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳನ್ನು ಮಾಡಲು ಸಾಧ್ಯ ! ಇಲ್ಲಿ ಕೂಲಿ ಕೆಲಸ ಮಾಡುವ ಜನಕ್ಕೆ ಕೊಡುತ್ತಿರುವ ಕೂಲಿ ಬಹಳ ಕಡಿಮೆ. ಇದನ್ನು ಸರಕಾರ ಗಮನಕ್ಕೆ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ರೇಟುಗಳನ್ನು ಪರಿಶೀಲನೆ ಮಾಡಿ ಹೆಚ್ಚಿಸುವುದರ ಕಡೆಗೆ ಪ್ರಯತ್ನ ಮಾಡ ಬೇಕೆಂದು ನನ್ನ ಸಲಹೆ.

ಇನ್ನು ಅಗ್ರಿಕಲ್‌ಚರು ಗ್ರಾಜುಯೇಟುಗಳಾಗಿರುವವರು ಈಚೆಗೆ ಸ್ಟ್ರೈಕು ಮಾಡಿದ ವಿಚಾರ ತಮಗೆಲ್ಲರಿಗೂ ತಿಳಿದಿದೆ. ಅವರಿಗೆ ಮೆಡಿಕಲ್ ಗ್ರಾಜುಯೇಟ್‌ಗಳಿಗೆ ಹಾಗೂ ಇಂಜನೀಯರಿಂಗು ಗ್ರಾಜುಯೇಟ್‌ಗಳಿಗೆ ಯಾವ ರೀತಿಯ ಸ್ಥಾನ ಮಾನಗಳು ಅವರ ಸಂಬಳಸಾರಿಗೆ ವಿಚಾರದಲ್ಲಿ ಇದೆಯೋ ಅದನ್ನು ಕೊಡಬೇಕೆಂದು ಕೇಳಿದುದನ್ನು ಸರಕಾರ ಪರಿಶೀಲಿಸಿ ಸರಿಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ಇದರ ಬಗ್ಗೆ ಈಗಾಗಲೇ ಮದರಾಸು ಹಾಗೂ ಆಂಧ್ರಗಳಲ್ಲಿ ಅಗ್ರಿಕಲ್‌ಚರು ಗ್ರಾಜುಯೇಟುಗಳಿಗೆ ಒಂದೇ ರೀತಿಯಾದ ಸಂಬಳ ಸಾರಿಗೆಗಳನ್ನು ಮಾಡಿ ಕೊಟ್ಟಿದ್ದಾರೆ ಇಲ್ಲಿರುವ ಗ್ರಾಜ್ಯುಯೇಟುಗಳಿಗೆ ಮಾಡದೆ ಇದ್ದರೆ ಅವರಿಗೆ ಬಹಳ ಅನಾನುಕೂಲವಾಗುತ್ತದೆ. ಆದಷ್ಟು ಬೇಗ ಇದನ್ನು ಪೂರ್ತಿ ಇತ್ಯರ್ಥ ಮಾಡಲು ಮಾನ್ಯ ಮಂತ್ರಿಗಳು ಇದರ ಬಗ್ಗೆ ಬೇಗನೆ ಕಾರ್ಯಗತ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಅರಣ್ಯದ ಇಲಾಖೆ ಬಗ್ಗೆ ಒಂದು ವಿಚಾರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಅನೇಕ ವರ್ಷಗಳಿಂದಲೂ ಫಾರೆಸ್ಟು ಏರಿಯಾದಲ್ಲಿ ಬೋನಫೈಡ್ ಕಲ್ಟಿವೇಟರುಗಳಾಗಿ ಲಂಬಾಣಿ ಜನರು ಹಾಗೂ ಬಡ ಹರಿಜನರು ಸಾಗುವಳಿ ಮಾಡಿಕೊಂಡು ಇದ್ದಾರೆ. ಕಳೆದ 15—16 ವರ್ಷಗಳಿಂದಲೂ ಇವರು ಕೃಷಿ ಮಾಡಿಕೊಂಡು ಬರುತ್ತಿದ್ದರೂ ಕೂಡ ಆಗ ಇದ್ದ ಸಂಸ್ಥಾನ ಸರಕಾರದವರು ಅವರ ಜಮೀನುಗಳಿಗೆ ಪಟ್ಟಾ ಮಾಡಿಕೊಡಲಿಲ್ಲ. ಆದರೆ ಈಚೆಗೆ ಇದರ ರಿಕಾರ್ಡುಗಳನ್ನು ಟ್ರಾನ್ಸ್‌ಫರು ಮಾಡುವಾಗ ಈ ಜನರು ಕಷ್ಟಪಟ್ಟು ಬಹು ವರ್ಷಗಳಿಂದಲೂ ಕಲ್ಟಿವೇಟು ಮಾಡುತ್ತಿದ್ದರೂ ಇವರನ್ನು ಜಮೀನುಗಳಿಂದ ಬಿಡಿಸಬೇಕೆಂದು ಅಲ್ಲಿ ಕೆಲವು ಜನರು ಬಹಳ ತೊಂದರೆ ಕೊಡುತ್ತಿದ್ದಾರೆ. ಇವರಲ್ಲೇ ಇರುವ ಕೆಲವು ಜನ ಇವರನ್ನು ಎಕ್ಸ್‌ಪ್ಲಾಯಿಟ್ ಮಾಡಲು ಪ್ರಯತ್ನ ಮಾಡಿ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಈ ಬಡ ಜನರು ಅಲ್ಲಿದ್ದ ಕಲ್ಲು ಮಣ್ಣುಗಳನ್ನು ಹಾಗೂ ಮುಳ್ಳುಗಳನ್ನು ತೆಗೆದು ಅಷ್ಟೋ ಇಷ್ಟೋ ಬೆಳೆಯುತ್ತಿದ್ದಾರೆ. ಇಂತಹ ಜನರಿಗೆ ಭೂಮಿ ತಪ್ಪಿಸಿದರೆ ತುಂಬಾ ಹಾನಿಯಾಗುತ್ತದೆ. ಇದರ ಕಡೆಗೆ ಸರಕಾರ ಆದಷ್ಟು ಬೇಗ ನಿರ್ಣಯ ತೆಗೆದುಕೊಂಡು ಹತ್ತು ಹದಿನೈದು ವರ್ಷಗಳಿಂದಲೂ ಇಲ್ಲಿ ಜೀವನ ಮಾಡುತ್ತಿರುವ ಜಮೀನುಗಳನ್ನು ಉಳಿಸಿಕೊಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರು ಇಷ್ಟು ಕಾಲ ಮಾತನಾಡಲು ನನಗೆ ಅವಕಾಶ ಕೊಟ್ಟುದಕ್ಕೆ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, 5.65 ಲಕ್ಷ ರೂಪಾಯಿಗಳ ಬೇಡಿಕೆಗಳನ್ನು ನಮ್ಮ ಮುಂದೆ ವ್ಯವಸಾಯಕ್ಕಾಗಿ ಬೇಕೆಂದು ಇಟ್ಟಿದ್ದಾರೆ.

ನಮ್ಮ ದೇಶದಲ್ಲಿ ಅತಿ ಮುಖ್ಯವಾದ ಕಸಬು ಮತ್ತು ನಮ್ಮ ದೇಶದಲ್ಲಿ ಹೆಚ್ಚಿನ ಪ್ರಜೆಗಳು ಜೀವನ ಮಾಡುತ್ತ ಇರತಕ್ಕ ಕಸಬು ಎಂದರೆ ವ್ಯವಸಾಯ. ನಮ್ಮ ಕಸುಬು ವ್ಯವಸಾಯ ಎಂದು ಹೇಳಿಕೊಂಡರೂ ಕೂಡ ಈಗ್ಗೆ ನೂರಾರು ವರ್ಷಗಳ ಹಿಂದೆ ನಾವು ಯಾವ ಸ್ಥಿತಿಯಲ್ಲಿದ್ದೆವೋ ಇವೊತ್ತು ಇಷ್ಟು ಯೋಜನೆಗಳಾದರೂ ಅದೇ ಸ್ಥಿತಿಯಲ್ಲಿದ್ದೇವೆ. ಅಲ್ಲದೆ ವ್ಯವಸಾಯದ ಬಾಬಿನಲ್ಲಿ ಕೆಲಸಮಾಡುವ ಅಧಿಕಾರಿಗಳೂ ಕೂಡ ಇದರ ಕಡೆಗೆ ಹೆಚ್ಚು ಪ್ರಯತ್ನ ಮಾಡಲು ಆಗಲಿಲ್ಲ ಎನ್ನುವುದನ್ನು ನೋಡಿದರೆ ನಮಗೆ ಬಹಳ ವ್ಯಸನವಾಗುತ್ತದೆ. ಈ ವ್ಯವಸಾಯ ಇಲಾಖೆಯಲ್ಲಿ ನೂರಾರು ಜನ ಕೆಲಸ ಮಾಡತಕ್ಕವರು ಇದ್ದರೂ, ಅದರಲ್ಲೂ ಹೆಚ್ಚಾಗಿ ವ್ಯವಸಾಯ ಕ್ಷೇತ್ರದಲ್ಲಿ ಪದವಿಯನ್ನು ಪಡೆದುಕೊಂಡು ಬಂದಿರತಕ್ಕ ಜನರೂ ಇದ್ದಾರೆ. ಇಷ್ಟೆಲ್ಲಾ ಇದ್ದರೂ ನಮ್ಮ ಅಧಿಕಾರಿಗಳು ಜಮೀನಿನಲ್ಲಿ ನಿಂತು ಕೆಲಸ ಮಾಡುವ ಮನೋಭಾವವಿಲ್ಲದೆ ಬರೀ ಸೂಟು ಬೂಟುಗಳಿಂದ ಹಳ್ಳಿಗಳಲ್ಲಿರುವ ಹೊಲ ಗದ್ದೆಗಳಲ್ಲಿ ಕೆಲಸ ಮಾಡುವ ಜನರ ಸಂಪರ್ಕ ಪಡೆಯಲು ಅವರಿಗೆ ಆಗುತ್ತಿಲ್ಲ. ರೈತನು ಹೇಗೆ ಚಡ್ಡಿ ಹಾಕಿಕೊಂಡು ಜಮೀನಿನಲ್ಲಿ ಕೆಲಸ ಮಾಡುತಾನೋ ಹಾಗೆ ಮಾಡದೆ ಸುಮ್ಮನೆ ತವರಿನ ಮೇಲೆ ಓಡಾಡಿಕೊಂಡು ಸೂಟು ಬೂಟು ಹಾಕಿಕೊಂಡು ಇದ್ದರೆ ಇಲ್ಲಿ ವ್ಯವಾಸಾಯವಾಗುವುದಿಲ್ಲ. ಅಧಿಕಾರಿಗಳು ಈ ಕಡೆಗೆ ಸ್ವಲ್ಪ ನಿಗಾ ವಹಿಸಿ ಅವರು ವೇಷಭೂಷಣಗಳನ್ನು ರೈತನಂತೆ ಮಾರ್ಪಾಡು ಮಾಡಿಕೊಂಡರೆ ಅನುಕೂಲವಾಗುತ್ತದೆ. ಇವೊತ್ತು ಶೇಕಡ ಎಂಬತ್ತರಷ್ಟು ಭಾಗದ ಜನರು ವ್ಯವಸಾಯದಿಂದ ಜೀವನ ಮಾಡುತ್ತಾರೆ. ಮತ್ತು ವ್ಯವಸಾಯದ ಕಸಬನ್ನು ಮಾಡುತ್ತಿದ್ದಾರೆ. ನಮಗೆ ಈಗ ಲಕ್ಷ ಗಟ್ಟಲೆ ಆಹಾರದ ಕೊರತೆ ಇದೆ ಎಂದು ಅಮೇರಿಕಾ ಹಾಗೂ ಆಸ್ಟ್ರೇಲಿಯಾ ದೇಶಗಳಿಂದ ದವಸಗಳನ್ನು ತರಿಸಿ ತಿನ್ನಬೇಕಾಗಿ ಬಂದಿದೆ. ಇದಕ್ಕೆ ಕಾರಣಗಳನ್ನು ಸ್ವಲ್ಪ ವಿವೇಚನೆ ಮಾಡಬೇಕಾದುದು ಅಗತ್ಯ. ಇವೊತ್ತು ಒಬ್ಬ ರೈತ ಸುಖವಾಗಿ ಸಂಸಾರ ಸಾಗಿಸಬೇಕಾದರೆ ಕನಿಷ್ಟಪಕ್ಷ ನೀರಿನ ಹಾಗೂ ಇತರ ಸೌಕರ್ಯಗಳೂ ಸೇರಿ ಸುಮಾರು 10 ಎಕ್ಕರೆಗಳಷ್ಟು ಭೂಮಿ ಇರಬೇಕಾಗುತ್ತದೆ. ಈಗ ನಮ್ಮಲ್ಲಿ 3-4 ಎಕರೆಗಳಷ್ಟು ಹಿಡುವಳಿ ಇರುವವರೇ ಹೆಚ್ಚು. ಇವರು ಕಷ್ಟಪಟ್ಟು ಕೆಲಸ ಮಾಡುತ್ತ ಇದ್ದರೂ ಕೂಡ ಸರಿಯಾದ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಪ್ರತಿಫಲ ದೊರಕುತ್ತಿಲ್ಲ. ಏನೋ ಅಪ್ಪ ಹಾಕಿದ ಆಲದ ಮರ ಎನ್ನುವಂತೆ ವ್ಯವಸಾಯ ಮಾಡು ತ್ತಿದ್ದಾನೆ. ಆದ್ದರಿಂದ ಹೆಚ್ಚು ಉತ್ಪತ್ತಿ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ವ್ಯವಸಾಯ ಕ್ಷೇತ್ರದಲ್ಲಿ ಇಷ್ಟೇ ಆದಾಯ ಕ್ಲುಪ್ತವಾಗಿ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ದೇಶದ ಕೈಗಾರಿಕೆಯಲ್ಲಿರುವಷ್ಟು ಕೂಲಿ ನಿಗದಿಯಾಗಿರುವಂತೆ ಇಲ್ಲಿ ಬರುವುದಿಲ್ಲ. ಏನೋ ಸಂಬಳ ಸಾರಿಗೆ ಬರುತ್ತಿರುವವರು ಏನೋ ಒಂದು ರೀತಿ ಜೀವನ ಮಾಡಿಕೊಂಡು ಹೋಗುತ್ತಿದ್ದಾರೆ. ವ್ಯವಸಾಯ ಗಾರನ ಪರಿಸ್ಥಿತಿಯನ್ನು ಈ ವರ್ಷ ನೋಡಿದರೆ, ಮಳೆ ಬೆಳೆಗಳು ಬಾರದೆ ಇದ್ದಬದ್ದ ಹಣವನ್ನೆಲ್ಲಾ ಬಿತ್ತನೆಗೆ ಹಾಕಿ ನರಳುವಂತಹ ಸ್ಥಿತಿಗೆ ಸಿಕ್ಕಿದ್ದಾನೆ. ವ್ಯವಸಾಯ ಕ್ಷೇತ್ರದಲ್ಲಿ ಈ ಪರಿಸ್ಥಿತಿ ಒದಗಿರುವುದರಿಂದ ಬಹಳ ಕಷ್ಟವಾಗುತ್ತದೆ. ಈಗ ಕೇಂದ್ರ ಸರಕಾರದವರು ಪಾಕೀಸ್ತಾನದ ಜೊತೆಯಲ್ಲಿ ನಾವು ಯುದ್ಧ ಮಾಡುತ್ತೇವೆ ಎಂದು ಹೇಳಿ ಅದಕ್ಕೆ ಸುಮಾರು ಸಾವಿರ ಚಿಲ್ಲರೆ ಕೋಟಿಯಷ್ಟು ಹಣ ಖರ್ಚಾಯಿತು ಎಂದು ಹೇಳುತ್ತಾರೆ. ಇವೊತ್ತು ನಮಗೆ ಈ ಆಹಾರದ ಅಭಾವ ಪರಿಸ್ಥಿತಿಯಲ್ಲೂ ಕೂಡ ಇದೇ ರೀತಿ ಹಣವನ್ನು ಖರ್ಚು ಮಾಡಿದ್ದರೆ ವ್ಯವಸಾಯ ಕ್ಷೇತ್ರದಲ್ಲಿರುವ ರೈತರಿಗೆ ಎಲ್ಲ ಸೌಲಭ್ಯಗಳನ್ನೂ ಕೊಟ್ಟಿದ್ದರೆ ಆಹಾರದ ಕೊರತೆ ಸುಲಭವಾಗಿ ಪರಿಹಾರವಾಗುತ್ತಿತ್ತೋ ಏನೋ ಎಂದು ನನಗನಿಸುತ್ತದೆ.

ರೈತರಲ್ಲಿ ಇವತ್ತು ನೀರಾವರಿ ಬಾವಿಗಳ ಮೇಲೆ ಬಹಳ ಮುತುವರ್ಜಿ ಇದೆ. ಅವರು ಎಲ್ಲಾ ಕಡೆಯಲ್ಲೂ ಬಾವಿಗಳನ್ನು ತೆಗೆಯುತ್ತಾ ಇದ್ದಾರೆ. ಬಾವಿಗೆ ಹಣ ಕೊಡಬೇಕೆಂದು ಕೇಳಿದಾಗ ತಾವು ಕೊಡತಕ್ಕ ಹಣದಿಂದ ಏನು ಅನುಕೂಲವಾಗುತ್ತದೆ ಎಂದು ಕೇಳುತ್ತೇನೆ. ತುಂಗಭದ್ರಾ ಪ್ರಾಜೆಕ್ಟು, ವಿಶ್ವೇಶ್ವರಯ್ಯ ಚಾನಲ್ ಏರಿಯಾ ಇಂತಹ ಕಡೆ ಈಗಾಗಲೇ ಹಾಲ ನೀರಿನ ಅನುಕೂಲ ಇರುವುದರಿಂದ ಆ ಕ್ಷೇತ್ರಗಳಲ್ಲಿರತಕ್ಕ ತಾಲ್ಲೂಕುಗಳೂ ಒಂದೇ, ಇಂತ ಕ್ಷಾಮಕ್ಕೆ ತುತ್ತಾಗಿರತಕ ತಾಲ್ಲೂಕುಗಳೂ ಒಂದೇ ಎಂದು ಹೇಳಿ ಹಂಚುವುದು ಸುತ್ರಾಂ ಸರಿಯಾದ್ದಲ್ಲ. ಎಲ್ಲಿ ಬರೀ ಮಳೆಯ ಆಸರೆಯಿಂದ ವ್ಯವಸಾಯ ಮಾಡುತ್ತೇವೆಯೋ ಅಂತಹ ಕಡೆ ಹೆಚ್ಚು ಬಾವಿಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಭೂಮಿಯನ್ನು ಉತ್ತು, ರಾಗಿಯನ್ನು ಬಿತ್ತಿ ಬೆಳೆ ಬೆಳೆಯುವವರೆಗೂ ನಮ್ಮ ಬಡತನ ಹೋಗುವುದಿಲ್ಲ. ರೈತ ಸಂಮೃದ್ಧಿಯಾಗಿ ಇರಬೇಕಾದರೆ ಅವನಿಗೆ ಪಶುಪಾಲನೆ ಬಹಳ ಮುಖ್ಯ. ಪಶುಪಾಲನೆ ಮಾಡಬೇಕಾದರೆ ಅದಕ್ಕೆ ಉತ್ತಮವಾದ ಮೇವುಬೇಕು. ಇವತ್ತು ನಮ್ಮ ಕಡೆ ಒಂದು ಕಡ್ಡಿ ಹುಲ್ಲು ಸಿಕ್ಕುವುದಿಲ್ಲ. ಇದ್ದಬದ್ದ ದನಕರುಗಳನ್ನೆಲಾ ಮಾರಿ ಮುಂಗಾರು ಮಳೆ, ರೇವತಿ, ಅಶ್ವಿನಿ ಮಳೆ ಬಂದರೆ ಜಮೀನುಗಳ ಎರೆ ಕಟ್ಟುವುದಕ್ಕೆ ಎತ್ತು ಇಲ್ಲದೆ ವ್ಯವಸಾಯನ್ನು ಪ್ರಾರಂಭ ಮಾಡುವುದಕ್ಕೆ ಬಹಳ ಕಷ್ಟವಾಗಿದೆ. ಇಂತಹ ಒಂದು ಪರಿಸ್ಥಿತಿಗೆ ನಾವು ಸಿಕ್ಕಿರುವಾಗ ಟ್ರಾಕ್ಟರುಗಳು ಮತ್ತು ಟಿಲ್ಲರಗಳನ್ನು ಆದಷ್ಟು ಇವತ್ತು ಒದಗಿಸಬೇಕು. ಮೂರು-ನಾಲ್ಕು ವರ್ಷದ ಕೆಳಗೆ ಜಪಾನಿನ ಒಂದು ಕಂಪೆನಿಯ ಜೊತೆಯಲ್ಲಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ಮೈಸೂರಿನವರಿಗೆ ಲೈಸೆನ್ಸ್ ಕೊಟ್ಟು ಬಹಳ ಕಮ್ಮಿ ಬೆಲೆಯಲ್ಲಿ ಉಳುಮೆ ಮಾಡತಕ್ಕ ನೇಗಿಲನ್ನು ಮಾಡುತ್ತೇವೆ ಎಂದು ಸರ್ಕಾರ ಹೇಳಿತ್ತು. ದುರಾದೃಷ್ಟದಿಂದ ಈ ರಾಜ್ಯದಲ್ಲಿ ಕೈಗಾರಿಕೆಗೆ ತಕ್ಕ ಪ್ರೋತ್ಸಾಹ ಇಲ್ಲ. ಬರೀ ಬಾಯಿ ಮಾತೇ ಆಗಿದೆ. ಕಡ್ಡಾಯವಾಗಿ ಕೇಂದ್ರ ಸರ್ಕಾರದಿಂದ ನಮಗೆ ಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳುವುದಕ್ಕೆ ನಮ್ಮ ಸರ್ಕಾರ ಅಸಮರ್ಥವಾಗಿದೆ. ನಮ್ಮಲ್ಲಿರುವುದು ಹಾಲ ಬೆಳಗೊಳದಲ್ಲಿ ಒಂದು ಗೊಬ್ಬರದ ಕಾರ್ಖಾನೆ. ಆ ಗೊಬ್ಬರ ನಮ್ಮ ಮಂಡ್ಯ ಜಿಲ್ಲೆಗೇ ಸಾಲದು; ಅಂತಹ ಪರಿಸ್ಥಿತಿ ಇರುವಾಗ ಬರೀ ಸೀಮೆ ಗೊಬ್ಬರವನ್ನೇ ನೆಚ್ಚಿಕೊಂಡಿದ್ದರೆ ನಮ್ಮ ವ್ಯವಸಾಯಕ್ಕೆಲ್ಲಾ ಗೊಬ್ಬರವನ್ನು ಕೊಡುವುದಕ್ಕಾಗುವುದಿಲ್ಲ. ಹಸರು ಗೊಬ್ಬರದ ಕಡೆಗೆ ಗಮನ ಕೊಡಬೇಕು. ಪ್ರತಿಯೊಂದು ಕಡೆಯೂ ಹಸರು ಸೊಪ್ಪು ಬೆಳೆಸಿ ಅದರಿಂದ ಗೊಬ್ಬರ ಮಾಡ ತಕ್ಕ ವಿಧಾನವನ್ನು ಕಂಡುಕೊಳ್ಳಬೇಕಾಗಿದೆ. ಜೊತೆಗೆ ಇವತ್ತು ಗೋಮಾಳ ಎಲ್ಲಿಲ್ಲೂ ಇಲ್ಲ. ಇದ್ದಬದ್ದ ಕೆಲವು ಜಾಗಗಳಲ್ಲಿ ಅರಣ್ಯ ಇಲಾಖೆಯವರು ಅರಣ್ಯವನ್ನು ಬೆಳೆಸುತ್ತಾ ಇದ್ದಾರೆ. ಹೀಗಿರುವುದರಿಂದ ನಮ್ಮಗೋ ಸಂಪತ್ತು, ಕುರಿ ವಗೈರೆ ಸಾಕಬೇಕಾದರೆ ಬಹಳ ತೊಂದರೆಯಾಗಿದೆ. ಈಗ ಅರಣ್ಯವನ್ನು ಹೇಗೆ ಬೆಳೆಸುತ್ತಾರೆಯೋ ಅದೇ ರೀತಿ ಹುಲ್ಲುಗಾವಲುಗಳನ್ನು ಬೆಳೆಸುವುದು ಬಹಳ ಮುಖ್ಯವಾಗಿದೆ. ಇಲ್ಲದೆ ಹೋದರೆ ಪಂಚಾಯ್ತಿ ಕ್ಷೇತ್ರದಲ್ಲಿ ಪ್ರತಿಯೊಂದು ಪಂಚಾಯ್ತಿ ಕ್ಷೇತ್ರದಲ್ಲೂ 50-60 ಎಕರೆ ಪ್ರದೇಶದಲ್ಲಿ ಉತ್ತಮವಾದ ಹುಲ್ಲನ್ನು ಬೆಳೆಯತಕ್ಕ ಏರ್ಪಾಡನ್ನು ಮಾಡಬೇಕು ಎಂದು ಕೇಳಿಕೊಳ್ಳಬೇಕಾಗಿದೆ. ರೈತ ಸಂಸಾರವನ್ನು ನಡೆಸುವುದಕ್ಕೆ, ಅವನ ಸಂಸಾರ ಸಮೃದ್ಧಿಯಾಗಿ ಮಾಡುವುದಕ್ಕೆ ಅವನ ಮಕ್ಕಳು ಮರಿ ವಿದ್ಯಾವಂತರಾಗುವುದಕ್ಕೆ ಹಾರ್ಟಿ ಕಲ್ಚರ್ ಇಲಾಖೆಯಿಂದ ಸರಿಯಾದ ಸೊಸಿಗಳನ್ನು ಕೊಟ್ಟು ಅವರನ್ನು ತೋಟಗಾರರನ್ನಾಗಿ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಹೈಬ್ರಿಡ್ ಬೀಜದ ವಿಷಯದಲ್ಲಿ ಬಹಳ ಜನ ಸದಸ್ಯರು ಮಾತನಾಡಿದ್ದಾರೆ. ಇಲಾಖೆಯವರು ಒದಗಿಸತಕ್ಕ ಬೀಜದ ವಿಷಯದಲ್ಲಿ ಈಗಾಗಲೇ ನಮಗೆ ಬಹಳ ಅನುಮಾನ ಬಂದಿದೆ. ಅವರು ಕೊಟ್ಟಂಥ ಬೀಜದಲ್ಲಿ ಮೂರುಕಾಳು ಬತ್ತ ಆಗಿಲ್ಲ. ಆದ್ದರಿಂದ ಈ ಇಲಾಖೆಯಲ್ಲಿ ಬಹಳ ಅಪನಂಬಿಕೆ ಬಂದಿದೆ. ಶ್ರೀಮತಿ ಬಸವರಾಜೇಶ್ವರಿಯವರು ನಮ್ಮ ಕಡೆ ಖಾಸಗಿ ಜನರು ಬೀಜ ತಯಾರು ಮಾಡಿ ಕೊಡುತ್ತಾರೆ ಎಂದು ಹೇಳುತ್ತಾ ಇದ್ದರು. ಈಗ ಎರಡು ವಾರದ ಕೆಳಗೆ ನಾನು ಶ್ರೀಮಾನ್ ಬೈರೇಗೌಡರು ಮತ್ತು ರಾಮೇಗೌಡರ ಜೊತೆಯಲ್ಲಿ ಬಿಜಾವರ ಗ್ರಾಮಕ್ಕೆ ಹೋಗಿದ್ದೆ. ಅಲ್ಲಿ ರಾಮಸ್ವಾಮಿ ಎಂಬುವರು ಮಾಡಿದ ಕ್ಷೇತ್ರ ನೋಡಿದಾಗ ಅವರು ಈ ರೀತಿ ಹೇಳುತ್ತಾ ಇದ್ದರು. ರೈತ ಕಟ್ಟುನಿಟ್ಟಾಗಿ ಬೆಳೆ ಬೆಳೆಯುವುದಕ್ಕೆ ಬಹಳ ಕಷ್ಟವಾಗುತ್ತದೆ; ಆದ್ದರಿಂದ ಕೂಡಲೇ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಕ್ಷೇತ್ರವನ್ನು ಆಯ್ದುಕೊಂಡು ಎಷ್ಟೇ ಸಿಬ್ಬಂದಿ ಆಗಲಿ, ಎಷ್ಟೇ ಖರ್ಚಾಗಲಿ ಪರವಾಗಿಲ್ಲ ಈ ಸೀಡ್ ಫಾರಂಗಳ ಜವಾಬ್ದಾರಿಯನ್ನು ಅವರೇ ತೆಗೆದುಕೊಳ್ಳಬೇಕು ನಾಳೆ ಒಂದು ಪಕ್ಷ ಅವರು ರೈತರಿಗೆ ಕೊಟ್ಟಂತಹ ಬೀಜದಲ್ಲಿ ದೋಷ ಇದ್ದರೆ ತೊಂದರೆಯಾಗುವುದಾದರೆ ಇಲಾಖೆಯವರೇ ಜವಾಬ್ದಾರರಾಗಬೇಕಾಗುತ್ತದೆ. ರೈತರನ್ನು ಜವಾಬ್ದಾರರನ್ನಾಗಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರೇ ಈ ದೊಡ್ಡ ಹೊಣೆಗಾರಿಕೆಯನ್ನು ಹೊರಬೇಕು. ಸರ್ಕಾರದ ಪರವಾಗಿ ತಾಲ್ಲೂಕಿಗೆ ಬಿತ್ತನೆ ಫಾರಂನ್ನು ಇಡಬೇಕು. ಅಲ್ಲಿ ಹೊಸ ರೀತಿಯಲ್ಲಿ ಬೀಜಗಳನ್ನು ತಂದು ರೈತರಿಗೆ ಸುಲಭ ದರದಲ್ಲಿ ಕೊಡಬೇಕು. ಈ ರೀತಿ ಮಾಡಬೇಕು ಎಂದು ಸಮಯದಲ್ಲಿ ಹೇಳಲು ಇಷ್ಟ ಪಡುತ್ತೇನೆ.

ಈಗ ನಮ್ಮಲ್ಲಿ ಬಾವಿಗಳ ಕಡೆಗೆ ಸ್ವಲ್ಪ ನಿಗಾ ಇದ್ದರೂ ಕೂಡ ಟ್ಯೂಬ್‌ವೆಲ್ಸ್ ಬಗ್ಗೆ ಪರಿಶೋಧನೆ ಮಾಡಿದ ಹಾಗೆ ಕಾಣುವುದಿಲ್ಲ. ಬಾವಿಗಳನ್ನು ತೆಗೆಯುತ್ತಾ ಇರುವ ಕಡೆ ಹೋಗಿ ನೋಡಿದಾಗ ಟ್ಯೂಬ್‌ವೆಲ್ಸ್ ಬಹಳ ಫಲಪ್ರದವಾಗಬಹುದು, ಭೂಮಿಯಿಂದ ನೀರನ್ನು ತೆಗೆದು ಬೆಳೆಗಳಿಗೆ ಉಪಯೋಗಿಸಿದರೆ ಅನುಕೂಲವಾಗಬಹುದು ಎಂದು ಕಂಡು ಬಂತು ಆ ಒಂದು ಮನೋಭಾವ ನಮಗೆ ಇದೆ. ಆದ್ದರಿಂದ ಸರ್ಕಾರದವರು ಟ್ಯೂಬ್ ವೆಲ್ಸ್‌ನ್ನು ತೆಗೆಸುವ ವಿಷಯದಲ್ಲಿ ಪರಿಶೋಧನೆ ಮಾಡಿ ಎಲ್ಲೆಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲಿ ತೆಗೆಸಬೇಕೆಂದು ಹೇಳುತ್ತೇನೆ.

ಸಾಯಿಲ್ ಟೆಸ್ಟಿಂಗ್ ಬಗೆಗೆ ಬರೀ ಬಾಯಲ್ಲಿ ಹೇಳುವುದು ಆಗಿದೆಯೇ ಹೊರತು ಸರಿಯಾದ ರೀತಿಯಲ್ಲಿ ಆ ಕೆಲಸ ನಡೆದಿಲ್ಲ. ಅದಕ್ಕೆ ರಿಸರ್ಚ್ ಫಾರಂ ಮಾಡಬೇಕೆಂದು ಹೇಳಬಯಸುತ್ತೇನೆ. ಪ್ಲಾಂಟೇಷನ್‌ನಲ್ಲಿ ಕರ್ಪೂರಸಸಿ, ತಂಗಡಿ ಗಿಡಿಗಳನ್ನು ಹಾಕುತ್ತಾ ಇದ್ದಾರೆ. ನಮ್ಮಲ್ಲಿ ಉತ್ತಮವಾದ ತೇಗ, ಬೀಟ್, ಹೊನ್ನೆ, ನಂದಿ ಮರಗಳು ಬಹಳವಾಗಿ ಬೆಳೆಯುತ್ತವೆ. ನಮ್ಮ ರಾಜ್ಯ ತೇಗದ ಮರಕ್ಕೆ ಬಹಳ ಪ್ರಸಿದ್ಧವಾದ ಪ್ರಾಂತ. ಇದು ಎಲ್ಲಾ ಕಡೆಯಲ್ಲೂ ಬರುವುದಿಲ್ಲ. ಆದ್ದರಿಂದ ಯಾವ ಯಾವ ಹವಾಗುಣಕ್ಕೆ ಯಾವ ಯಾವ ಜಾತಿಯ ಮರ, ಯಾವ ಯಾವ ಕ್ಷೇತ್ರದಲ್ಲಿ ಬರುತ್ತದೆ ಅಂತಹ ಮರಗಳನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸರ್ಕಾರದವರಿಗೆ ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

3-30 P.M.

ಮೀನಿನ ವಿಷಯ ಬಹಳವಾಗಿ ಹೇಳಿದ್ದಾರೆ. ನಾವು ಬೆಂಗಳೂರಿನಲ್ಲಿ ಎರಡು ತಿಂಗಳಿನಿಂದ ಇದ್ದೇವೆ, ನಮ್ಮ ಕ್ಯಾಂಟೀನಿನಲ್ಲಿ ತಿನ್ನಬೇಕೆಂದರೆ ಒಳ್ಳೆಯ ಮೀನು ಸಿಕ್ಕುವುದಿಲ್ಲ, ನಮ್ಮಲ್ಲಿ ಸಿಕ್ಕುತ್ತಿರುವ ಮೀನನ್ನು ಎಲ್ಲಿ ಬೆಳೆಯುತ್ತಾರೋ ಅರ್ಥವಾಗುವುದಿಲ್ಲ. ಆದುದರಿಂದ ಬರೀ ಮಂಗಳೂರು ಮತ್ತು ಸಮುದ್ರ ತೀರದಲ್ಲಿ ಮೀನಿನ ಅಭಿವೃದ್ಧಿಗಾಗಿ ಕೊಡುವ ಹಣವನ್ನೆಲ್ಲಾ ಖರ್ಚು ಮಾಡದೆ ಒಳನಾಡಿನಲ್ಲಿರುವ ಸಣ್ಣ ಸಣ್ಣ ಕೊಳಗಳಲ್ಲಿ ಮೀನು ಬೆಳೆಯುವುದಕ್ಕೆ ಏರ್ಪಾಡು ಮಾಡಿ ಅಲ್ಲಿಗೂ ಹಣ ಒದಗಿಸಬೇಕೆಂದು ಸೂಚಿಸುತ್ತೇನೆ. ವ್ಯವಸಾಯದ ಬಾಬಿಗೆ ಸೇಲ್ಸ್‌ಟ್ಯಾಕ್ಸ್ ಹಾಕಬಾರದು ಎಂದು ಇಷ್ಟು ಹೇಳಿ ಕಾಲಾವಕಾಶವಿಲ್ಲದ್ದರಿಂದ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

[MR. SPEAKER in the Chair.]

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಸ್ವಾಮಿ, ಈ ದಿವಸ ವ್ಯವಸಾಯದ ಇಲಾಖೆಯ ಬಗ್ಗೆ ತಂದಿರುವ ಬೇಡಿಕೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನಗೆ ಹೆಚ್ಚು ಕಾಲಾವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಕುಂದೂರು ರುದ್ರಪ್ಪ)

ದೇಶದಲ್ಲಿ ಇವತ್ತು ಆಹಾರದ ಕೊರತೆಯಿಂದ ಬಹಳ ಕಷ್ಟ ಪರಿಸ್ಥಿತಿ ಈದೆ. ಆಹಾರ ಪದಾರ್ಥ ಗಳನ್ನು ಬೆಳೆಯುವವರು ರೈತರು, ಹಳ್ಳಿಗಳಲ್ಲಿ ಸೇಕಡ 85 ಮಂದಿ ಗ್ರಾಮಾಂತರಗಳಲ್ಲಿದ್ದಾರೆ. ರೈತರು ದೇಶದ ಬೆನ್ನುಮೂಳೆ ಎಂದು ಬಾಯಲ್ಲಿ ಹೇಳುತ್ತಿರುವರೇ ವಿನಾ ಕಾರ್ಯತಃ ಅಂಥವರಿಗೆ ಸಾಕಾದಷ್ಟು ಸಹಾಯವನ್ನೇನೂ ಮಾಡಿರುವುದಿಲ್ಲ. ಅವರು ದುಡಿದು ಪಟ್ಟಣಗಳಿಗೆ ಆಹಾರವನ್ನು ತಂದುಕೊಡಬೇಕು. ರೈತರಿಗಾಗಿ ನೂರು ರೂಪಾಯಿ ಕೊಟ್ಟರೆ ಅವರಿಗೆ ಸಲ್ಲುವುದು 48 ರೂಪಾಯಿ ಮಾತ್ರ. ಬಜಾರಿನಲ್ಲಿರುವ ದರಕ್ಕೂ ರೈತರಿಗೆ ಕೊಡುವುದಕ್ಕೂ ಬಹಳ ವ್ಯತ್ಯಾಸವಿದೆ. ಈ ದಿವಸ ಒಂದೆಕರೆಗೆಷ್ಟು ಗೊಬ್ಬರ ಹಾಕುತ್ತಾರೆಂಬುದನ್ನು ನೋಡಬೇಕು. ನನ್ನ ಮಿತ್ರರು ಗಾಂಜಿ ವೀರಪ್ಪ ನವರು ಈ ವರ್ಷ ವ್ಯವಸಾಯ ಮಾಡುತ್ತಿದ್ದಾರೆ. ಅದು ಬಹಳ ಕಷ್ಟ, ನೀವು ಹೇಗೆ ಮಾಡುತ್ತೀರಿ ಎಂದು ಅವರು ನನ್ನನ್ನು ಕೇಳಿದರು. ರೈತರಿಗೆ ಅತೃಪ್ತಿ ಇದೆ, ಅದನ್ನು ಯಾವುದಾದರೂ ಒಂದು ರೀತಿ ಹೋಗಲಾಡಿಸಿ ಅವರನ್ನು ಉದ್ಧಾರ ಮಾಡಬೇಕು. ರೈತರಿಗೆ ಹಣ ಕೊಡುತ್ತಿದ್ದರೂ ಅದರಿಂದ ಸಾಕಷ್ಟು ಉಪಯೋಗವಾಗುತ್ತಿಲ್ಲ, ಬರೀ ಸಿಬ್ಬಂದಿಗೆ, ಇಲಾಖೆಯ ಖರ್ಚು ಆಫೀಸರುಗಳಿಗೇ ಹೆಚ್ಚು ಖರ್ಚಾಗುತ್ತಿದೆ, ಅವರ ಸಂಖ್ಯೆ ಬೆಳೆಯುತ್ತಿದೆ. ಲಕ್ಷ ರೂಪಾಯಿ ಖರ್ಚು ಮಾಡಿದರೆ 25 ಸಾವಿರ ಕೂಡ ರೈತರಿಗೆ ಸೇರುವುದಿಲ್ಲ. ತುಂಗಭದ್ರಾ ಡೆವಲಪ್‌ಮೆಂಟ್ ಕಮಿಟಿಯಲ್ಲಿ ನಾನೂ ಒಬ್ಬ ಸದಸ್ಯ ವ್ಯವಸಾಯಾಭಿವೃದ್ಧಿ ಮಾಡಬೇಕು, ಸಂಶೋಧನೆ ಮಾಡಬೇಕು ಎಂದು ಹೇಳುತ್ತಾರೆ. ದಾವಣಗೆರೆ ಮತ್ತು ಹರಿಹರ ಮಧ್ಯೆ ಒಂದು ಸೀಡ್ ಫಾರಂ ಮಾಡಬೇಕೆಂದು 5 ವರ್ಷದಿಂದ ಪ್ರಯತ್ನವಿದೆ, ಎಷ್ಟೋ ಖರ್ಚಾಗಿದೆ. ಆದರೆ ಉಪಯೋಗ ಆಗಿಲ್ಲ. ಅಲ್ಲಿ ಒಂದು ಎಕರೆಗೆ 5 ಸಾವಿರ ರೂಪಾಯಿ ಬೆಲೆ ಇದೆ, ಅಲ್ಲಿ ಸಂಶೋದನೆ ಮಾಡುತ್ತಾರಂತೆ. ಇದು ಯಾವ ನ್ಯಾಯ ? ಉಚಿತವಾಗಿ ಕತ್ತಲಗೆರೆ ಗ್ರಾಮದಲ್ಲಿ ಜಮೀನು ಕೊಡುತ್ತೇವೆ ಎಂದರೆ ಜಾಯಿಂಟ್ ಡೈರೆಕ್ಟರು ಆಗುವುದಿಲ್ಲವೆಂದು ಹೇಳು ತ್ತಾರೆ, ರೈತರು ಉದ್ಧಾರವಾಗಲಿ, ಅವರು ಬೆಳೆಯಲಿ ಎಂಬ ಭಾವನೆ ಇಲ್ಲ. ರೈತರಿಗೆ ಬಹಳ ತೊಂದರೆ ಇದೆ, ಸೀಡ್ ಫಾರಂ ಬಗ್ಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆಗಬೇಕಾದ ಕೆಲಸ ಇನ್ನೂ ಆಗಿಲ್ಲ. ಎಲ್ಲಾ ಕಡೆಯೂ ಸೀಡ್‌ಫಾರಂ ಕೆಲಸ ನಷ್ಟದಲ್ಲಿ ನಡೆದಿದೆ. ನಮ್ಮಲ್ಲಿ 50 ಸಾವಿರ ರೂಪಾಯಿ ಒಂದು ಫಾರಂಗೆ ಖರ್ಚು ಮಾಡುತ್ತಾರೆ. ಇದೇ ಹಣವನ್ನು ರೈತರಿಗೆ ಕೊಡಬೇಕಾಗಿರುವುದರಿಂದ, ಅವರಿಗೆ ಸಹಾಯಮಾಡಬೇಕಾಗಿರುವುದರಿಂದ ನಷ್ಟದಲ್ಲಿ ಕೆಲಸ ಮಾಡು ತ್ತಿದೆ ಎಂದು ಹೇಳುತ್ತಾರೆ. ರೈತರಿಗೆ ಪ್ರೋತ್ಸಾಹವಿಲ್ಲ ಮೊನ್ನೆ ಜಿಲ್ಲಾಧಿಕಾರಿಗಳ ಗ್ರೇಡಿನ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಭದ್ರಾ ಪ್ರಾಜೆಕ್ಟ್ ಆಫೀಸರನ್ನು ಶಿವಮೊಗ್ಗಾಕ್ಕೆ ಹಾಕಿದ್ದಾರೆ. ಅವರನ್ನು ಕೇಳಿದರೆ ಯಾವ ಉಪಕರಣವೂ ಇಲ್ಲವೆಂದು ಹೇಳುತ್ತಾರೆ. ಹೀಗಾದರೆ ಅವರೇಕೆ ಇರಬೇಕು ? ಅವರಿರಬೇಕಾದ್ದು ಅನಾವಶ್ಯಕ. ಅವರ ಆಫೀಸನ್ನು ದಾವಣಗೆರೆಗೆ ಬದಲಾಯಿಸ ಬೇಕೆಂದಿದ್ದಾರೆ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಹೀಗೆ ಬದಲಾವಣೆ ಮಾಡ ಲಿದ್ದಾರೆ. ಇದು ಯಾವ ನ್ಯಾಯ ? ಹೈಬ್ರಿಡ್ ಜೋಳ ಬೆಳೆಯಬೇಕೆಂದು ಹೇಳುತ್ತಾರೆ. ಇಲಾಖೆಯಲ್ಲಿ ಯಾರೂ ಅದಕ್ಕೆ ಸಹಾಯ ಮಾಡುವುದಿಲ್ಲಾ ? ರೈತರಿಗೆ ಪ್ರೋತ್ಸಾಹ ಕೊಡಬೇಕು, ಗೊಬ್ಬರ ಒದಗಿಸಬೇಕು. ಒಂದು ಎಕರೆಯಲ್ಲಿ ಆ ಜೋಳ ಬೆಳೆಯಲು 14 ಬಾಟಲು ಔಷಧಿ ಬೇಕು, 4 ದಿವಸ ಗಳಿಗೊಂದು ಸಲ ಔಷಧಿ ಹಾಕಬೇಕು. ಔಷಧಿ ಕೇಳಿದರೆ ಇಲ್ಲವೆಂದು ಹೇಳುತ್ತಾರೆ, ಕೇಳಿದರೆ ಸ್ಟಾಕಿಲ್ಲವೆಂಧು ಹೇಳುತ್ತಾರೆ. ನಮ್ಮ ಜೋಳ 8 ಚೀಲ ಬೆಳೆದರೆ ಹೈಬ್ರಿಡ್ ಜೋಳ 25 ಚೀಲ ಬೆಳೆಯಬಹುದು, ಆದರೆ ರೈತರಿಗೆ ಪ್ರೋತ್ಸಾಹವಿಲ್ಲ, ಇದರಿಂದ ಅದನ್ನು ಬೆಳೆಯಲು ಸಾಧ್ಯವಿಲ್ಲ ವಾಗಿದೆ. ಇಲಾಖೆ ಸರಿಯಾಗಿ ಮುತವರ್ಜಿ ವಹಿಸುತ್ತಿಲ್ಲ, ಫಾರಂ ಇಲ್ಲ, ಬಿತ್ತನೆ ಬೀಜ ಇಲ್ಲ. ಅಗ್ರಿ ಕಲ್ಚರಲ್ ಡೆವಲಪ್‌ಮೆಂಟ್ ಆಫೀಸರಿಗೂ ಬಿ.ಡಿ.ಒ.ಗೂ ಹೊಂದಾಣಿಕೆ ಇಲ್ಲ. ಇದರ ಮೇಲೆ ಒಬ್ಬರು ಡೈರೆಕ್ಟರು ಬೇರೆ, ಅವರು ಬರುವುದಿಲ್ಲ ನೋಡುವುದಿಲ್ಲ. ಇದು ಬಹಳ ಅನ್ಯಾಯ.

ಸ್ವಾಮಿ, ನಾನು ಸ್ವತಃ ರೈತನಾಗಿದ್ದೇನೆ. ವ್ಯವಸಾಯದ ಅನುಭವ ನನಗೆ ಸಂಪೂರ್ಣವಾಗಿ ಇದೆ. ನನ್ನ ಸ್ವಂತ ಅನುಭವದಿಂದ ರೈತನ ಕಷ್ಟ ಸುಖ ಹೇಳುತ್ತೇನೆ. ಹೈಬ್ರಿಡ್ ಜೋಳ ಎಂದು ಏನು ಕರೆಯುತ್ತಾರೆಯೋ ಅದನ್ನು ಹನ್ನೆರಡು ಎಕರೆ ಭೂಮಿಯಲ್ಲಿ ಸಾಗುವಳಿ ಮಾಡಿದ್ದೇನೆ. ಹೈ ಬ್ರಿಡ್ ಜೋಳ ಅಲ್ಲದೆ ಹೈಬ್ರಿಡ್ ಮೇಜ್ ಕೂಡ ಬೆಳೆದಿದ್ದೇನೆ. ರೈತನಿಗೆ ಅತ್ಯವಶ್ಯವಾಗಿ ಬೇಕಾಗುವ ಸಲಕರಣೆಗಳನ್ನು ಬೀಜ ಗೊಬ್ಬರ ಕಬ್ಬಿಣ ಸಾಮಾನು ಒದಗಿಸಿ ಕೊಟ್ಟರೆ ಅದನ್ನೂ ಕೂಡ ಸಕಾಲದಲ್ಲಿ ಒದಗಿಸಿ ಕೊಟ್ಟರೆ ಮತ್ತು ಸಕಾಲದಲ್ಲಿ ಮಳೆ ಬಂದರೆ ರೈತ ಸಮೃದ್ಧಿಯಾಗಿ ಬೆಳೆಯುತ್ತಾನೆ. ರೈತನಿಗೆ ಮಳೆ ಬಾರದೆ ಸಕಾಲಕ್ಕೆ ಕೆಲಸ ಆಗದಿದ್ದರೆ ಈ ರೀತಿಯಾದರೆ ರೈತನಿಗೆ ಬಡತನ ಬರುತ್ತದೆ? ಸರಕಾರ ಒದಗಿಸತಕ್ಕಂಥ ಬೀಜ ಗೊಬ್ಬರ ರೈತನಿಗೆ ಸಕಾಲದಲ್ಲಿ ದೊರೆಯುವುದಿಲ್ಲ. ಇದಲ್ಲದೆ ಅವನು

ಬೆಳೆದಂಥ ಧಾನ್ಯಕ್ಕೆ ಸರಿಯಾದ ಬೆಲೆ ದೊರೆಯುವುದಿಲ್ಲ. ಅದು ಹೇಗೆಂದರೆ ಲೆವಿ ತೆಗೆದುಕೊಳ್ಳುವಾಗ್ಗೆ 50 ರೂಪಾಯಿ ರೇಟು ಕೊಡಲಾಗುವುದು. ಆದರೆ ಮಾರ್ಕೆಟ್ ರೇಟು ಹೊರಗಡೆ 100 ರೂಪಾಯಿ ಇರುತ್ತದೆ. ಈ ರೀತಿ ಕೆಲಸ ಕಾರ್ಯಗಳು ನಡೆದರೆ ರೈತನ ಉದ್ಧಾರ ಹೇಗೆ ಆಗುವುದು ? ನಿಜ ವಾಗಿಯೂ ಇಂದು ರೈತನ ಬಡತನದಲ್ಲಿಯೇ ಉಳಿದಿದ್ದಾನೆ. ಅದರೆ ಶ್ರೀಮಂತ ಮಾತ್ರ ಹೆಚ್ಚು ಐಶ್ವರ್ಯವಂತರು ಆಗಿ ಒಂದು ಕಾರು ಇಟ್ಟುಕೊಂಡವರು ಎರಡು ಮೂರು ಕಾರು ಕೊಂಡು ಕೊಂಡಿದ್ದಾರೆ. ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಈ ರೀತಿಯಾಗುವುದು ದೇಶದ ಹಿತ ದೃಷ್ಟಿಯಿಂದ ಒಳ್ಳೆಯದಲ್ಲ. ಇಂದು ರೈತ ಬಹಳ ಕಷ್ಟದಲ್ಲಿದ್ದಾನೆ. ಆದುದರಿಂದ ಸರಕಾರ ದಯವಿಟ್ಟು ಬಡ ರೈತರ ಕಡೆಗೆ ತೀವ್ರ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಕೆಲವು ಕಡೆ ಪೈಲೆಟ್ ಪ್ರಾಜೆಕ್ಟ್ ಎಂದು ಮಾಡಿದ್ದಾರೆ. ಸದಸ್ಯರ ಒತ್ತಾಯಕ್ಕೆ ದಾಕ್ಷಿಣ್ಯಕ್ಕೆ ಒಳಗಾಗಿ ಮಂಗಳೂರಿನಲ್ಲಿ ಅಂದರೆ, ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್‌ನಲ್ಲಿ ಒಂದು ಪೈಲೆಟ್ ಪ್ರಾಜೆಕ್ಟ್ ಕೊಟ್ಟರು. ಇದು ಏನು ನ್ಯಾಯ ? ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ ತುಂಗಾ ನದಿ ಇದೆ, ಭದ್ರಾ ಚಾನೆಲ್ ಇದೆ. ಇಲ್ಲಿ ಇರಿಗೇಶನ್ ಡೆವಲಪ್‌ಮೆಂಟಿಗೆ ಅವಕಾಶ ಇದೆ. ಇದು ಮಲೆನಾಡು ಪ್ರದೇಶ ವಾಗಿರುವುದರಿಂದ ಇಲ್ಲಿ ಒಂದು ಪೈಲೆಟ್ ಪ್ರಾಜೆಕ್ಟ್ ಕೊಡಬೇಕಾದುದು ನ್ಯಾಯ. ಇನ್‌ಫ್ಲೂಯೆನ್ಸ್ ಇದ್ದಕಡೆ ಕೊಟ್ಟು ಮಲೆನಾಡಿಗೆ ಕೊಡದೇ ಇದ್ದರೆ ಇದು ಏನು ನ್ಯಾಯ ಸ್ವಾಮಿ ? ಈ ರೀತಿಯಾಗ ಬಾರದು. ರೈತನ ಉದ್ಧಾರ ಹೇಗೆ ಮಾಡುತ್ತೀರಿ ? ಆಹಾರ ನೀರು ಇಲ್ಲದೆ ಮನುಷ್ಯ ಒಂದು ನಿಮಿಷ ಬದುಕಲು ಸಾಧ್ಯವಿಲ್ಲ. ಆದುದರಿಂದ ರೈತನಿಗೆ ಹೆಚ್ಚು ಸಹಾಯ ಒದಗಿಸಿ ಕೊಡಿ. ರೈತನಿಗೆ ಅನ್ಯಾಯ ಮಾಡಬಾರದು.

ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ ಬೇಕಾದಷ್ಟು ಅರಣ್ಯ ಇದೆ. ಅರಣ್ಯ ಪ್ರದೇಶದಲ್ಲಿರುವ ಭೂಮಿ ಸಾಗುವಳಿ ಮಾಡುವುದಕ್ಕೆ ರೈತರಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಇದರಿಂದ ಹೆಚ್ಚು ಆಹಾರ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಚನ್ನಗಿರಿ ತಾಲ್ಲೂಕು ಮಲಹಾಳ ಫಾರೆಸ್ಟ್ ಬಸಾಪುರದಲ್ಲಿ ಕೆಲವರಿಗೆ ಜಮೀನು ಕೊಟ್ಟು ಕೆಲವರಿಗೆ ಕೊಟ್ಟಿಲ್ಲಾ. ಸಾಗುವಳಿಯಲ್ಲಿವೆ. ಚನ್ನಗಿರಿ ತಾಲ್ಲೂಕಿನಲ್ಲಿ ಶಿವಪುರ ಎಂಬ ಊರು ಕಟ್ಟಲು ಜನ ಮುಂದೆ ಬಂದಿರುತ್ತಾರೆ, ಜಮೀನು ಕೊಡಿರಿ. ಮಾನ್ಯ ರೆವೆನ್ಯೂ ಮಂತ್ರಿಗಳು ಒಂದು ಸಲ ಬಂದು ನೋಡಿಕೊಂಡು ಹೋಗಿದ್ದಾರೆ.

ಇನ್ನು ಒಂದೇ ಒಂದು ವಿಷಯ ಹೇಳಿ ನನ್ನ ಮಾತು ಮುಗಿಸುತ್ತೇನೆ. ಒಂದೇ ಒಂದು ನಿಮಿಷ ಕಾಲಾವಕಾಶ ನನಗೆ ಮಾತನಾಡಲು ದಯವಿಟ್ಟು ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಹೆಚ್ಚು ಆಹಾರ ಬೆಳೆಯಬೇಕಾದರೆ ದೇಶ ಸಮೃದ್ಧಿಯಾಗಬೇಕಾದರೆ ರೈತನಿಗೆ ಬೇಕಾಗುವ ಒಳ್ಳೇ ಬೀಜ, ಗೊಬ್ಬರ, ಕಬ್ಬಿಣ ಸಾಮಾನು ಇವುಗಳನ್ನು ಹೆಚ್ಚಾಗಿ ಒದಗಿಸಿಕೊಡಬೇಕು. ಸ್ವಾಮಿ ಅಧ್ಯಕ್ಷರೇ, ತಮಗೆ ತೊಂದರೆಯಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ನನಗೆ ಮಾತನಾಡಲು ಅವಕಾಶ ಕೊಟ್ಟದ್ದ ಕ್ಕಾಗಿ ಅಧ್ಯಕ್ಷರನ್ನು ಕೃತಜ್ಞತೆಯಿಂದ ವಂದಿಸುತ್ತೇನೆ. ಸರಕಾರದವರು ನನ್ನ ಸೂಚನೆಗಳನ್ನು ಕಾರ್ಯರೂಪದಲ್ಲಿ ತರಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೇ, ನಮ್ಮ ಮುಂದೆ ಇರುವ ವ್ಯವಸಾಯ, ಅರಣ್ಯ ಮತ್ತು ಮೀನುಗಾರಿಕೆ ಈ 3 ಬಾಬುಗಳ ಮೇಲೆ ಸುಮಾರು 13 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ; ವಿದ್ಯಾ ಖಾತೆಗಾಗಿ 30 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ; ಆಹಾರ ಬೆಳೆಯುವುದಕ್ಕೆ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ; ಅರಣ್ಯ ಬಾಬಿಗಾಗಿ ಐದೂವರೆ ಕೋಟಿ ರೂಪಾಯಿಗಳನ್ನು, ಮೀನುಗಾರಿಕೆಗಾಗಿ ಎರಡೂವರೆ ಅಥವಾ ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಈ ಮೂರು ಕ್ಷೇತ್ರಗಳಲ್ಲಿ ಮೈಸೂರು ರಾಜ್ಯ ಏನು ಸಾಧನೆ ಮಾಡಿದೆ ಎಂಬುದನ್ನು ಹೇಳುತ್ತೇನೆ. ಶ್ರೀಮಾನ್ ಲೋಕನಾಥನ್ ಅವರು National Council of Economic and Applied Research ಎಂಬುದರಲ್ಲಿ ಈ ರೀತಿ ಬರೆದಿದ್ದಾರೆ. ಮೈಸೂರು ಸರ್ಕಾರದವರು 1975ನೇ ಇಸವಿಯವರೆಗೆ ಪ್ರಯತ್ನ ಮಾಡಿದರೆ ತಮ್ಮ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯ. ಇದಕ್ಕಾಗಿ 500 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈಗ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದಿದ್ದರೂ ಸಹ ಈ ಮೂರು ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕಾದ್ದನ್ನು ಮಾಡುವುದಕ್ಕಾಗಿಲ್ಲ. ಅದಕ್ಕೋಸ್ಕರವಾಗಿ ಮೈಸೂರು ಸರ್ಕಾರ ದವರು ಬೇರೆ ರಾಜ್ಯಗಳ ಜೊತೆಯಲ್ಲಿ, ವ್ಯವಸಾಯ ಅಭಿವೃದ್ಧಿಯಲ್ಲಾಗಲೀ, ಅರಣ್ಯ ಅಭಿವೃದ್ಧಿ ಯಲ್ಲಾಗಲೀ, ಮೀನುಗಾರಿಕೆಯಲ್ಲಾಗಲೀ ಹೋಗುವುದಕ್ಕೆ ಸಾಧ್ಯವಾಗಿಲ್ಲ ಎಂದು.

ಶ್ರೀ ಬಿ. ರಾಚಯ್ಯ (ಮೀನುಗಾರಿಕೆ ಮತ್ತು ಅರಣ್ಯ ಶಾಖೆಯ ಮಂತ್ರಿಗಳು).—ಎಷ್ಟನೇ ಪೇಜಿನಲ್ಲಿ ಹೇಳಿದೆ ?

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಅಕಸ್ಮಾತ್, Sheer accident ನಿಂದ ಕೆಲವರು ಮಂತ್ರಿಗಳಾಗುತ್ತಾರೆ, ನಾವು ಏನಾದರೂ ಹೇಳಿದರೆ ಅದು ಯಾವ ಪುಸ್ತಕದಲ್ಲಿದೆ, ಎಷ್ಟನೇ ಪೇಜಿನಲ್ಲಿದೆ, ಯಾವ ಪ್ಯಾರಾದಲ್ಲಿದೆ ಎಂದು ಅಧ್ಯಕ್ಷರು ಕೇಳುವ ರೀತಿಯಲ್ಲಿ ಈ ಮಂತ್ರಿಗಳು ಸಹ ಕೇಳುತ್ತಾರೆ. ಇವರಿಗೂ ಈ ರೀತಿ ಕೇಳುವುದು ಒಂದು ಅಭ್ಯಾಸವಾಗಿದೆ. ಹಿಂದೆ ಮಾಡಿದ ಸುಧಾರಣೆಗಳನ್ನೇ ಹೇಳದೆ, ನೀವು ಬಂದಮೇಲೆ ನಾಲ್ಕುವರೆ ವರ್ಷದಿಂದ ಏನು ಸಾಧನೆ ಮಾಡಿದ್ದೀರಿ ಎಂದು ನನ್ನ ಮನಸ್ಸಿಗೆ ಸಮಾಧಾನವಾಗುವಂತೆ ಹೇಳಬೇಕು. ನಾವೇನಾದರೂ ಪ್ರಶ್ನೆ ಕೇಳಿದಾಗ ನೀವು 'ಸ್ಟೀರಿಯೋ ಟೈಪ್' ಉತ್ತರ ಹೇಳುತ್ತೀರಿ, ಇದು ಒಂದು ಅಭ್ಯಾಸವಾಗಿದೆ. ಮೈಸೂರು ಸಂಸ್ಥಾನದಲ್ಲಿ ಬೀಳತಕ್ಕಂಥ ಮಳೆಯಿಂದ, ಕೆರೆ ಕಟ್ಟೆ, ದೊಡ್ಡ ದೊಡ್ಡ ಸರೋವರಗಳ ಮೂಲಕ ಎಷ್ಟು ಎಕರೆ ಜಮೀನು ಸಾಗುವಳಿಯಾಗುತ್ತದೆ, ಅರಣ್ಯ ಸಂಪತ್ತು ಎಷ್ಟು ಬೆಳೆಯುತ್ತದೆ ಎಂದು ಅರ್ಥಮಾಡಿಕೊಳ್ಳಬೇಕು. ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ಚೆನ್ನಾಗಿರುವುದರಿಂದ ಮಳೆ ಚೆನ್ನಾಗಿ ಆಗುತ್ತದೆ. ಮಳೆ ಚೆನ್ನಾಗಿ ಇದ್ದರೆ ವ್ಯವಸಾಯ ಉತ್ಪನ್ನ ಜಾಸ್ತಿಯಾಗುತ್ತದೆಯೆಂದು ತಜ್ಞರು ಹೇಳಿದ್ದನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ 20 ಲಕ್ಷ ಟನ್ ಆಹಾರ ಕಡಿಮೆ ಬಂತು ಎಂದು ಈ ಸಭೆಯಲ್ಲಿ ನಾವು ಮತ್ತು ನೀವು ಒಪ್ಪಿದ್ದೇವೆ. 20 ಲಕ್ಷ ಟನ್ ಆಹಾರ ಕಡಮೆ ಆಗಿದೆ ಎಂದು ನೀವು ಹೇಳುವಾಗ, 5 ಲಕ್ಷ ಟನ್ ಆಹಾರವನ್ನಾದರೂ ಹೆಚ್ಚುಮಾಡುವುದಕ್ಕೆ, ತಾವು ವ್ಯವಸಾಯ ಇಲಾಖೆಯಲ್ಲಿ, ಅರಣ್ಯ ಕ್ಷೇತ್ರದಲ್ಲಿ ಏನು ಸಾಧನೆ ಮಾಡಿದ್ದೀರಿ ಎಂದು ನೋಡಿದರೆ, ಪರರಾಷ್ಟ್ರಗಳಲ್ಲಿ ಭಿಕ್ಷೆ ಬೇಡುವುದಕ್ಕೆ ಹೋಗಿದ್ದೀರಿ. 50 ಸಾವಿರ ಎಕರೆಯಲ್ಲಿ ವ್ಯವಸಾಯ ಮಾಡಿಸಿ, ಒಂದು ಲಕ್ಷ ಟನ್ ಆಹಾರ ಬೆಳೆದಿದ್ದೇವೆ ಎಂದು ಹೇಳುವುದಕ್ಕೆ ಈ ಸರ್ಕಾರಕ್ಕೆ ಧೈರ್ಯವಿಲ್ಲ. ಕೆರೆ ದಂಡೆಯಲ್ಲಿ ವ್ಯವಸಾಯ ಮಾಡಬಾರದೆಂದು ಇದ್ದರೂ, ಅದನ್ನು ಸಹ ವ್ಯವಸಾಯಕ್ಕೆ ಕೊಟ್ಟಿರಿ, ಈಗ ಆ ಜಾಗವೆಲ್ಲಾ ಬೆಂಗಾಡಾಗಿದೆ. ನದಿ ದಂಡೆಯಲ್ಲಿ ಬೆಳೆಯಬಾರದು ಎಂದು ನಿಯಮವಿದ್ದರೂ ಸಹ, ಆ ಭಾಗದ ಜಮೀನನ್ನು ವ್ಯವಸಾಯಕ್ಕೆ ಕೊಟ್ಟಿರಿ, ಅಲ್ಲೂ ಸಹ ಹೆಚ್ಚು ಬೆಳೆಯುವುದಕ್ಕೆ ಆಗಿಲ್ಲ. ದನಗಳು ಮೇಯುವ ಅಮೃತಮಹಲ್ ಜಮೀನುಗಳನ್ನು ಸಹ, ನಿಷ್ಕಾರಣವಾಗಿ, ಕಾನೂನಿಗೆ ವಿರುದ್ಧವಾಗಿ, ಹೆಚ್ಚು ಬೆಳೆಯಬೇಕೆಂದು ರೈತರಿಗೆ ಕೊಡಿಸಿದಿರಿ, ಆದರೆ ವ್ಯವಸಾಯದ ಉತ್ಪತ್ತಿ ಮಾತ್ರ ಜಾಸ್ತಿಯಾಗಲಿಲ್ಲ. ಈ ವ್ಯವಸಾಯದ ವಿಚಾರದಲ್ಲಿ ಒಂದೇ ಒಂದು ಪ್ರಶ್ನೆ ಬೃಹದಾಕಾರವಾಗಿ ನಮ್ಮ ಮುಂದೆ ನಿಂತಿದೆ. ಶ್ರೀಮಾನ್ ಕುಂದೂರು ರುದ್ರಪ್ಪನವರು ಹೇಳಿದ ರೀತಿ ಈ ಸರ್ಕಾರದವರಿಗೆ ಸರಿಯಾದ ರೀತಿಯಲ್ಲಿ ರೈತರುಗಳಿಗೆ ಒತ್ತನೆ ಬೀಜ, ಗೊಬ್ಬರ, ಇರಿಗೇಷನ್ ಸೌಲಭ್ಯ, ಪವರ್ ಟಿಲ್ಲರ್, ಮತ್ತು ಕೆಮಿಕಲ್ ಫರ್ಟಿಲೈಜರ್‌ಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಯಾವ ಕ್ಷೇತ್ರಗಳಿಗೆ ಯಾವುದು ಮುಖ್ಯವಾಗಿ ಬೇಕೋ ಅದನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿಯಾದರೆ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಮಳೆ ಬಂದರೆ ಬೆಳೆ ಬೆಳೆಯುವುದಕ್ಕೆ ರೈತನಿಗೆ ಎತ್ತುಗಳು ಬೇಕು, ಎತ್ತುಗಳಿಗೆ ಹುಲ್ಲು ಬೇಕು, ಉಳುವವನಿಗೆ ಆಹಾರ ಬೇಕು. ನೀರಿನ ಸೌಕರ್ಯವಿರಬೇಕು. ಪವರ್ ಸಪ್ಲೈ ಕೊಡಬೇಕು, ಸಕಲ ಸಮೃತ್ತನ್ನೂ ಕೊಟ್ಟರೆ ರೈತ ಹೆಚ್ಚು ಧಾನ್ಯ ಬೆಳೆಯುತ್ತಾನೆ. ಆದರೆ ಶ್ರೀಮಾನ್ ರುದ್ರಪ್ಪನವರು ಹೇಳಿದ ರೀತಿ ಭತ್ತ ಬೆಳೆಯುವುದಕ್ಕೆ, ಅರಣ್ಯ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡುತ್ತಿಲ್ಲ. ಬರೀ ಭಾಷಣ ಮಾಡುತ್ತಾರೆ ಅಷ್ಟೆ. ಜನರಿಗೆ ಕೂಲಿ ಸಿಗಲಿ ಎಂದು ಉದ್ದಕ್ಕೂ ಟ್ರೆಂಚ್‌ಗಳನ್ನು ಹೊಡೆಸಿದ್ದಾರೆ. ಇವರು 10 ಲಕ್ಷ ಖರ್ಚುಮಾಡಿದರೆ 2 ಲಕ್ಷದ ಉತ್ಪತ್ತಿ ಬರುತ್ತಿದೆ, ಈ ಮೈಸೂರು ರಾಜ್ಯ ಅಂಕಿಅಂಶಗಳ ರಾಜ್ಯವಾಗಿದೆ. ನಮ್ಮ ದೇಶದಲ್ಲಿ ಏನೇನು ಸಾಧನೆ ಮಾಡಿದ್ದೇವೆ ಎಂಬುದನ್ನು ಜಗತ್ತಿನ ಮುಂದೆ ಇಡಲು, ಜನತೆಯ ಮುಂದೆ ಇಡಲು ಯಾವ ಮಂತ್ರಿಗಳಿಗೂ ಧೈರ್ಯವಿಲ್ಲ. ಸದಸ್ಯರೇನಾದರೂ ಕೇಳಿದರೆ ಉದಾಸೀನವಾಗಿ ಉತ್ತರವನ್ನು ಕೊಡುತ್ತಾರೆ. 35 ಲಕ್ಷ ಎಕರೆ ರಿಕ್ಲಮೇಷನ್ ಆಗಬೇಕಾದರೆ ಕನಿಷ್ಟಪಕ್ಷ 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, 10 ರಿಂದ 15 ಲಕ್ಷ ಟನ್ ಆಹಾರವನ್ನು ಬೆಳೆಯಬಹುದು ಎಂದು ಶ್ರೀ ಲೋಗನಾಥನ್ ಹೇಳಿದ್ದಾರೆ. ಈ ರೀತಿ ಮಾಡುವುದಕ್ಕೆ ಮೈಸೂರು ಸರ್ಕಾರದವರಿಗೆ ಮನಸ್ಸಿಲ್ಲ, ಮನಸ್ಸಿದ್ದರೆ ದುಡ್ಡು ಇರುವುದಿಲ್ಲ. ಶ್ರೀ ಲೋಗನಾಥನ್ ಅವರು ಈ ರೀತಿ ಹೇಳಬೇಕಾದರೆ ಮೈಸೂರು ದೇಶದ ವ್ಯವಸಾಯ ಇಲಾಖೆ ಎಷ್ಟರಮಟ್ಟಿಗೆ ಇದೆ ಎಂದು ಗೊತ್ತಾಗುತ್ತದೆ. ಕೋ-ಆಪರೇಟಿವ್ ಸೊಸೈಟಿ ತೆಗೆದುಕೊಂಡರೆ ಇದರಲ್ಲಿ 16 ಜನ ಜಾಯಿಂಟ್ ಡೈರೆಕ್ಟರ್‌ಗಳಿದ್ದಾರೆ. ವ್ಯವಸಾಯ ಇಲಾಖೆಯಲ್ಲಿ 25 ಜನ ಜಾಯಿಂಟ್ ಡೈರೆಕ್ಟರ್ ಇದ್ದಾರೆ. ಡೈರೆಕ್ಟರೇ ಇದ್ದಾರೆ, ಅಸಿಸ್ಟೆಂಟ್ ಡೈರೆಕ್ಟರ್‌ಗಳು ಎಷ್ಟು ಜನ ಇದ್ದಾರೋ ಗೊತ್ತಿಲ್ಲ. ಬರೀ ಇವರ ಸಂಖ್ಯೆ ಹೆಚ್ಚುತ್ತಿದೆಯೇ ಹೊರತು, ಒಂದು ಪಲ್ಲಾ ಹೆಚ್ಚು ಬತ್ತ ಬೆಳೆಯಲಿಲ್ಲ. ಇವರುಗಳಿಂದ ಯಾವ ರೀತಿಯಿಂದಲೂ ರೈತರಿಗೆ ಸಹಾಯವಾಗುತ್ತಿಲ್ಲ. ದೇವೇಂದ್ರನ ಕೃಪೆಯ ಮೇಲೆ ಮಳೆಯೇನಾದರೂ ಆದರೆ ಹೆಚ್ಚು ಬೆಳೆಯಬಹುದು, ಆದರೆ ಬೆಳೆಗೇನಾದರೂ ರೋಗ ತಗಲಿದರೆ, ಅದಕ್ಕೆ

ಬೇಕಾದ ಔಷದ ಉಪಚಾರಗಳನ್ನು, ರೋಗ ಪರಿಹಾರ ಮಾಡುವ ಇತರೇ ಸಾಧನಗಳನ್ನು ಸರಿಯಾಗಿ ರೈತನಿಗೆ ಕೊಡುತ್ತಿಲ್ಲ. ಈ ವಿಚಾರದಲ್ಲಿ ವ್ಯವಸಾಯ ಇಲಾಖೆಯವರು ನಿರ್‌ವೀರ್ಯರಾಗಿದ್ದಾರೆ. ಈ ನಾಲ್ಕುವರೆ ವರ್ಷದಲ್ಲಿ ಮೈಸೂರು ರಾಜ್ಯಕ್ಕೆ ವ್ಯವಸಾಯ ಇಲಾಖೆಯಿಂದ ಏನೇನು ಸಾಧನೆ ಯಾಗಿದೆಯೆಂದರೆ ಏನೂ ಸಾಧನೆಯಾಗಿಲ್ಲ. ಈಗ ವ್ಯವಸಾಯ ಮಂತ್ರಿಗಳು ಸಹ ಇಂಗ್ಲೆಂಡ್, ಅಮೇರಿಕಾ ದೇಶಗಳಿಗೆ ಬೆಳೆಯುವ ವಿಚಾರ ತಿಳಿದುಕೊಳ್ಳುವುದಕ್ಕೆ, ಮುಸುಕಿನ ಜೋಳ ಯಾವ ರೀತಿ ಬೆಳೆಯುತ್ತಾರೆ ಎಂದು ತಿಳಿದುಕೊಳ್ಳುವುದಕ್ಕೆ ಹೋಗಿದ್ದಾರೆ. ನಮ್ಮ ಎತ್ತುಗಳು ವ್ಯವಸಾಯಕ್ಕೆ ಯೋಗ್ಯವಾಗಿದ್ದರೆ ಅವನ್ನು ಜಾತ್ರೆಗೆ ಏತಕ್ಕೆ ಹೊಡೆಯಬೇಕು ? ನಮಗೆ ತಿಳಿದಿರುವುದನ್ನೇ ಸರಿಯಾಗಿ ಮಾಡುತ್ತಿಲ್ಲ, ಹೈಬ್ರಿಡ್ ಎಂದರೆ ಏನ ಎನ್ನುವುದು ಇವರಿಗೆ ಗೊತ್ತಿಲ್ಲ, 12 ಎಕರೆಯನ್ನು ಸೈಂಟಿಫಿಕ್ ಆಗಿ ವ್ಯವಸಾಯ ಮಾಡಿಸುವುದಕ್ಕೆ ಒಬ್ಬ ಅಧಿಕಾರಿಯನ್ನು ನೇಮಿಸುತ್ತಾರೆ, ನಾನು ಬೇಕಾದರೆ 30 ಎಕರೆಯಲ್ಲಿ ಸೈಂಟಿಫಿಕ್ ಆಗಿ ವ್ಯವಸಾಯ ಮಾಡಿ ತೋರಿಸುತ್ತೇನೆ. ರೈತರಿಗೆ ಹೆಚ್ಚಿನ ಸೌಲಭ್ಯ ಕೊಟ್ಟರೆ ಹೆಚ್ಚು ಆಹಾರ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು, ಬೇರೆ ದೇಶಗಳಿಗೆ ಹೋಗಿ ಬಂದರೆ ಅನ್ನದ ಕ್ಷಾಮ ಹೋಗುತ್ತದೆಯೇ? ಶ್ರೀ ವಿರೇಂದ್ರಪಾಟೀಲರು ದೆಹಲಿಗೆ ಹೋಗಿ, ಅಪ್ಪರ್ ಕೃಷ್ಣದೊಳಗೆ ಎಂಟೂಕಾಲು ಪರ್‌ಸೆಂಟ್ ಇರಿಗೇಷನ್ ಲ್ಯಾಂಡ್ ಇದೆ, ಅದನ್ನು ನಾವೇ ಮುಗಿಸಬೇಕಾದರೆ ಎರಡು ಯೋಜನೆಗಳಾಗುತ್ತದೆ, ಬೇರೆ ರಾಜ್ಯಗಳ ಸಮಕ್ಕೆ ಹೋಗಬೇಕಾದರೆ, ಇದನ್ನು ಕೇಂದ್ರ ಸರ್ಕಾರದವರೇ ತೆಗೆದುಕೊಂಡು ಮಾಡಬೇಕು ಎಂದು ಕೇಳಿದಾಗ, ಅಲ್ಲಿಯೇ ಇದ್ದ, ಮದ್ರಾಸ್, ಕೇರಳ ಮತ್ತು ಆಂಧ್ರದ ಪ್ರತಿನಿಧಿಗಳು ಎಷ್ಟರಮಟ್ಟಿಗೆ ನಕ್ಕಿರಬೇಕು ಎಂದು ನನಗನ್ನಿಸುತ್ತದೆ.

4-00 P.M.

ಸ್ವಾಮಿ, ನಮ್ಮಲ್ಲಿರತಕ್ಕ ಪೊಟೆನ್ಸಿಯಾಲಿಟಿ ಎಕ್ಸ್‌ಪ್ಲಾಯಿಟ್ ಮಾಡಿ ಇರ್ರಿಗೇಷನ್ ಡೆವಲಪ್ ಮಾಡುವುದಕ್ಕೆ ಇವೊತ್ತು ಹಣ ಇಲ್ಲ. ಟೆಕ್ನಿಕಲ್ ನೋಹೌ ಇಲ್ಲ, ಸ್ಕೀಮ್ ಇಲ್ಲ ಎಂದು ಪೊಲಿಟಿಕಲ್ ಪ್ರಾಜೆಕ್ಟ್ಸ್ ಮಾಡಿಕೊಂಡು ರಾಜಕೀಯ ಕಟ್ಟುತ್ತಾ ಹೋದರೆ, ರಾಜಕೀಯ ನಾಲೆಗಳಿಂದ ರಾಜಕಿಯ ಬರುತ್ತದೆಯೇ ಹೊರತು ಬೇರೆ ಯಾವುದೂ ಬರುವುದಿಲ್ಲ. ಅಗ್ರಿಕಲ್‌ಚರ್‌ಗೂ ಅನಿಮಲ್ ಹಸ್ಬೆಂಡರಿಗೂ ಸಂಬಂಧ ಇದೆ, ಫಾರೆಸ್ಟ್ರಿಗೂ, ಫಿಷರಿಗೂ ಸಂಬಂಧ ಇದೆ. ಇಂಡಸ್ಟ್ರಿಗೂ ಅಗ್ರಿಕಲ್‌ಚರ್‌ಗೂ ಸಂಬಂಧ ಇದೆ. ಇವೊತ್ತು ರಾಜ್ಯದಲ್ಲಿ ಎಲ್ಲಿಯವರೆಗೆ ವ್ಯವಸಾಯವನ್ನು ಕೈಗಾರಿಕೆಯೆಂದು ಕಾಣುವುದಿಲ್ಲವೋ ಕೈಗಾರಿಕೆಯ ಹಾಗೆ ಬೆಳೆಯಬೇಕು ಎಂದು ಮನಸ್ಸು ಮಾಡುವುದಿಲ್ಲವೋ ಎಲ್ಲಿಯವರೆಗೆ ಸರ್ಕಾರ ವ್ಯವಸಾಯ ಕ್ಷೇತ್ರದಲ್ಲಿ ಈಗಿನ ರೀತಿ ಮನೋಭಾವ ಇಟ್ಟುಕೊಂಡಿರುತ್ತಾರೋ, ಅಲ್ಲಿಯವರೆಗೆ ವ್ಯವಸಾಯ ಕ್ಷೇತ್ರದಲ್ಲಿ ಏನೇನೂ ಸಾಧನೆ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದು ನಾನಾದರೂ ಹೇಳುತ್ತೇನೆ. ವ್ಯವಸಾಯಕ್ಕೆ ಬೇಕಾದಂಥ ಫರ್ಟಿಲೈಸರ್ಸ್ ತಯಾರು ಮಾಡುವ ಕಾರ್ಖಾನೆಯನ್ನು ಮೂರನೆಯ ಪಂಚವಾರ್ಷಿಕ ಯೋಜನೆ ಮುಗಿದರೂ ನಮ್ಮ ಕೈಯಿಂದ ಸ್ಥಾಪನೆ ಮಾಡುವುದಕ್ಕಾಗಲಿಲ್ಲ. ಇದಕ್ಕೆ ಯಾರು ಕಾರಣರು ? 18 ವರ್ಷಗಳ ಕಾಲ ಅಧಿಕಾರ ಸೂತ್ರ ಹಿಡಿದವರು, ರಾಜ್ಯಭಾರ ಮಾಡಿದವರು ಇದನ್ನು ಮಾಡಬೇಕಾಗಿತ್ತು. ಈಗ ದೇಶದಲ್ಲಿ ಬಂದಿರತಕ್ಕ ಆಹಾರ ಕ್ಷಾಮಕ್ಕೆ ಯಾರು ಕಾರಣರು ಎಂದರೆ, ಅಧಿಕಾರ ಸೂತ್ರ ಹಿಡಿದಿರತಕ್ಕ ನೀವೇ ಎಂದು ಹೇಳುತ್ತೇನೆ. ಮಂಗಳೂರಿಗೆ ಗೊಬ್ಬರದ ಕಾರ್ಖಾನೆ ಯಾವಾಗ ಬರುತ್ತದೋ ಗೊತ್ತಿಲ್ಲ. ಎಂದು ಅದು ಪ್ರೊಡಕ್ಷನ್ ಪ್ರಾರಂಭ ಮಾಡುತ್ತದೋ ಗೊತ್ತಿಲ್ಲ, ಶ್ರೀ ಲೋಗನಾತನ್ ಹೇಳಿದ್ದಾರೆ ಇಂಡಿಯಾ ದೇಶದಲ್ಲಿ ಆಗತಕ್ಕ ಗೊಬ್ಬರದ ಪ್ರೊಡಕ್ಷನ್ ನಾವು ಲೆಕ್ಕ ತೆಗೆದುಕೊಂಡರೆ ಮೈಸೂರು ಸಂಸ್ಥಾನಕ್ಕೆ ಎಷ್ಟು ಕೊಡುತ್ತಿದ್ದಾರೆ ಎಂದರೆ ಸಮುದ್ರದಲ್ಲಿ ಒಂದು ಸಾಸಿವೆ ಹಾಕಿದರೆ ಅದು ಹೇಗೆ ಮುಳುಗಿಹೋಗುತ್ತದೋ, ಹಾಗೆ ಆಗಿದೆ. ಮೈಸೂರು ಸರ್ಕಾರದ ಈ ಬೇಡಿಕೆ ಪೂರೈಸುವುದಕ್ಕೆ ಸಾಧ್ಯವಿಲ್ಲ, ಮೈಸೂರು ಸರ್ಕಾರ ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸಿ ಗೊಬ್ಬರ ಮತ್ತು ಇತರ ಸಾಮಗ್ರಿಗಳನ್ನು ಒದಗಿಸಿಕೊಳ್ಳಬೇಕಾಗಿದೆ. ಈಗ ಹೋಗುವ ರೀತಿಯಲ್ಲಿ ಮಂದಗತಿಯಿಂದ ಹೋಗುತ್ತಾ ಇದ್ದರೆ ಮೈಸೂರು ಸಂಸ್ಥಾನದಲ್ಲಿ ವ್ಯವಸಾಯ ಕ್ಷೇತ್ರ ನಿರ್ನಾಮವಾಗಿ ಹೋಗುತ್ತದೆ ಎಂದು ಅವರು ಬರೆದಿದ್ದಾರೆ. ಅದನ್ನು ನೋಡಬೇಕು. ವ್ಯವಸಾಯ ಕ್ಷೇತ್ರದಲ್ಲಿ ಡೈರೆಕ್ಟರ್ ಕೆಲಸ ಮಾಡುವುದಿಲ್ಲ ಎಂದು ಹೊರಗಡೆಯಿಂದ ಅಧಿಕಾರಿಗಳನ್ನು ಕರೆಸಿದ್ದೀರಿ. ಹೊಸ ಅಧಿಕಾರಿಗಳು ಬಂದ ಮೇಲೆ ಅನೇಕ ಜನ ಜಾಯಿಂಟ್ ಡೈರೆಕ್ಟರ್ಸ್, ಅಡಿಷನಲ್ ಡೈರಕ್ಟರ್ಸ್, ಡೆಪ್ಯೂಟಿ ಡೈರಕ್ಟರ್ಸ್ ಸಂಖ್ಯೆ ಬೆಳೆದಿದೆ. ಮೈಸೂರು ಸಂಸ್ಥಾನದಲ್ಲಿ ಎಷ್ಟು ಎಕರೆ ಭೂಮಿ ರೆಕ್ಲಮೇಷನ್ ಮಾಡಬೇಕು ಎಂದು ಹೊರಟಿದ್ದೀರಿ? ಇಷ್ಟು ಭೂಮಿ ರೆಕ್ಲಮೇಷನ್ ಮಾಡಿ, ಫುಡ್‌ಗ್ರೈನ್ಸ್ ಬರಬೇಕು ಎಂದು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡಿದ್ದೀರಿ ? ಎಷ್ಟು ಎಕರೆಯಲ್ಲಿ ಕಮರ್ಷಿಯಲ್ ಕ್ರಾಪ್ಸ್ ಬೆಳೆಯಬೇಕು ಎಂದು ಮಾಡಿದ್ದೀರಿ ? ಎಷ್ಟು ಎಕರೆಯಲ್ಲಿ ಎಣ್ಣೆ ಬೀಜಗಳು, ಕಬ್ಬು ಮತ್ತು ಹೊಗೆಸೊಪ್ಪು ಬೆಳೆಯಬೇಕೆಂದು ಮಾಡಿದ್ದೀರಿ ? ಎಷ್ಟು ಎಕರೆಗಳಲ್ಲಿ ಫಾರಿನ್ ಎಕ್ಸ್‌ಛೇಂಜ್ ಸಂಪಾದನೆ ಮಾಡುವ ಬೆಳೆಗಳನ್ನು ಬೆಳೆದು ಈ ರಾಜ್ಯಕ್ಕೆ ಬೇಕಾದ ಫಾರಿನ್ ಎಕ್ಸ್‌ಛೇಂಜ್ ಒದಗಿಸಿಕೊಳ್ಳಬೇಕೆಂದು ಮಾಡಿದ್ದೀರಿ ? ಇವೊತ್ತಿನ ದಿವಸ ನನ್ನ ಸ್ನೇಹಿತರು ಹೇಳುತ್ತಾರೆ, ಕನಿಷ್ಠ ಪಕ್ಷ 35 ಎಕರೆ ರೆಕ್ಲಮೇಷನ್ ಮಾಡಿ, ಐದು ಲಕ್ಷ ಎಕರೆ ಫುಡ್‌ಗ್ರೈನ್ಸ್, ಐದು ಲಕ್ಷ ಮೇಜ್, ಐದು ಲಕ್ಷ ಕಾಟನ್, ಆರು ಲಕ್ಷ ಆಯಿಲ್ ಸೀಡ್ಸ್, ಎಂಟು ಲಕ್ಷ ವೆಜಿಟಬಲ್ಸ್, ಹೀಗೆ ಡಿವೈಡ್ ಮಾಡಿ ವ್ಯವಸಾಯ ಮಾಡುವುದಾದರೆ ವ್ಯವಸಾಯ ಕ್ಷೇತ್ರದಲ್ಲಿ ಮೈಸೂರು ಸಂಸ್ಥಾನ ಏನಾದರೂ ಎಲ್ಲರ ಕಣ್ಣಿಗೆ ಬೀಳುವ ಹಾಗೆ ಆಗುತ್ತದೆ. ಇಲ್ಲದೇ ಹೋದರೆ ವ್ಯವಸಾಯ ಕ್ಷೇತ್ರದ ಭೂಪಟದಿಂದ ಮೈಸೂರಿನ ಚಿತ್ರವನ್ನು ಅಳಿಸುವ ಕಾಲ ಬಂದಿದೆ. ಅದಕ್ಕೋಸ್ಕರ ನಾನಾದರೂ ಸರ್ಕಾರದವರು ಈ ಕಡೆ ಗಮನ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ಲ್ಯಾಂಡ್ ರೀಫಾರಮ್ಸ್ ಬಂತು. ಭೂಮಿಯನ್ನು ಕತ್ತರಿಸಿ ಯಾರು ಭೂಮಿಯನ್ನು ಮಾಡುತ್ತಾರೋ ಅವರಿಗೆ ಕೊಡಬೇಕು ಎಂದು ಮಾಡಿದಿರಿ. ಇನ್ನೊಂದು ಕಡೆ ಕನ್‌ಸಾಲಿಡೇಷನ್ ಆಫ್ ಫ್ರಾಗ್‌ಮೆಂಟೇಷನ್, ಎಂದರೆ ಎಲ್ಲೆಲ್ಲಿ ತುಂಡು ತುಂಡು ಭೂಮಿ ಇದೆಯೋ ಅದನ್ನು ಒಟ್ಟಿಗೆ ಸೇರಿಸಿ ವ್ಯವಸಾಯಕ್ಕೆ ಅನುಕೂಲವಾಗತಕ್ಕ ಕ್ಷೇತ್ರ ಮಾಡಬೇಕು ಎಂದು ಮಾಡಿದ್ದೀರಿ. ಹೀಗೆ ಸರ್ಕಾರದಲ್ಲಿ ದ್ವಂದ್ವಯುದ್ಧ ನಡೆದಿದೆ. ಭೂಮಿ ತುಂಡು ಮಾಡಬೇಕೇ ಅಥವಾ ತುಂಡು ಮಾಡಿರುವ ಭೂಮಿಯನ್ನು ಸೇರಿಸಬೇಕೇ, ಯಾವರೀತಿ ತುಂಡು ಭೂಮಿಯನ್ನು ಸೇರಿಸಬೇಕು ಎಂದು ದ್ವಂದ್ವಯುದ್ಧ ನಡೆಯುತ್ತಾ ಇದೆ. ಅದಕ್ಕೋಸ್ಕರ ನಾನಾದರೂ ಹೇಳುತ್ತೇನೆ, ವ್ಯವಸಾಯ ಕ್ಷೇತ್ರದಲ್ಲಿ ಇವೊತ್ತಿನ ದಿವಸ ನಿಜವಾಗಿ ಶಕ್ತಿಮೀರಿ, ಎಲ್ಲೆಮೀರಿ ಕೆಲಸ ಮಾಡಬೇಕಾದರೆ, ಅದಕ್ಕೆ ಬೇಕಾದಂಥ ಎಲ್ಲಾ ಸಾಧನಗಳನ್ನು ಮೈಸೂರು ಸರ್ಕಾರ ಒದಗಿಸಿದರೆ ಮಾತ್ರ ಸಾಧ್ಯವಾಗುತ್ತದೆ ಇಲ್ಲದೇ ಹೋದರೆ ಸಾಧ್ಯವಾಗುವುದಿಲ್ಲ. ನಮಗೆ ಬಂದಿರತಕ್ಕ ಅನ್ನ ಕ್ಷಾಮ ಹೋಗುವುದಿಲ್ಲ. ಅದಕ್ಕೋಸ್ಕರ ಒಂದು ವಿಷಯ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾವುದರಲ್ಲಿ ಬೇಕಾದರೂ ರಾಜಕೀಯ ತನ್ನಿ, ಆದರೆ ವ್ಯವಸಾಯ ಕ್ಷೇತ್ರದಲ್ಲಿ ತರಬೇಡಿ. ವ್ಯವಸಾಯ ಕ್ಷೇತ್ರದಲ್ಲಿ ಯಾರೇ ಬತ್ತ ಬೆಳೆಯಲಿ, ರಾಗಿ ಬೆಳೆಯಲಿ, ಅಥವಾ ಏನೇ ಬೆಳೆದರೂ ಅದರಿಂದ ರಾಷ್ಟ್ರಕ್ಕೆ ಅನುಕೂಲವಾಗುತ್ತದೆ, ದೇಶಕ್ಕೆ ಅನುಕೂಲವಾಗುತ್ತದೆ, ಎಂದು ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ನಮ್ಮ ಮುಂದಿರುವ ಎಲ್ಲಾ ಬೇಡಿಕೆಗಳನ್ನೂ ಅನುಮೋದಿಸುತ್ತಾ ಕೆಲವು ಮಾತುಗಳನ್ನಾಡಲು ಬಯಸುತ್ತೇನೆ. ಆಯವ್ಯಯ ಅಂದಾಜು ಪಟ್ಟಿಯ ಬೇಡಿಕೆಗಳ ಮೇಲೆ ನಾವು ಮಾತನಾಡುವಾಗ, ವಿರೋಧಪಕ್ಷದವರು ಎಲ್ಲಾ ವಿರೋಧ ಮಾಡುವುದು, ಆಡಳಿತ ಪಕ್ಷದವರು ಬೆಂಬಲ ಕೊಡುವುದು ಎಂದು ಅಲ್ಲ ; ಒಳ್ಳೆಯ ಕೆಲಸ ಮಾಡಿದ್ದರೆ, ನಾವೂ ನೀವೂ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಹೇಳುವುದು, ಸರಿ ಇಲ್ಲದಿದ್ದರೆ, ಸರಿಯಿಲ್ಲ ಎಂದು ಹೇಳಿ ರಚನಾತ್ಮಕ ಸಲಹೆ ಮಾಡುವುದು. ಹಾಗಾದರೆ ಮಾತ್ರ ಆಡಳಿತ ಸರಿಯಾಗಿ ನಡೆಯುತ್ತದೆ.

ಅರಣ್ಯ ಶಾಖೆಯ ಬಗ್ಗೆ ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ ಅರ್ಥಸಚಿವರ ಭಾಷಣದತಃಖ್ತೆ ನೋಡಿದರೆ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಆದಾಯ ಬಂದಿದೆ ಎನ್ನುವುದು ವಿವರವಾಗಿ ತಿಳಿಯುತ್ತದೆ. ಈ ತೆರಿಗೆಯಿಂದ ಸಂಪಾದನೆ ಬಿಟ್ಟರೆ (Common Tax Revenue) ಅರಣ್ಯ ಇಲಾಖೆಯಿಂದ ಆದಾಯ ಹೆಚ್ಚಾಗಿದೆ. ದುಡಿದು ಸಂಪಾದನೆ ಮಾಡುವ ಇಲಾಖೆ ಇದು ಒಂದೇ. ಈ ಇಲಾಖೆ ಹೆಚ್ಚಿನ ರೀತಿಯಲ್ಲಿ ನೋಡಿಕೊಂಡರೆ, ಇನ್ನೂ ಹೆಚ್ಚಿನ ಸಂಪಾದನೆ ಕೂಡ ಆಗುತ್ತದೆ ಎಂದು ಹೇಳಬಯಸುತ್ತೇನೆ. ಹಿಂದೆ ಈ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ಬೆಲೆ ಉಳ್ಳ ಮರಗಳನ್ನು ಕಡಿಮೆ ಬೆಲೆಗೆ ಕೊಟ್ಟಿದ್ದಾರೆ, ಸರಿಯಾದ ಬೆಲೆಗೆ ಮಾರಿದ್ದರೆ ಸರ್ಕಾರಕ್ಕೆ ಲಾಭ ಬರುತ್ತಿತ್ತು ಎಂದು ಹೇಳಿದ್ದಾರೆ. ಹಾಗೆ ಸರಿಯಾದ ಬೆಲೆಗೆ ಮರಗಳನ್ನು ಮಾರು ವ್ಯವಸ್ಥೆ ಮಾಡಿದರೆ ಹೆಚ್ಚಿಗೆ ಆದಾಯ ಬರುತ್ತದೆ ಎಂದು ಹೇಳಬಯಸುತ್ತೇನೆ. ಅರಣ್ಯ ಇಲಾಖೆಯಿಂದ ಒಟ್ಟು ಆದಾಯ 10 ಕೋಟಿ 20 ಲಕ್ಷ ರೂಪಾಯಿ ಬರುತ್ತದೆ ಎಂದು ರಿವೈಸ್ಡ್ ಎಸ್ಟಿಮೇಟ್ಸ್ ಇದೆ. 10½ ಕೋಟಿ ಬರಬೇಕಾದರೆ ಇಲಾಖೆ ಎಷ್ಟು ಮಟ್ಟಿಗೆ ಕೆಲಸ ಮಾಡಿರಬಹುದು ಎಂಬುದರೆ ಅರಿವಾಗುತ್ತದೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಮಾತನಾಡುವಾಗ ಆಶ್ಚರ್ಯವಾಯಿತು. ಅವರು ಅಂಕಿಅಂಶಗಳ ಕಡೆಗೆ ಗಮನ ಕೊಟ್ಟು ಸಲಹೆ ಕೊಟ್ಟಿಲ್ಲ. 10½ ಕೋಟಿ ರೂಪಾಯಿಗಳ ವರಮಾನ ಬರಬೇಕಾದರೆ,

ಎಷ್ಟು ಕೆಲಸ ಮಾಡಿರಬಹುದು ಎಂದು ತಿಳಿದು ಬರುತ್ತೆ ಅರ್ಥಸಚಿವರ ಭಾಷಣದತಃಖ್ತೆಯನು ಓದಿದರೆ ಗೊತ್ತಾಗುತ್ತದೆ. ಇಷ್ಟೆಲ್ಲಾ ನಾನು ಹೇಳಿದ್ದು ಈ ಇಲಾಖೆ ಎಷ್ಟು ಮುಖ್ಯವಾದುದು ಎನ್ನುವುದಕ್ಕೋಸ್ಕರ: ಕಾಡಿನಲ್ಲಿ ಜಮೀನು ಸಾಗುವಳಿಗೆ ಕೊಡಬೇಕು ಎಂದು ಕೇಳುತ್ತಾರೆ. ಬೆಳೆಯುವ ಜಾಗದಲ್ಲಿ ಜಮೀನು ಕೊಡುವುದರಲ್ಲಿ ನನ್ನ ಆಕ್ಷೇಪಣೆ ಇಲ್ಲ. ಒಟ್ಟು ನಮ್ಮ ರಾಜ್ಯದಲ್ಲಿ ಶೇಕಡ 18 ಕಾಡು ಇದೆ. ಇರಬೇಕಾದುದು $33\frac{1}{3}$ ಭಾಗ. ಅರಣ್ಯ ಶಾಸ್ತ್ರದ ಪ್ರಕಾರ ಉತ್ಪತ್ತಿ ಬರುವ ಕಾಡಿನಲ್ಲಿ ಜಮೀನು ಕೊಡುವುದನ್ನು ಎಚ್ಚರಿಕೆಯಿಂದ ಕಡಿಮೆ ಮಾಡಬೇಕು. ಒಟ್ಟಿಗೆ ತುಂಬಾ ಕೊಡಬೇಡಿ. ಬಾತುಕೋಳಿ ಬಂಗಾರ ಮೊಟ್ಟೆಯಿಟ್ಟಂತಾಗುವುದು ಬೇಡ. ಒಂದು ಲಕ್ಷ ಚಿಲ್ಲರೆ ಕಾಡಿನಿಂದ ಸಾಗುವಳಿಗೆ ಅನುಕೂಲವಾಗಲಿ ಅಂದರೆ ರೆವಿನ್ಯೂಗೆ ಕೊಟ್ಟು ಅದರಿಂದ ಎಂಟು ಲಕ್ಷ ಚಿಲ್ಲರೆ ಎಕರೆ ಸಾಗುವಳಿಗೆ ಉಪಯೋಗಕ್ಕೆ ಬರದೆ ಇರುವ ಜಾಗ ತಗೊಂಡು (Forest consolidation) ಕನ್ಸಾಲಿಡೇಷನ್ ಸ್ಕೀಮ್ ಮಾಡಿದ್ದೀರಿ. 11ನೇ ನವಂಬರಲ್ಲಿ ಸ್ಯಾಂಕ್ಷನ್ ಆಗಿದೆ. ಎಂಟು ಲಕ್ಷ ತಗೊಂಡು ಅರಣ್ಯ ಸಂಪತ್ತು ಹೆಚ್ಚು ಮಾಡುತ್ತಿರುವುದು ಒಳ್ಳೆ ಯೋಚನೆ. ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಆರಣ್ಯ ಸಂಪತ್ತಿನಿಂದ ಕೂಡಿದ ಮಲೆನಾಡು ಶಿವಮೊಗ್ಗ ಜಿಲ್ಲೆ. ನಾನು ಅನೇಕ ಬಾರಿ ಮಾನ್ಯ ಸಚಿವರನ್ನು ಕಾಡಿದ್ದೇನೆ, ಜಮೀನು ಬಿಟ್ಟುಕೊಡಬೇಕು ಎಂದು. ಈಗ ನನಗೆ ಅರಿವು ಆಗುತ್ತಿದೆ. ಆ ಬಗ್ಗೆ ಇದನ್ನೆಲ್ಲ ಓದಿದಮೇಲೆ ಕಾಡಿನ ಜಮೀನನ್ನು ಕೊಡುವಾಗ ಎಚ್ಚರಿಕೆಯಿಂದ ಗಮನಿಸಿ ಕೊಡಬೇಕು. ಅರಣ್ಯಶಾಖೆಯ ಮೇಲೆ ಎಷ್ಟೋ ದೂರುಗಳನ್ನು ನನಗೂ ಕೂಡ ಬಂದು ಹೇಳಿದ್ದಾರೆ. ಊರಿನಲ್ಲಿಯೇ ಕಳ್ಳತನ ಹಿಡಿಯುವುದು ಕಷ್ಟ. ಕಾಡಿನಲ್ಲಿ ಕಳ್ಳತನ ಆದರೆ ಅದನ್ನು ಕಂಡುಹಿಡಿಯುವುದು ಇನ್ನೂ ತುಂಬಾ ಕಷ್ಟ. ಕಳ್ಳತನ ಮತ್ತು ಕಳ್ಳ ಸಾಗಾಣಿಕೆಯನ್ನು ಹಿಡಿಯಲು ಅರಣ್ಯ ಇಲಾಖೆಯವರು (T.S.P.) ಟಿಂಬರ್ ಸ್ಮಗ್ಲಿಂಗ್ ಪ್ರಿವೆನ್‌ಷನ್ (Forest police) ಕೆಲವು ಕಡೆ ಇಟ್ಟಿದ್ದಾರೆ. ಎಲ್ಲಾ ಕಡೆಯೂ ಅದನ್ನು ಇಡುವುದು ಒಳ್ಳೆಯದು ಅರಣ್ಯ ಇಲಾಖೆ ಕಳ್ಳತನ ಹಿಡಿಯುವುದರಲ್ಲಿ ಪ್ರಗತಿ ಹೊಂದಿದೆ ಎಂದು ಇಲ್ಲಿ ಕೊಟ್ಟಿರುವ ತಃಖ್ತೆಯಿಂದ ಗೊತ್ತಾಗುತ್ತದೆ. ಇದರ ಮೊಟ್ಟಿಗೆ ಹೇಳುವುದಾದರೆ 7774-63-64ರಲ್ಲಿ 64-65ರಲ್ಲಿ 12 ಸಾವಿರ ಚಿಲ್ಲರೆ ಅಂದಮೇಲೆ ಕಳ್ಳತನ ಹಿಡಿಯುವುದರಲ್ಲಿ ಬರಬರುತ್ತಾ ಈ ಟಿಂಬರ್ ಸ್ಮಗ್ಲಿಂಗ್ ವಿಚಾರದಲ್ಲಿ ತುಂಬಾ ಪ್ರಗತಿಯನ್ನು ಸಾಧಿಸಿದೆ. ಆದರೂ ಇದನ್ನು ಪೂರ್ತಿಯಾಗಿ ಹಿಡಿಯುವುದಕ್ಕೆ ಕಷ್ಟ. ಅರಣ್ಯದಲ್ಲಿ ಕಳ್ಳ ಸಾಗಾಣಿಕೆ ಹಿಡಿಯುವವರಿಗೆ ಸಾಕಷ್ಟು ರಕ್ಷಣೆಯೂಬೇಕು. ನೀವು ಏನೂ ಮಾಡೋಲ್ಲ ಹಾಗೆ ನಡೆದಿದೆ ಎಂದರೆ ಇದಕ್ಕಿಂತ ಏನೂ ಮಾಡಲಾಗೋಲ್ಲ. ಇನ್ನು ಆಯವ್ಯಯ ಆಯಿತು, ಇನ್ನು ವ್ಯಯಖರ್ಚು ಇನ್ನು ಸಿಬ್ಬಂದಿ ವಿಚಾರದಲ್ಲಿ ಹೇಳುವುದಾದರೆ, 1960ನೇ ಇಸವಿಯಲ್ಲಿ 59 ಲಕ್ಷ ಇತ್ತು ಈಗ 84 ಲಕ್ಷವಾಗಿದೆ. ಮತ್ತು ನಮ್ಮ ರೆವೆನ್ಯೂ ಏಳು ಕೋಟಿ ಇದ್ದುದ್ದು 10 ಕೋಟಿವರೆಗೆ ಯಾಗಿದೆ. ಖರ್ಚು ಎರಡು ಕೋಟಿ ಇದ್ದದ್ದು $6\frac{1}{2}$ ಕೋಟಿಯಾಗಿದೆ. ಹೀಗಿರುವುದರಿಂದ, ಈ ಸಿಬ್ಬಂದಿಯಲ್ಲಿ ಏನಾಗುತ್ತೆ. ಹೆಚ್ಚಾಗಿ ಸಿಬ್ಬಂದಿ ಮಾಡಿ. ಉದಾಹರಣೆಗೆ ಈಗ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಜೂನಿಯರ್ ಇಂಜಿನಿಯರ್, ಆಸಿಸ್ಟ್ಯಾಂಟ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರುಗಳು, ಮತ್ತು ವಿದ್ಯಾಇಲಾಖೆಯಲ್ಲಿ ಆಸಿಸ್ಟ್ಯಾಂಟ್ ಡೈರಕ್ಟರ್, ಜಾಯಿಂಟ್ ಡೈರೆಕ್ಟರ್ ಮತ್ತು ಡೈರಕ್ಟರ್ ಎಂದು ಅನೇಕ ಅಧಿಕಾರಿಗಳು ಇದ್ದಾರೆ. ಅದೇ ರೀತಿ ಈ ಇಲಾಖೆಯಲ್ಲೂ ಕೂಡ ಹೆಚ್ಚು ಮಾಡಬೇಕೆಂದು. ನಾನು ನೋಡಿದಾಗಿನಿಂದ ಇದ್ದಷ್ಟೇ ಜನ ಇದ್ದಾರೆ. ಸಿಬ್ಬಂದಿಗೆ ಹೆಚ್ಚು ಮಾಡಬೇಕು.

ಇನ್ನು ಪ್ಲಾಂಟೇಶನ್ 1965-66ರಲ್ಲಿ ಸುಮಾರು 52,382 ಎಕರೆಯಾಗಿದೆ. ಇದು ಬಹಳ ಒಳ್ಳೆಯ ಕೆಲಸ ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅದೇ ರೀತಿ ರಬ್ಬರ್ ಕಲ್ಟಿವೇಶನ್ ಕೂಡ ಮಾಡಿದ್ದಾರೆ. 1286 ಎಕರೆ ಪ್ರಪಥಮವಾಗಿ ಮಾಡಿದ್ದೀರಿ ಅಂತ ತಿಳಿದು ತುಂಬಾ ಸಂತೋಷ. ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಸಿ ಅಭಿವೃದ್ಧಿಗೊಳಿಸಿ ಹೆಚ್ಚು ಉತ್ಪತ್ತಿ ದೊರೆಯುತ್ತೆ. ಹುಲ್ಲು ಇಲ್ಲದೆ ದನಕರುಗಳಿಗೆ ತೊಂದರೆಯಾದ ಈ ಅಭಾವ ಕಾಲದಲ್ಲಿ ಅರಣ್ಯ ಇಲಾಖೆಯವರು ಎಷ್ಟೋ ಸಾವಿರ ಹುಲ್ಲನ್ನು ಕಾಡಿನವರು ಸೇರಿಸಿ 1500 ಟನ್ ಮಾಡಿದ್ದೀರಿ. 350 ಟನ್ ಹುಲ್ಲು ಈಗಾಗಲೇ ಹಂಚಲಾಗಿದೆ. ಎಷ್ಟೋ ಸಾವಿರ ಟನ್ ಹುಲ್ಲನ್ನು ಬೆಳೆಸಿ ಯಾರಾದರೂ ಇದನ್ನು ತೆಗೆದುಕೊಂಡು ಹೋಗಬಹುದು ಎಂದು ಹೇಳಿದ್ದದ್ದು ತುಂಬಾ ಒಳ್ಳೇ ಕೆಲಸ ಅಭಿನಂದನೆ. ಇನ್ನು ಕೈಗಾರಿಕೋದ್ಯಮದಲ್ಲಿ ಆದಾಯ ತಗೊಂಡರೆ ಗಂಧದ ಎಣ್ಣೆಯ ಕಾರ್ಖಾನೆಯು ಉದ್ಯಮ ಸಂಸ್ಥೆಗಳಲ್ಲಿ ಮುಂದಿದೆ. ಇದಕ್ಕೂ ಅರಣ್ಯ ಇಲಾಖೆಯವರು ತುಂಬಾ ಗಂಧ ಕೊಟ್ಟಿದುದರಿಂದ ನಮ್ಮ ಮಾನ್ಯ ಸೋದರಿಯವರಾದ ನಾಗರತ್ನಮ್ಮನವರು ಹೇಳಿದರು, ಅರ್ಥಿಕ ಸಚಿವರು ಬಜೆಟನ್ನು ಮಂಡಿಸುವುದರಲ್ಲಿ ಮೂರನೇ ತರಗತಿಯಲ್ಲಿ ಪಾಸಾಗಿದ್ದಾರೆ ಎಂದು. ಆದರೆ ನಾನಾದರು ಹೇಳುತ್ತೇನೆ, ಅವರು ಈ ಇಲಾಖೆಯಲ್ಲಿ ಮೊದಲನೇಯ ತರಗತಿಯಲ್ಲಿ I ರ್‍ಯಾಂಕ್ ಬಂದಿದ್ದಾರೆಂದು ಹೋದ ಬಾರಿ ಅನೇಕ ಸಲಹೆಗಳನ್ನು ಇಲಾಖೆ ಮತ್ತು ಇಲಾಖೆ ನೌಕರರ

(ಶ್ರೀಮತಿ ರತ್ನಮ್ಮ ಮಾಧವರಾವ್)

ಬಗ್ಗೆ ಮಾತಾಡಿದೆ. ಬಹಳ ಭಾಗ ಎಲ್ಲದಕ್ಕೂ ಗಮನ ಕೊಟ್ಟಿದ್ದರೆ ಮತ್ತೆ ಹೇಳಲು ಹೋಗೊಲ್ಲ. ಅವರು ಅನೇಕ ವಿಧವಾದ ಪ್ರಗತಿಯನ್ನು ಮಾಡಿದ್ದಾರೆ. ಇನ್ನು ಈ ಅರಣ್ಯದಲ್ಲಿರುವಂತಹ ಕ್ರೂರ ಮೃಗಗಳಿಗೆ ಅವಕಾಶ ಕೊಡದೆ ವನ್ಯ ಮೃಗಗಳ ರಕ್ಷಣೆಗೆ ಹೆಚ್ಚಿನ ಗಮನವನ್ನು ಕೊಟ್ಟು, ಅರಣ್ಯ ಸಂಪತ್ತನ್ನು ಇನ್ನೂ ಹೆಚ್ಚಿಗೆ ಮಾಡಿಕೊಳ್ಳಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪಿ. ಫಾಯದೆ (ಅಂಕೋಲ):—ಮಾನ್ಯ ಸಭಾಪತಿಗಳೇ, ನಮ್ಮ ಮುಂದಿರುವ ಈ ವ್ಯವಸಾಯ ಫಾರೆಸ್ಟ್ ಖಾತೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ ನನ್ನ ಜಿಲ್ಲೆಯ ಮಟ್ಟಿಗೆ ಸ್ವಲ್ಪ ಮಾತನಾಡಲಪೇಕ್ಷಿಸುತ್ತೇನೆ. ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯೆಯರು ಈ ಅರಣ್ಯ ಇಲಾಖೆಯ ಬಗ್ಗೆ ತಮ್ಮ ಧೋರಣೆಯನ್ನು ಹೇಳಿದರು. ಆದರೆ ನಾನು ಕಟುವಾಗಿ ಟೀಕೆ ಮಾಡುವ ಪ್ರಸಂಗ ಬಂತಲ್ಲ ಎಂದು ನಾನು ಸ್ವಲ್ಪ ದುಃಖಪಡಬೇಕಾಗಿದೆ. ಏಕೆಂದರೆ, ಇದರಿಂದ ಯಾರಿಗೆ ನೋವಾಗಿದೆಯೋ ಅವರ ಹೊರತು ಬೇರೆಯವರಿಗೆ ಏನೂ ಗೊತ್ತಾಗುವುದಿಲ್ಲ. ಇದೇ ಸಭೆಯಲ್ಲಿ ಕಳೆದ 1963ನೇ ಇಸವಿಯಲ್ಲಿ ನಾನು ಒಂದು ಪ್ರಶ್ನೆ ಕೇಳಿದಾಗ ನಮ್ಮ ಜಿಲ್ಲೆಯಲ್ಲಿ 74,828 ಲ್ಯಾಂಡ್ ಲೆಸ್ ಲೇಬರರ್ಸ್ ಇದ್ದಾರೆ ಎಂದು ಉತ್ತರ ಕೊಟ್ಟಿದ್ದರು. ಆ ಪೈಕಿ ಎಷ್ಟು ಜನರಿಗೆ ಈ ಜಿಲ್ಲೆಯ 2 ಡಿವಿಜನ್ಸ್ ಭೂಮಿ ಒದಗಿಸಿದ್ದಾರೆ ಎಂಬುದನ್ನು ನೋಡಬೇಕು. ಅಲ್ಲಿ ಏನಾಗಿದೆಯೆಂದರೆ ಆಫೀಸುಗಳನ್ನು ಧಾರವಾಡದಲ್ಲೇ ಮಾಡಿಬಿಟ್ಟಿದ್ದಾರೆ. ಒಂದೇ ಒಂದು ಕಡೆ ಕಟ್ಟಡದಲ್ಲೇ ಒಟ್ಟು ಮೂರು ಆಫೀಸುಗಳು ಇವೆ. ಇದರಿಂದಾಗಿ ಕಾರವಾರದವರಿಗೆ ತುಂಬಾ ತೊಂದರೆಯಾಗಿದೆ. ಯಾವ ಕೆಲಸವಾಗಬೇಕಾದರೂ ಧಾರವಾಡಕ್ಕೆ ಹೋಗಬೇಕಾಗುತ್ತದೆ. ಸರಕಾರದವರು ಕಟ್ಟು ನಿಟ್ಟಾಗಿ ಒಂದು ನಿರ್ಣಯಕ್ಕೆ ಬರಬೇಕು ಹೆಚ್ಚಾಗಿ ಕಂಟ್ರಾಕ್ಟರ್ಸ್ ಧಾರವಾಡದ ಕಡೆಯಿಂದ ಬರುತ್ತಾರೆ, ಬೇರೆ ಕಡೆ ಕಾರವಾರದಲ್ಲಿ ಮಾಡಿದರೆ ಅವರಿಗೆ ತುಂಬಾ ಅನಾನುಕೂಲವಾಗುತ್ತದೆ ಎಂದು ವರ್ತಮಾನ ಪತ್ರಗಳಲ್ಲಿ ಬರುತ್ತಾ ಇತ್ತು. ಇದರಿಂದ ಏನು ತಿಳಿಯುತ್ತದೆ ಎಂದರೆ, ಅವರ ಅಧಿಕಾರಿಗಳಿಗೆ, ಕಂಟ್ರಾಕ್ಟರುಗಳಿಗೆ ಅನುಕೂಲವಾಗಬೇಕು, ಇನ್ನುಳಿದವರಿಗೆ ಅನಾನು ಕೂಲವಾದರೂ ಚಿಂತೆ ಇಲ್ಲ. ಹಾಗಿದ್ದರೆ ಈ ಎಲ್ಲಾ ಆಫೀಸುಗಳನ್ನೂ ಬೆಂಗಳೂರಿನಲ್ಲೇ ಮಾಡ ಬಹುದಲ್ಲ? ಇದು ನಿಜವಾಗಿಯೂ ಸರಿಯಲ್ಲ. ಆದ್ದರಿಂದ ಈ ಡಿವಿಜನ್ನುಗಳು ಎಲ್ಲೆಲ್ಲಿ ಇರಬೇಕೋ ಅಲ್ಲೇ ಮಾಡಬೇಕೆಂದು ನಾನು ಮೊದಲನೆಯದಾಗಿ ಕೇಳಿಕೊಳ್ಳುತ್ತೇನೆ. ಇನ್ನು ಈ ಡಿಪಾರ್ಟ್ ಮೆಂಟಿನವರು ಕೊಡುವ ಉತ್ತರವನ್ನು ನೋಡಿದರೆ, ಈ ಇಲಾಖೆಯವರು ಸರಿಯಾಗಿ ದಕ್ಷತೆ ವಹಿಸಿ ಕೆಲಸಮಾಡುತ್ತಾರೋ ಇಲ್ಲವೋ ಎಂಬ ಸಂದೇಹ ಬರುತ್ತದೆ. ಹಿಂದೆ ಒಂದು ಪ್ರಶ್ನೆಗೆ ಈ ಉತ್ತರ ವನ್ನು ಕೊಟ್ಟಿದ್ದಾರೆ:

> "Whether it has come to their notice that the grantees are not able to cultivate such land unles jungle is cleared by the forest Department"

Reply: No. Forest land is not handed over to the Revenue Department.

ಅದರ ಜೊತೆಯಲ್ಲಿ ಒಂದು ರಿಕ್ವೆಸ್ಟ್ ಕಳಿಸಿದ್ದೆ, ಅದಕ್ಕೆ ಬಂದ ಉತ್ತರ ಈ ರೀತಿ ಇದೆ.

Reply received is:

> "I am directed to state that the Government have already released nearly an area of 2,000 acres of forest land in Yellapur taluk and these lands are now in the possession of the Deputy Commissioner North Kanara, Karwar, for being released to deserving persons for purposes of cultivation"

ಇದನ್ನೆಲ್ಲಾ ನೋಡಿದ್ದರೆ ಒಂದಕ್ಕೊಂದು ಸರಿಯಿಲ್ಲದೆ ಸತ್ಯಕ್ಕೆ ದೂರವಾದ ಮಾತಾಗಿದೆ. ಇದಕ್ಕೆಲ್ಲಾ ಯಾರು ಕಾರಣರು ಎಂದು ನೋಡಿ ಅವರನ್ನು ಶಿಕ್ಷೆಗೆ ಗುರಿಮಾಡಬೇಕೆಂದು ನಾನಾ ದರೂ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಾಧಾರಣ 84 ಪರ್ಸೆಂಟ್ ಅರಣ್ಯ ಪ್ರದೇಶ. ಅದರಲ್ಲೂ ನಮ್ಮ ತಾಲ್ಲೂಕಿನಲ್ಲಿ ಶೇಕಡಾ 92 ಭಾಗ ಅರಣ್ಯ ಪ್ರದೇಶವಾಗಿದೆ. ಸರ್ಕಾರದವರು ಅರಣ್ಯ

ಭಾಗ ಎಂಬ ನೆವದಿಂದ ನಮ್ಮನ್ನು ನಿರ್ಲಕ್ಷಿಸಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ. ನಮಗೆ ಬೇಕಾದಷ್ಟು ನೀರಾವರಿ ಇದೆ, ಫಲವತ್ತಾದ ಜಮೀನು ಇದೆ. ಇಲ್ಲಿ ಅರಣ್ಯ ಇಲಾಖೆಯವರು ಕಾಫಿ ಪ್ಲಾಂಟೇಶನ್, ಹಣ್ಣು ಹಂಪಲು ಮರಗಳನ್ನು ಹಾಗೂ ರಬ್ಬರನ್ನು ಬೆಳೆಸಿದರೆ, ಜನರಿಗೆ ಅನುಕೂಲ ವಾಗುತ್ತದೆ, ಬರೀ ನಿರುಪಯೋಗಿ ಗಿಡಮರಗಳನ್ನು ಬೆಳೆಸಿದರೆ, ಅಥವಾ ಜನರಿಗೆ ಏನೂ ಪ್ರಯೋಜನವಾಗದ ಕಾಡುಮರಗಳನ್ನು ಬೆಳೆಸಿದರೆ, ಅದರಿಂದ ಏನೊಂದು ಪ್ರಯೋಜನವಾಗಲಾರದು. ಇದನ್ನೆಲ್ಲಾ ಜನರಿಗೆ ಉಪಯೋಗವಾಗುವಂತಹ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಫಿಶರೀಸ್ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ನಮ್ಮಲ್ಲಿ ಬೇಕಾದಷ್ಟು ಕೆರೆಕಟ್ಟೆಗಳು ಇವೆ. ಇದರಲ್ಲಿ ಎಲ್ಲಾ ಮೀನುಗಳನ್ನು ಬೆಳೆಸುವುದರಿಂದ ಅನುಕೂಲ ವಾಗುತ್ತದೆ. ಆದ್ದರಿಂದ ಈ ಇನ್‌ಲೆಂಡ್ ಫಿಶರಿಯ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಹೇಳ ಬಯಸುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಒಂದು ವಿಷಯ ಹೇಳುತ್ತೇನೆ. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಈಗ ವ್ಯವಸಾಯಗಾರರಿಗೆ ಅವಶ್ಯವಿರುವಂಥ ಟ್ರ್ಯಾಕ್ಟರ್ಸ್, ಪವರ್ ಟ್ರಿಲ್ಲರ್ಸ್ ಯಾವುದೂ ದೌರ್ಭಾಗ್ಯವದಿಂದ ನಮ್ಮ ಜಿಲ್ಲೆಗೆ, ಸಿಗಲೇ ಇಲ್ಲ. ಈ ಸಭೆಯಲ್ಲಿ ನಾನು ಬಂದಲಾಗಾಯ್ತು ಹೇಳುತ್ತಿದ್ದೇನೆ. ನಮ್ಮ ಮುಂದುಗೋಡು ಹಳಿಯಾಳ ತಾಲ್ಲೂಕು ಭತ್ತ ಬೆಳೆಯುವುದರಲ್ಲಿ ಅಗ್ರಗಣ್ಯ ಎಂದು ಹೆಸರುಪಡೆದಿದೆ. ಅಲ್ಲಿಯೂ ಕೂಡ ಯಾರಿಗೂ ಮಂಜೂರಾಗಿರುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ನಿಗಾ ಕೊಟ್ಟು ಅದನ್ನು ಆ ಭಾಗಕ್ಕೆ ಒದಗಿಸುವಂತೆ ಏರ್ಪಾಡು ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಸಭೆಯ ಮುಂದೆ ಇರುವ ವ್ಯವಸಾಯ ಇಲಾಖೆಯ 5,65,05,000 ರೂಪಾಯಿಗಳ ಬೇಡಿಕೆ ಬಹಳ ಕಡಮೆ ಇದೆ ಎಂದು ಹೇಳಿ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸ್ವಾಮಿ, ನಮ್ಮ ದೇಶದ, ಆಹಾರದ ಪರಿಸ್ಥಿತಿಯನ್ನು ನೋಡಿದರೆ ನಮ್ಮ ವ್ಯವಸಾಯ ಇಲಾಖೆ ಯಾವ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವ ಅನುಭವ ನಮಗೆ ಬರುತ್ತದೆ. ಎರಡನೆಯ ಯೋಜನೆಯಲ್ಲಿ ಮೈಸೂರು ಸರ್ಕಾರದವರು ಸಾಧಾರಣ 38 ಲಕ್ಷ ಟನ್ ಆಹಾರವನ್ನು ಬೆಳೆಸಿದರು. ಮೂರನೆ ಯೋಜನೆಯಲ್ಲಿ ಎಂಟು ಲಕ್ಷ ಟನ್ ಜಾಸ್ತಿಯಾಗಿ ಅದು 48 ಲಕ್ಷ ಟನ್ ಆಗಬಹುದು ಎಂದು ಅಂದಾಜು ಮಾಡಿದ್ದರು. ಈ ವರ್ಷದ ಬೆಳೆಗಳನ್ನು ನೋಡಿದರೆ 20 ಲಕ್ಷಕ್ಕೆ ಬಂದು ನಿಂತಿದೆ. ನಮ್ಮ ವ್ಯವಸಾಯ ಇಲಾಖೆ ಯಾವ ತರಹದಲ್ಲಿ ಕೆಲಸ ಮಾಡುತ್ತಿದೆ ಎನ್ನುವುದನ್ನು ನಾವು ಬೇರೆ ಎತ್ತಿ ತೋರಿಸಬೇಕಾಗಿಲ್ಲ. ನಮ್ಮಲ್ಲಿ ಬೇಕಾದಷ್ಟು ವ್ಯವಸಾಯಕ್ಕೆ ಯೋಗ್ಯವಾದ ಸ್ಥಳವಿದೆ ಮಾತ್ರವಲ್ಲದೆ ಸರ್ವ ಅನುಕೂಲತೆಗಳೂ ಇವೆ. ಹೀಗಿದ್ದರೂ ಕೂಡ ನಮ್ಮ ವ್ಯವಸಾಯ ಇಷ್ಟರ ತನಕ ಅಭಿವೃದ್ಧಿ ಹೊಂದದೆ ಇರುವುದಕ್ಕೆ ಕಾರಣ ವನ್ನು ಕಂಡು ಹಿಡಿಯುವುದಕ್ಕೆ ಕೂಡ ನಮ್ಮ ಸರ್ಕಾರಕ್ಕೆ ಆಗಿಲ್ಲ. ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಲೋಕನಾಥನ್ ಅವರ ರಿಪೋರ್ಟಿನಲ್ಲಿ ಒಂದು ವಿಷಯವನ್ನು ಅವರು ಹೇಳಿದ್ದಾರೆ.

> "Mysore has had a tradition of enlightened administration and powerful development, but since the re-organisation of the State in 1956, its economic structure has gone down. Its agriculture is poor and barren......industrial structure is weak; forest and sericulture, though well-developed, indicate only cultural advancement, and the *per capita* income......is well below the All-India average."

ಅವರು ಏನು ಹೇಳಿದ್ದಾರೆಂದರೆ, ಹಳೇ ಮೈಸೂರಿನಲ್ಲಿರುವಾಗ ವ್ಯವಸಾಯ ಇಲಾಖೆಯಲ್ಲಿ ಸ್ವಲ್ಪ ಕೆಲಸ ನಡೆದಿದೆ. 1956ನೆ ಇಸವಿಯಿಂದ ಅಖಂಡ ಕರ್ಣಾಟಕವಾದ ಮೇಲೆ ವ್ಯವಸಾಯ ಇಲಾಖೆಯು ನಿದ್ದೆ ಹೊಡೆಯುತ್ತಿದೆ ಮಾತ್ರವಲ್ಲದೆ ನಮ್ಮ ಆಡಳಿತ ವಹಿಸಿರುವ ಸರ್ಕಾರ ಖಾಲಿ ಹೊಲಸು ರಾಜಕೀಯ ಪುಢಾರಿಗಳನ್ನು ಉತ್ಪಾದನೆ ಮಾಡುವ ಶಕ್ತಿಯನ್ನು ಪಡೆದಿದೆ, ವ್ಯವಸಾಯ ಇಲಾಖೆ ಯಲ್ಲಿ ಏನೇನೂ ಉತ್ಪನ್ನವಾಗಿಲ್ಲ ಎಂದು ಈ ರಿಪೋರ್ಟಿನ ಮೇಲೆ ನಾವು ಹೇಳಬೇಕಾಗಿದೆ.

(ಶ್ರೀ ಬಿ. ಭಾಸ್ಕರ ಶೆಟ್ಟಿ)

ನಮ್ಮ ದೇಶದಲ್ಲಿ 250.3 ಮಿಲಿಯನ್ ಎಕರೆಗಳಲ್ಲಿ ಆಹಾರ ಧಾನ್ಯವನ್ನು ಬೆಳೆಯುವ ಶಕ್ತಿ ಇದೆ. ವರ್ಷ ಒಂದಕ್ಕೆ ಲಕ್ಷಾಂತರ ಎಕರೆ ಜಾಸ್ತಿ ಮಾಡುವುದಕ್ಕೆ ಸಾಧ್ಯವಿದೆ. ಆದರೂ ನಮ್ಮ ಆಡಳಿತ ವರ್ಗದವರು ವ್ಯವಸಾಯದಲ್ಲಿ ಹೆಚ್ಚಿನ ಅಭಿರುಚಿಯನ್ನು ಹೊಂದದೆ ನಿರ್ಜೀವಾವಸ್ಥೆಯನ್ನು ಹೊಂದಿ ವ್ಯವಸಾಯ ಇಲಾಖೆಯಲ್ಲಿ ಏನನ್ನು ಸಾಧಿಸಿಲ್ಲ ಈ ತನಕ. ಕಾಡಿನಲ್ಲಿ ಹುಲಿಯನ್ನು ಬೇಟೆಯಾಡಲಿಕ್ಕೆ ಹೋಗಿ ಇಲಿಯನ್ನು ಹೊಡೆಯುವ ಪರಿಸ್ಥಿತಿಯಂಟಾಗಿದೆ ಎಂದರೆ ತಪ್ಪಾಗಲಾರದು. ನಾನು ಕೆಲವು ವಿಷಯಗಳನ್ನು ತಮ್ಮ ಮುಂದೆ ಹೇಳುತ್ತೇನೆ. ಹೋದ ಸಲ ಎರಡನೆ ಬೆಳೆಗೆ ದೇಶದಲ್ಲಿ ಮಳೆ ಇಲ್ಲದೆ, ನೀರಿಲ್ಲದೆ ಇರುವ ಪರಿಸ್ಥಿತಿಯಲ್ಲಿ ಪಂಪ್‌ಸೆಟ್‌ಗಳನ್ನು ರೈತರಿಗೆ ಕೊಟ್ಟರು. ಇದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಕೆಲವು ಹಣವನ್ನು ಕೊಟ್ಟು ವ್ಯವಸಾಯಗಾರರಿಗೆ ಪಂಪ್‌ಸೆಟ್‌ಗಳನ್ನು ಕೊಟ್ಟು ಬೆಳೆಗಳನ್ನು ಉಳಿಸಬೇಕು ಎಂದು ಹೇಳಿದರು. ಆ ಪಂಪ್‌ಸೆಟ್‌ಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂದು ತಮಗಾದರೂ ಗೊತ್ತಿದೆಯೇ ಎಂದು ಕೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಹೀಗೆ ಐದಾರು ಪಂಪುಸೆಟ್ಟುಗಳನ್ನು ಕೊಟ್ಟಿದ್ದಾರೆ. ಅದನ್ನು ಪಡೆದ ರೈತರು ನನ್ನ ಹತ್ತಿರ ಬಂದು ಅದಕ್ಕೆ ಬೇಕಾದ ಸ್ಪೇರ್ ಪಾರ್ಟ್‌ಗಳಿಲ್ಲದೆ ಪಂಪ್‌ಗಳು ಕೆಲಸ ಮಾಡುತ್ತಿಲ್ಲ, ಇದರಿಂದಾಗಿ ಬೆಳೆ ಎಲ್ಲ ಹೋಯಿತು. ಸರ್ಕಾರದವರು ನಮಗೆ ಪಂಪ್ ಸೆಟ್ ಕೊಡದೆ ಇದ್ದಿದ್ದರೆ ನಾವು ಬೇರೆ ಏರ್ಪಾಡನ್ನು ಮಾಡಿಕೊಳ್ಳುತ್ತಿದ್ದೆವು ಎಂದು ಹೇಳುತ್ತಾರೆ. ಅಂಥ ರೀತಿಯಲ್ಲಿ ಪಂಪ್‌ಸೆಟ್‌ಗಳು ಕೆಲಸ ಮಾಡುತ್ತಿವೆ.

ರಾಜ್ಯದಲ್ಲಿ ಬೆಳೆಯುವ ರೈತನಿಗೆ ಬೇಕಾದಷ್ಟು ಗೊಬ್ಬರ ಮತ್ತು ಇತರ ಅನುಕೂಲತೆ ಸಿಕ್ಕುತ್ತಿಲ್ಲ. ನನ್ನ ಮಿತ್ರರು ಅನೇಕರು ಹೇಳುತ್ತಿದ್ದರು, ನಮ್ಮ ರಾಜ್ಯಕ್ಕೆ ಬರುವ ಗೊಬ್ಬರದ ಕಾರ್ಖಾನೆ ಈಗ ಬೇರೆ ರಾಜ್ಯಕ್ಕೆ ಹೋಯಿತು ಮಾತ್ರವಲ್ಲದೆ ನಮ್ಮ ರಾಜ್ಯದಲ್ಲಿ ಈಗ ಸಣ್ಣದಾಗಿ ಕೆಲಸ ಮಾಡುತ್ತಿರುವ ಗೊಬ್ಬರದ ಕಾರ್ಖಾನೆಯ ಉತ್ಪಾದನೆಯನ್ನು ಹೆಚ್ಚಿಸುವ ಆಲೋಚನೆಯನ್ನೂ ಕೂಡ ನಮ್ಮ ಸರ್ಕಾರದವರು ಮಾಡಲಿಲ್ಲ. ಅಂತೂ ನಮ್ಮ ರಾಜ್ಯದ ಕೈ ಬಿಟ್ಟು ಹೋದ ಗೊಬ್ಬರದ ಕಾರ್ಖಾನೆ ಹೋಯಿತು, ಅದು ಬರುವುದಿಲ್ಲ. ಆದರೂ ಕೂಡ ನಮಗೆ ಬೇಕಾಗಿರುವ ಗೊಬ್ಬರವನ್ನು ಈಗಿರುವ ನಮ್ಮ ಸಣ್ಣ ಕಾರ್ಖಾನೆಯಿಂದಲೇ ಉತ್ಪಾದನೆ ಮಾಡುವಂತೆ ನೋಡಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಸ್ವಾಮಿ, ನಾವು ಆಹಾರಕ್ಕಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಸಾಧಾರಣ ವರ್ಷ ಒಂದಕ್ಕೆ 60 ಕೋಟಿ ವಿದೇಶಿ ವಿನಿಮಯವನ್ನು ನಷ್ಟ ಮಾಡಿ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಕ್ರಮ ಕೈಕೊಂಡಿದ್ದೇವೆ ಎಂದು ಹೇಳುವುದು ತಮ್ಮ ವೇದಿಕೆಯ ಮೇಲಿನ ಭಾಷಣದಲ್ಲಿ ಇಲ್ಲವೇ ತಾವು ಅಲ್ಲಲ್ಲಿ ಮಾಡುವ ಪಂಚಾಯಿತಿ ಗೋಷ್ಠಿಗಳಲ್ಲಿ, ತಾಲ್ಲೂಕು ಬೋರ್ಡ್ ವಿಚಾರ ಗೋಷ್ಠಿಗಳಲ್ಲಿ, ಅಲ್ಲಿ ಮುಗಿಯುತ್ತದೆ. ಆಹಾರದ ಉತ್ಪಾದನೆಯಲ್ಲಿ ಹೆಚ್ಚಿಗೆ ಏನೂ ಮಾಡಿಲ್ಲ ಎಂದು ಹೇಳಲಿಕ್ಕೆ ನನಗೆ ಬಹಳ ಶೋಚನೀಯವಾಗುತ್ತದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದು ಇದ್ದರೆ ನಮ್ಮಲ್ಲಿ ಸಾಧಾರಣ, 5,07,897 ಎಕರೆಯಲ್ಲಿ ಬತ್ತದ ಬೆಳೆಯನ್ನು ಬೆಳೆಸುತ್ತೇವೆ. ಅದರಲ್ಲಿಯೂ ಕೂಡ ನಮ್ಮದು ವಿಚಿತ್ರ ಸಂಗತಿ. ಯಾವ ಜಿಲ್ಲೆಯಲ್ಲಿಯೂ ಮೂರು ಬೆಳೆ ಬತ್ತ ಬೆಳೆಸುವ ಕ್ರಮವನ್ನು ಇಟ್ಟುಕೊಂಡಿಲ್ಲ. ನಮ್ಮ ಜಿಲ್ಲೆಯಲ್ಲಿ ಮಾತ್ರ ಮೂರು ಬೆಳೆಗಳನ್ನು, ವರ್ಷದ ಮೂರು ಕಾಲಗಳಲ್ಲಿ ಬೆಳೆಸುತ್ತಾರೆ. ಒಂದನೆ ಬೆಳೆಯನ್ನು 3,69,709 ಎಕರೆಯಲ್ಲಿಯೂ, ಎರಡನೆ ಬೆಳೆಯನ್ನು 1,20,770 ಎಕರೆಯಲ್ಲಿಯೂ ಮೂರನೆ ಬೆಳೆಯನ್ನು 17,418 ಎಕರೆಯಲ್ಲಿಯೂ ಹೀಗೆ ಒಟ್ಟು 5,07,897 ಎಕರೆಯಲ್ಲಿ ಬತ್ತದ ಬೆಳೆಯನ್ನು ತೆಗೆಯುತ್ತಾರೆ. ನಮ್ಮ ದೇಶದಲ್ಲಿ ಆಹಾರ ಧಾನ್ಯಗಳಲ್ಲಿ ನಿಕೃಷ್ಟ ಪರಿಸ್ಥಿತಿ ಬಂದಿರುವುದು ಅಕ್ಕಿಯಲ್ಲಿ. ಇಡೀ ಮೈಸೂರು ದೇಶದಲ್ಲಿ 20 ಜಿಲ್ಲೆಗಳಲ್ಲಿ ಸಾಧಾರಣ ಐದನೇ ಒಂದು ಅಂಶ ಅಕ್ಕಿ ಬೆಳೆಯುವ ವಿಸ್ತೀರ್ಣ ಇರುವ ಜಿಲ್ಲೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆ. ಆದರೆ ಇಲ್ಲಿ ನಮಗೆ ಬೇಕಾದ ಸವಲತ್ತುಗಳಿಲ್ಲ. ನಾವು ಯಾವತ್ತಿಗೂ ಬೊಬ್ಬೆ ಹೊಡೆಯುತ್ತ ಇದ್ದೇವೆ, ನಮ್ಮಲ್ಲಿ ಹೆಚ್ಚು ನೀರಾವರಿ ಅನುಕೂಲವಿಲ್ಲದೆ ಇರುವುದರಿಂದ ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಒದಗಿಸಬೇಕು ಎಂದು. ಈ ಗಾಗಲೇ ನನ್ನ ತಿಳುವಳಿಕೆಯ ಮೇಲೆ ನಮ್ಮ ಜಿಲ್ಲೆಗೆ ಸಾಧಾರಣ ಎರಡೂವರೆ ಕೋಟಿ ರೂಪಾಯಿಗಳ ಅಂದಾಜಿನಲ್ಲಿ ತಯಾರಿಸಿದ ಯೋಜನೆ ಪ್ರಕಾರ ಪಂಪ್‌ಸೆಟ್‌ಗಳನ್ನು ಇನ್‌ಸ್ಟಾಲ್ ಮಾಡುವುದು ಬಾಕಿ ಉಳಿದಿದೆ. ಈಗ ಸಾಧಾರಣ ಮೂರೂವರೆ ಸಾವಿರ, ನಾಲ್ಕು ಸಾವಿರ ಪಂಪ್‌ಸೆಟ್‌ಗಳನ್ನು ಕೊಟ್ಟಿದ್ದಾರೆ. ಈ ವರ್ಷ ಹೆಚ್ಚಿಗೆ ಅಂದರೆ ನಮ್ಮ ಜಿಲ್ಲೆ ಒಂದಕ್ಕೆ ಎಂಭತ್ತಾರುವರೆ ಸಾವಿರ ಪಂಪ್‌ಸೆಟ್‌ಗಳನ್ನು ಒದಗಿಸಿದರೆ, ನಾನು ಖಂಡಿತವಾಗಿ ಹೇಳುತ್ತೇನೆ, ನಮ್ಮ ಈಗಿನ ಉತ್ಪತ್ತಿ ಏನಿದೆ ಅದನ್ನು ಇನ್ನೂ ಹೆಚ್ಚು ಮಾಡಬಹುದು. 2.50,500

ಟನ್ ತನಕ ಬತ್ತವನ್ನು ಈಗ ನಾವು ಉತ್ಪತ್ತಿ ಮಾಡುತ್ತಿದ್ದೇವೆ. ನಮ್ಮಲ್ಲಿ ಇನ್ನೂ ನಾಲ್ಕು ಲಕ್ಷ ಎಕರೆ ಭೂಮಿ ಜಾಸ್ತಿ ಸಾಗುವಳಿ ಆಗಲಿದ್ದು ಪ್ರತಿ ವರ್ಷ ಐದು ಲಕ್ಷ ಟನ್ ಅಕ್ಕಿಯನ್ನು ಉತ್ಪತ್ತಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದುದರಿಂದ ತಾವು ಪಂಪ್‌ಸೆಟ್‌ಗಳನ್ನು ಒದಗಿಸುವುದರಲ್ಲಿ ತೀವ್ರ ಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ವಿಚಾರದಲ್ಲಿ ತೆಗೆದು ಕೊಳ್ಳಬೇಕು. ನಮ್ಮಲ್ಲಿ ಬೇರೆ ನೀರಾವರಿ ಯೋಜನೆಗಳ ಸೌಲಭ್ಯವಿಲ್ಲ, ಅಲ್ಲಿ ದೊಡ್ಡ ದೊಡ್ಡ ಅಣೆ ಕಟ್ಟುಗಳಿಲ್ಲ, ಬೇರೆ ಯಾವ ವಿಧವಾದ ನೀರಾವರಿ ಸೌಲಭ್ಯಗಳೂ ಅಲ್ಲಿ ಇಲ್ಲದೆ ಇದ್ದದ್ದರಿಂದ ಅಲ್ಲಿಯ ರೈತರು ಹೆಚ್ಚಾಗಿ ನೀರನ್ನು ಎತ್ತಿ ಸಾಗುವಳಿ ಮಾಡತಕ್ಕ ಪರಿಸ್ಥಿತಿ ಇರುವುದರಿಂದ ಆದಷ್ಟು ಪಂಪ್ ಸೆಟ್‌ಗಳನ್ನು ಹೆಚ್ಚಾಗಿ ದಕ್ಷಣ ಕನ್ನಡ ಜಿಲ್ಲೆಗೆ ಕೊಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಿ|ಹೇಳು

4–30 P. M.

ತ್ತೇನೆ. ಇನ್ನು ಜೂನ್‌ತಿಂಗಳ ಮೊದಲನೆಯ ವಾರದಲ್ಲಿ ನಮ್ಮ ಜಿಲ್ಲೆಗೆ ಮಳೆ ಬಂದರೆ ನಾಲ್ಕೈದು ತಿಂಗಳುಗಳ ತನಕ ಎಡೆಬಿಡದೆ ವಿಪರೀತ ಮಳೆ ಇದ್ದೇ ಇರುತ್ತದೆ. $2\frac{1}{2}$ ಕೋಟಿ ರೂಪಾಯಿಗಳ ಪಂಪು ಸೆಟ್ಟುಗಳಿಂದಾಗತಕ್ಕ ಕೆಲಸ ಈಗ ಉಳಿದಿದೆ. ಅದನ್ನು ತೀವ್ರಗತಿಯಲ್ಲಿ ಮಾಡಬೇಕು. ಟ್ರಾನ್ಸ್ ಫಾರ್ಮರ್ಸ್, ಎ. ಸಿ. ಎಸ್. ಆರ್. ವೈರ್ಸ್, ಅದಕ್ಕೆ ಬೇಕಾದ ಸಲಕರಣೆಗಳನ್ನು ತ್ವರಿತಗತಿಯಲ್ಲಿ ಕಳುಹಿಸಬೇಕು. ನಾನು ಗ್ಯಾರಂಟಿ ಕೊಡುತ್ತೇನೆ. ಬರುವ ವರ್ಷದಲ್ಲಿ $1\frac{1}{2}$ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆಸಿಕೊಡುತ್ತೇವೆಂಬ ಆಶ್ವಾಸನೆಯನ್ನು ಕೊಡುತ್ತೇನೆ. ಅಲ್ಲಲ್ಲಿ ಸಣ್ಣ ಸಣ್ಣ ಹೊಳೆಗಳು, ನದಿಗಳು ಹರಿಯುತ್ತವೆ. 197 ಮೈನರ್ ಇರ್ರಿಗೇಷನ್ ಸ್ಕೀಮುಗಳು ಅಂದಾಜಾಗಿ ಕೆಲವು ಇನ್ನೂ ಬಾಕಿ ಉಳಿದಿವೆ. ಇವತ್ತು ಸಣ್ಣ ನೀರಾವರಿ ಯೋಜನೆಯ ಮಂತ್ರಿಗಳು ಉತ್ತರ ಕೊಡುವಾಗ ಮಾಸ್ಟರ್ ಪ್ಲಾನ್ ಮಾಡುತ್ತೇವೆ, ನೀರಾವರಿಯೋಜನಗಳನ್ನು ತ್ವರಿತಗತಿ ಯಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದರು. ನಮ್ಮ ಜಿಲ್ಲೆಯೊಳಗೆ ಸಣ್ಣ ನೀರಾವರಿ ಯೋಜನೆಗಳೇ ನಿವೆಯೋ ಅವು ಏನೇ ನೂಸಾಲದು. ಇನ್ನು ಒಂದೆರಡು ವರ್ಷಗಳಲ್ಲಿ ಸಣ್ಣ ನೀರಾವರಿಯೋ ಜನ ಗಳನ್ನು ತೆಗೆದುಕೊಂಡರೆ ಬೇಕಾದಷ್ಟು ಪಂಪು ಸೆಟ್ಟುಗಳನ್ನು ರೈತರು ಉಪಯೋಗಿಸುವುದಕ್ಕೆ ಅನು ಕೂಲವಾಗುತ್ತದೆ. ಆದ್ದರಿಂದ ವೆಂಟೆಡ್ ಡ್ಯಾಮನ್ನು ತೀವ್ರಗತಿಯಲ್ಲಿ ಮಾಡಬೇಕು.

ಇನ್ನು ನಮ್ಮಲ್ಲಿ ಅತಿಮುಖ್ಯವಾದ ಬೆಳೆ ಅಂದರೆ ಗೇರು ಬೀಜದವ್ಯವಸಾಯ. ಇದರ ವಿಷಯದಲ್ಲಿ ನನ್ನ ಅನುಭವವನ್ನು ಹೇಳುತ್ತೇನೆ. ಇದರ ಬಗ್ಗೆ ಇನ್‌ಟೆನ್ಸಿವ್ ಕಲ್ಟಿವೇಷನ್ ಇರುವುದರಿಂದ ಇದು ಬೇರೆ ಬೇರೆ ದೇಶಗಳಿಗೆ ಹೋಗುತ್ತದೆ. ಮೈಸೂರು ರಾಜ್ಯದ ಉತ್ತರ ಮತ್ತು ದಕ್ಷಣ ಕನ್ನಡ, ಕೇರಳ ಜಿಲ್ಲೆಗಳಲ್ಲಿ ಬೆಳೆಯುವಷ್ಟು ಗೇರು ಬೀಜವನ್ನು ಇನ್ನೆಲ್ಲೂ ಬೆಳೆಯುವುದಿಲ್ಲ. ಆದ್ದರಿಂದ ಈ ಬೆಳೆಗೆ ಪ್ರೋತ್ಸಾಹವನ್ನು ಸರ್ಕಾರದವರು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಕೊಡದೆ ಬೇರೆ ಪ್ರದೇಶ ಗಳಿಗೆ ಕೊಡುವುದರಿಂದ ಈ ವ್ಯವಸಾಯವನ್ನೇ ಅಲ್ಲಿ ಕುಂಠಿತ ಮಾಡಿದಂತಾಗುತ್ತದೆ. ಇದರ ಉತ್ಪಾ ದನೆಗೆ ಶ್ರಮವಹಿಸುವ ಜನರಿಗೆ ಸರ್ಕಾರ ನಿಜವಾಗಿ ಹೆಚ್ಚಿನ ಉತ್ತೇಜನವನ್ನು ಕೊಡಬೇಕು. ಈ ದೇಶ ದಲ್ಲಿ ಗೇರುಬೀಜದ ಉತ್ಪಾದನೆಗೆ ಸರ್ಕಾರ ಇನ್ನೂ ಹೆಚ್ಚಿಗೆ ಸೌಲಭ್ಯಗಳನ್ನು ಒದಗಿಸಿಕೊಡ ಬೇಕೆಂಬುದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಈಗಿನ ಒಂದು ದೊಡ್ಡ ಆಹಾರ ಸಮಸ್ಯೆಯನ್ನು ನಿರ್ಮೂಲ ಮಾಡಬಲ್ಲ ಇನ್ನೊಂದು ಇಲಾಖೆ ಅಂದರೆ ಮೀನುಗಾರಿಕೆ ಇಲಾಖೆ. ನಮ್ಮಲ್ಲಿ ಆಳವಾದ ಸಮುದ್ರ ಇದು. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ 186 ಮೈಲುಗಳ ತನಕ ಮೀನಿನಿಂದ ವ್ಯವಸಾಯ ಮಾಡಬಹುದು. ಅಲ್ಲಿ ಸಾಧಾರಣವಾಗಿ ನನ್ನ ಅನುಭವದ ಮೇರೆಗೆ 6 ಲಕ್ಷ ಜನರು ಮೀನಿನ ವ್ಯವಸಾಯದಲ್ಲಿ ನಿರ ತರಾಗಿದ್ದಾರೆ. ಮೀನಿನ ವ್ಯವಸಾಯದ ಬಗ್ಗೆ ಸಹೋದರ ರಾಜ್ಯಗಳಾದ ಕೇರಳ ಮತ್ತು ಮಹಾ ರಾಷ್ಟ್ರ ರಾಜ್ಯಗಳನ್ನು ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಮೀನಿನ ವ್ಯವಸಾಯದ ಪ್ರಗತಿ ಏನೇನೂ ಸಾಲದು. ಹೋದವರ್ಷ ಕೇಂದ್ರಸರ್ಕಾರದವರು ಕ್ರ್ಯಾಷ್ ಪ್ರೋಗ್ರಾಂನಲ್ಲಿ ನಮ್ಮ ರಾಜ್ಯಕ್ಕೆ 76 ಲಕ್ಷ ರೂಪಾಯಿಗಳನ್ನು ಮೀನುವ್ಯವಸಾಯ ಇಲಾಖೆಗೆ ಜಾಸ್ತಿಯಾಗಿ ಕೊಟ್ಟದ್ದರಿಂದ ಕೆಲವು ಕೋಲ್ಡ್ ಸ್ಟೋರೇಜ್, ಕೆಲವು ರಸ್ತೆಗಳ ಹಾಗೂ ಕೆಲವು ಯಾಂತ್ರಿಕ ದೋಣಿಗಳ ಸೌಲಭ್ಯ ಸಿಕ್ಕಿದೆ. ಅದರಲ್ಲೂ ಕೂಡ ಕೇಂದ್ರ ಸರ್ಕಾರದವರು ನಮ್ಮ ಮೇಲೆ ತಾತ್ಸಾರ ಭಾವನೆಯನ್ನು ಬೀರಿ ಬೇರೆದೇಶಗಳಿಗೆ ಒಂದು ಕೋಟಿ ರೂಪಾಯಿಗಳಿಗೆ ಮಾರಿಕೊಟ್ಟಿದ್ದಾರೆ. ಈ ಬಾಬಿನಲ್ಲಿಯೂ ಕೂಡ ನಮ್ಮ ಮೇಲೆ ಮಲತಾಯಿ ಧೋರಣೆಯನ್ನುಂಟು ಮಾಡಿದ್ದಾರೆ. ನಮ್ಮಲ್ಲಿ ಹಿಂದೆ ಮೀನುವ್ಯವ ಸಾಯ ಒಂದು ದೊಡ್ಡ ಉತ್ಪಾದನೆ ವ್ಯವಸಾಯವಾಗಿತ್ತು. 4ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಪ್ರದೇಶದಲ್ಲಿ ಮೀನುವ್ಯವಸಾಯ ಯೋಜನೆಗೆ 110 ಕೋಟಿ ರೂಪಾಯಿಗಳನ್ನು ಖರ್ಚುಮಾಡ ಬೇಕೆಂದು ಕೇಂದ್ರ ಸರ್ಕಾರದವರು ನಿರ್ಧರಿಸಿದ್ದಾರೆ. ಅದರಲ್ಲಿ ನಮ್ಮ ರಾಜ್ಯ ಸರ್ಕಾರದವರು 16

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಕೋಟಿ ರೂಪಾಯಿಗಳ ಒಂದು ಪ್ಲಾನನ್ನು ಈಗಾಗಲೇ ತಯಾರುಮಾಡಿ ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸಿದ್ದರ ಮೇಲೆ ನಮ್ಮಲ್ಲಿ ಹಣದ ಅಭಾವವಿರುವುದರಿಂದ ಕೇವಲ 5 ಕೋಟಿ ರೂಪಾಯಿಗಳ ಪ್ಲಾನನ್ನು ಅವರು ಮಂಜೂರು ಮಾಡಿದಾರೆಂದು ನನ್ನ ತಿಳುವಳಿಕೆಗೆ ಬಂದಿದೆ. ಅಂತೂ ಈ ಸಲ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣ ಮೀನಿನ ವ್ಯವಸಾಯಕ್ಕೆ ಬಹಳ ಕಡಮೆಯಾಗಿದೆ. ಕೇರಳದ ಕರಾವಳಿಯಲ್ಲಿ ಸದ್ಯದಲ್ಲಿ ಕೇಂದ್ರ ಸರ್ಕಾರದ ಸಹಾಯದಿಂದ 200 ಯಾಂತ್ರಿಕ ದೋಣಿಗಳು ಈ ಮೀನು ವ್ಯವಸಾಯದಲ್ಲಿ ನಿರತವಾಗಿವೆ. ಇನ್ನೂ ಹೆಚ್ಚಿಗೆ ಯಂತ್ರ ಚಾಲಿತ ದೋಣಿಗಳನ್ನು ಈ ಮೀನು ಸಾಗಾಣಿಕೆಗಾಗಿ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಹೊರ ಪ್ರದೇಶಗಳಲ್ಲಿ ಜನರು ಹೆಚ್ಚಿಗೆ ಮೀನು ತಿನ್ನುವಂತೆ ಮಾಡಲು ಅದರ ಸಾಗಾಣಿಕೆಗಾಗಿ, ಹೆಚ್ಚಿಗೆ ಲಾರಿಗಳನ್ನೂ fishery roads, fisher boats, mechanised boats ಇನ್ನೂ ಇತರ ಸಲಕರಣೆಗಳನ್ನು ಸರ್ಕಾರದವರು ಮಾಡಿ ಕೊಡಬೇಕೆಂದು ನಾನು ಒತ್ತಾಯಮಾಡಿ ಹೇಳುತ್ತೇನೆ. ಏಕೆಂದರೆ ಈ ಸಲ ಕೊಟ್ಟಿರುವ ಹಣ ಏನೇನೂ ಸಾಲದು. ಅದಷ್ಟು ಹಣವನ್ನು ಈ ಮೀನು ವ್ಯವಸಾಯಕ್ಕೆ ಕೇಂದ್ರದವರು ಹೆಚ್ಚಿಗೆ ಕೊಡಬೇಕೆಂದು ನಮ್ಮ ರಾಜ್ಯ ಸರ್ಕಾರದವರು ಪ್ರಯತ್ನ ಮಾಡಬೇಕು. ನಮ್ಮ ಕರಾವಳಿಯಲ್ಲಿ ಸಾಧಾರಣವಾಗಿ ಒಂದು ಸಾವಿರ ಯಾಂತ್ರಿಕ ದೋಣಿಗಳನ್ನು ಸದ್ಯದಲ್ಲಿ ಕೊಟ್ಟರೆ ಸುಮಾರು ಒಂದು ಲಕ್ಷ ಟನ್ನುಗಳಷ್ಟು ಮೀನಿನ ಉತ್ಪಾದನೆಯನ್ನು ಜಾಸ್ತಿ ಮಾಡಬಹುದು. ಈಗ ಅದರ ಉತ್ಪತ್ತಿ ಬಹಳ ಕಡಮೆ. ಒಂದು ಲಕ್ಷ 20 ಸಾವಿರ ಟನ್ನುಗಳಷ್ಟು ನಮ್ಮ ಕ್ಯಾಚಸ್ ಇದೆ. ಮೀನುಗಾರಿಕೆ ಪರಿಸ್ಥಿತಿ ಈಗ ಬಹಳ ಕಡಮೆಯಾಗಿದೆ. ಹಿಂದುಳಿದ ವರ್ಗದವರಿಗೆ ಇಂತಹ ಸೌಲಭ್ಯಗಳನ್ನು ಒದಗಿಸದೇ ಇದ್ದರೆ ಮೀನು ವ್ಯವಸಾಯದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದರಲ್ಲಿ ಹೆಚ್ಚಿಗೆ ಪ್ರಗತಿಯನ್ನು ನಾವು ಕಾಣಲಿಕ್ಕಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಮೀನು ಬಹಳ ಪುಷ್ಟಿಯಾದ ಆಹಾರ ಪದಾರ್ಥ. ಉಪ್ಪು ನೀರಿನ ಮೀನನ್ನು ತಿಂದರೆ ಮನುಷ್ಯರ ಬುದ್ಧಿ ಶಕ್ತಿ ಕೂಡ ಹೆಚ್ಚಾಗುತ್ತದೆಂದು ಪರಿಣಿತರೂ ಮತ್ತು ಡಾಕ್ಟರುಗಳೂ ಹೇಳುತ್ತಾರೆ. ಆದ್ದರಿಂದ ಉಪ್ಪು ಮೀನನ್ನು ವಿಶೇಷವಾಗಿ ಬೆಂಗಳೂರಿಗೆ ತಂದು ಇಲ್ಲಿನ ಜನರು ಅದಷ್ಟು ಜಾಗ್ರತೆ ಹೆಚ್ಚು ಹೆಚ್ಚು ಅದನ್ನು ಉಪಯೋಗ ಮಾಡುವಂತೆ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಒಳನಾಡು ಪ್ರದೇಶದಲ್ಲಿ ಈಗಾಗಲೇ ಅಡಿಕೆ ತೋಟಗಳು ಎದ್ದು ನಿಂತಿವೆ. ಅಡಿಕೆ ಬೆಳೆ ಹೆಚ್ಚು ಹೆಚ್ಚಾಗಿ ವಿದೇಶೀ ವಿನಿಮಯವನ್ನು ಗಳಿಸುವಂಥದ್ದಾಗಿದೆ. ಆದ್ದರಿಂದ ಅಲ್ಲಿರತಕ್ಕ ಎಲ್ಲಾ ತಪ್ಪಲು ಪ್ರದೇಶದಲ್ಲಿ ಅಡಿಕೆ ಸಸಿಗಳನ್ನು ಹಾಕಿ ಅಡಿಕೆ ಬೆಳೆಯನು ಬೆಳೆಸಬಹುದು. ಈ ಬೆಳೆಗೆ ಸರ್ಕಾರದವರು ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕು, ಮಾತ್ರವಲ್ಲದೆ, ಮೆಣಸನ್ನು ಕೂಡ ನಮ್ಮ ಒಳನಾಡಿನ ಕೆಲವು ಭಾಗಗಳಲ್ಲಿ ಒಳ್ಳೆಯ ರೀತಿಯಲ್ಲಿ ಬೆಳೆಯುತ್ತಿದ್ದಾರೆ. ಆ ಬೆಳೆಗೂ ಕೂಡ ಸರ್ಕಾರದವರು ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಒಟ್ಟಿನಲ್ಲಿ ಈ ವರ್ಷ ವ್ಯವಸಾಯ ಇಲಾಖೆಗೆ ಸರ್ಕಾರದವರು ಒದಗಿಸಿರುವ ಹಣ ಬಹಳ ಕಡಮೆಯಾಗಿರುವುದರಿಂದ ಈ ಬೇಡಿಕೆಯನ್ನು ನಾನು ವಿರೋಧ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಮಂಡಿಸಿರತಕ್ಕ ವ್ಯವಸಾಯ, ಅರಣ್ಯ ಖಾತೆಗಳ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಕೊಡುತ್ತಾ ಇವತ್ತಿನ ದಿವಸ ಈ ದೇಶದಲ್ಲಿ ಬಹಳ ಪ್ರಾಮುಖ್ಯತೆಯನ್ನ ಹೊಂದಿನತಕ್ಕ ವ್ಯವಸಾಯ ಖಾತೆಯ ವಿಷಯವಾಗಿ ನಾನು ಮೊಟ್ಟಮೊದಲನೆಯದಾಗಿ ಪ್ರಸ್ತಾಪ ಮಾಡುತ್ತೇನೆ. ಈ ಖಾತೆಯು ಜವಾಬ್ದಾರಿಯನ್ನು ಹೊಂದಿ ಏನು ಮಾಡಬೇಕೆಂದು ಅಪೇಕ್ಷೆ ಮಾಡುತ್ತದೋ ಅದಕ್ಕೆ ಪ್ರಾಂತದ ಮುಖ್ಯ ಮಂತ್ರಿಗಳೂ ಸಹ ಆ ಒಂದು ಜವಾಬ್ದಾರಿಯನ್ನು ವಹಿಸಿಕೊಂಡು ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು. ಮುಖ್ಯವಾಗಿ ಈ ದೇಶದಲ್ಲಿ ಈಗಿಹ ಒಂದು ಆಹಾರ ಸಮಸ್ಯೆ ಮುಗಿಯುವವರೆಗೂ ನಾವು ಬೇರೆ ಯಾವ ಅಭಿವೃದ್ಧಿ ಕೆಲಸಗಳನ್ನು ಹೆಚ್ಚಿಗೆ ಮಾಡಲು ಗಮನ ಕೊಡದೆ ಇರಬೇಕಾಗಿದೆ. ಆ ವಿಚಾರವಾಗಿ ನಾನು ಈಗ ಪ್ರಸ್ತಾಪ ಮಾಡುತ್ತೇನೆ. ಮೊನ್ನೆ productivity council meeting ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಅದರ ಅಧ್ಯಕ್ಷತೆಯನ್ನು ವಹಿಸುತ್ತಾ ಭಾಷಣ ಮಾಡಿ ನೀಡಿದ ವಿವರಣೆಯಲ್ಲಿ ನಿಜವಾಗಿ ನಮ್ಮ ರೈತರಿಗೆ ಮುಂದೆ ಒಳ್ಳೆಯ ಭವಿಷ್ಯವಿದೆ,

ಅವರಿಗೆ ಒಂದು ರೀತಿಯ ಶಕ್ತಿ ಬಂದು ಗ್ರಾಮಾಭಿವೃದ್ಧಿಯಾಗುತ್ತದೆಂಬ ಒಂದು ಆಶ್ವಾಸನೆಯನ್ನು ಬಹಳ ಸ್ಪಷ್ಟವಾಗಿ ಹೇಳಿದರು. ಈ ದೇಶದಲ್ಲಿರತಕ್ಕ ವ್ಯವಸಾಯಗಾರರನ್ನು ಬೇರೆ ಕ್ಷೇತ್ರದಲ್ಲಿರತಕ್ಕ ಜನಗಳಿಗೆ ಹೋಲಿಕೆ ಮಾಡುವುದಾದರೆ, ಅದು ದುರ್ದೈವ. ಅವರನ್ನು ಅನಾದರಣೆ ಮಾಡಿದ ಹಾಗಾಗುತ್ತದೆ. ಅದು ಸರಿಯಲ್ಲ. ಯಾವ ಮರ್ಯಾದೆಯುಳ್ಳ ಸರ್ಕಾರಕ್ಕೂ ಅದು ಘನತೆಯನ್ನು ತರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು.

ಇನ್ನು ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ನಿರಂತರವಾಗಿ ರೈತ ಮಳೆಯ ನೀರಿನ ಆಶ್ರಯದಿಂದಲೇ ವ್ಯವಸಾಯ ಮಾಡಬೇಕಾಗಿದೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಬಾವಿಗಳನ್ನು ತೆಗೆಯುವುದಕ್ಕೆ ರೈತರಿಗೆ ಹಣವನ್ನು ಕೊಟ್ಟಿದ್ದಾರೆ. ಆಹಾರೋತ್ಪಾದನೆಯನ್ನು ಮಾಡುವುದಕ್ಕೆ ರೈತನಿಗೆ ಸೌಲಭ್ಯವನ್ನು ಒದಗಿಸಬೇಕೆಂದು ಸರ್ಕಾರ ಹೊರಟಿದೆ. ಈ ಕೆಲಸವನ್ನು ಒಂದು ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡಿದ್ದರೆ ಈ ಪರಿಸ್ಥಿತಿಯನ್ನು ಎಷ್ಟೋಮಟ್ಟಿಗೆ ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಈಗ ಮುಖ್ಯವಾಗಿ ಸರ್ಕಾರದವರು ಮತ್ತು ಇಲಾಖೆಯವರು ಒಂದು ಕೆಲಸವನ್ನು ಮಾಡದೇ ಹೋದರೆ ಬಾವಿಗಳಿಗೆ ಕೊಟ್ಟಿರತಕ್ಕ ಹಣವೆಲ್ಲವೂ ವ್ಯರ್ಥವಾಗಿ ಹೋಗುತ್ತದೆ. ಅದು ಏನೆಂದರೆ, ಸಾಯಿಲ್ ಕನ್‌ಸರ್ವೇಷನ್ ಮತ್ತು ಕಾಂಟೂರ್ ಬಂಡಿಂಗ್ ಕೆಲಸವನ್ನು ತೀವ್ರವಾಗಿ ಮಾಡಬೇಕು. ಅದನ್ನು ಮಾಡದೆ ಹೋದರೆ ಬೇಸಿಗೆಯ ಕಾಲದಲ್ಲಿ ಫೆಬ್ರವರಿ, ಮಾರ್ಚಿ ಮತ್ತು ಏಪ್ರಿಲ್ ತಿಂಗಳಿನಲ್ಲಿ ಬಾವಿಗಳಲ್ಲಿ ನೀರಿನ ಕೊರತೆ ಉಂಟಾಗುತ್ತದೆ. ಬಾವಿಗಳು ಇರತಕ್ಕ ಪ್ರದೇಶಗಳಲ್ಲಿ ಆ ಒಂದು ತೊಂದರೆ ಉಂಟಾಗುತ್ತದೆ. ಆ ಕಷ್ಟವನ್ನು ನಿವಾರಣೆ ಮಾಡಬೇಕಾದರೆ ಸಾಯಿಲ್ ಕನ್‌ಸರ್ವೇಷನ್ ಮತ್ತು ಕಾಂಟೂರು ಬಂಡಿಂಗ್ ಕೆಲಸಗಳನ್ನು ಮಾಡಬೇಕು. ಅದನ್ನು ಮಾಡದೇ ಹೋದರೆ ಬಾವಿಗಳಿಗಾಗಿ ಸರ್ಕಾರದವರು ಕೊಟ್ಟಿರತಕ್ಕ ಹಣ ಹಾಳಾಗಿ ಹೋಗುತ್ತದೆ. ರೈತರು ಮುಳುಗಿ ಹೋಗುತ್ತಾರೆ. ಈಗ ಯಾವ ಯಾವ ಜಿಲ್ಲೆಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಬಾವಿಗಳನ್ನು ತೆಗೆಸಿದ್ದಾರೆಯೋ ಆ ಜಿಲ್ಲೆಗಳಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಮತ್ತು ಕಾಂಟೂರ್ ಬಂಡಿಂಗ್ ಕೆಲಸಗಳನ್ನೂ ಮಾಡಿಸದೆ ಹೋದರೆ ಬಾವಿಗಳಲ್ಲಿ ನೀರಿನ ಅನುಕೂಲತೆ ಕಡಿಮೆಯಾಗುತ್ತದೆ. ತಜ್ಞರು ನಮಗೆ ಏನು ಹೇಳುತ್ತಾರೆಂದರೆ, ಮಳೆಗಾಲದಲ್ಲಿ ನಮಗೆ ಎಷ್ಟು ನೀರು ಸಿಕ್ಕುತ್ತದೆಯೋ ಅದೆಲ್ಲವೂ ಭೂಮಿಯಲ್ಲಿ ತಂಗಬೇಕು. ಈ ವಿಷಯವನ್ನು ತಜ್ಞರು ನಮಗೆ ಪದೇ ಪದೇ ಹೇಳುತ್ತಾರೆ. ಅದಕ್ಕಾಗಿ ಸರ್ಕಾರದವರು ಆ ಕೆಲಸಗಳನ್ನು ಮಾಡಬೇಕು. ಹಾಗೆ ಮಾಡುವುದಾದರೆ ಸಾಧ್ಯವಾದಮಟ್ಟಿಗೆ ರೈತರು ಬಾವಿಗಳಿಂದ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುತ್ತಾರೆ. ಅದರಿಂದಲೂ ಸಹ ಸಾಧ್ಯವಾದಮಟ್ಟಿಗೆ ಆಹಾರದ ಕೊರತೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿದೆ.

ಇನ್ನು ಉತ್ತಮವಾದ ಬಿತ್ತನೆ ಬೀಜಗಳನ್ನು ರೈತರಿಗೆ ಒದಗಿಸುವ ವಿಚಾರ. ಈ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನ್ಯಾಷನಲ್ ಸೀಡ್ ಕಾರ್ಪೋರೇಷನ್ನಿನಿಂದ ನಮಗೆ ಉತ್ತಮವಾದ ಬೀಜ ಸರಬರಾಯಿ ಆಗುತ್ತಿದೆ. ಇದರಲ್ಲಿ ಒಂದು ವ್ಯವಸ್ಥೆ ಅಗತ್ಯ. ಅದೇನೆಂದರೆ, ವ್ಯವಸಾಯ ಇಲಾಖೆಯವರು ಮತ್ತು ಅಗ್ರಿಕಲ್‌ಚರಲ್ ಯೂನಿವರ್ಸಿಟಿಯವರೂ ಹೊಂದಿಕೊಂಡು ಕೆಲಸ ಮಾಡುವಂತಾಗಬೇಕು. ಆ ಒಂದು ಮನೋಭಾವ ಅವರಲ್ಲಿ ಬೆಳೆಯಬೇಕು. ಅವರು ಇಲಾಖೆಯ ಕೆಲಸ ಕಾರ್ಯಗಳನ್ನು ದೇಶದ ಕೆಲಸ, ಅದು ನನಗೆ ಸಂಬಂಧಪಟ್ಟದ್ದು ಎಂದು ಕೆಲಸವನ್ನು ಮಾಡಬೇಕು. ಅದು ಯೂನಿವರ್ಸಿಟಿಯವರು ಮಾಡುವ ಕೆಲಸ ಎನ್ನುವ ಮನೋಭಾವನೆ ಅಧಿಕಾರಿಗಳಲ್ಲಿ ಬರಬಾರದು. ಹಾಗೆ ಮಾಡದೇ ಹೋದರೆ ಈಗ ಸರ್ಕಾರದವರು ಏನೊಂದು ಹೊಸ ಪ್ರಯೋಗವನ್ನು ಮಾಡುವುದಕ್ಕೆ ಹೊರಟಿದ್ದಾರೆಯೋ ಅದಕ್ಕೆ ಕುಂದಕವುಂಟಾಗುತ್ತದೆ. ಈಗ ನಮ್ಮಲ್ಲಿ ಸರ್ಕಾರಿ ಸೀಡ್ ಫಾರಮ್‌ಗಳಲ್ಲಿ ಬಿತ್ತನೆ ಬೀಜವನ್ನು ಉತ್ಪಾದನೆ ಮಾಡುವುದಕ್ಕಾಗಿ ತಜ್ಞರನ್ನು ಇಟ್ಟುಕೊಂಡಿದ್ದಾರೆ. ಅವರು ಮತ್ತು ಇಲಾಖೆಯ ಅಧಿಕಾರ ವರ್ಗದವರು ಬೀಜಗಳನ್ನು ಪಾಪ್ಯುಲರೈಜ್ ಮಾಡುವುದಕ್ಕಾಗಿ ರೈತರ ಜಮೀನಿನಲ್ಲಿ ಎಕ್ಸ್‌ಪರಿಮೆಂಟ್‌ಗಳನ್ನು ಮಾಡುತ್ತಾರೆ. ಆ ರೀತಿ ರೈತರ ಜಮೀನುಗಳಲ್ಲಿ ಎಕ್ಸ್‌ಪರಿಮೆಂಟ್‌ಗಳನ್ನು ಮಾಡಿದಾಗ ಅದರ ಖರ್ಚು ವೆಚ್ಚಗಳನ್ನು ರೈತರಿಂದ ಕೇಳಬಾರದು. ಅದು ಸರ್ಕಾರದವರೇ ಮಾಡಬೇಕಾದ್ದು. ಈ ಹೈಬ್ರೀಡ್ ಜೋಳವನ್ನು ನಮ್ಮ ರಾಜ್ಯದಲ್ಲಿರತಕ್ಕ ಪ್ರತಿಯೊಂದು ಬಾವಿಯ ಆಶ್ರಯದಲ್ಲಿ 3 ಎಕರೆಯಲ್ಲಿ ಬೆಳೆಯುವಂತೆ ಒಂದು ಯೋಜನೆಯನ್ನು ಹಾಕಿಕೊಂಡರೆ ಅದರಿಂದ ಸಾವಿರಾರು ಪಲ್ಲ ಜೋಳವನ್ನು ಬೆಳೆದು ಆಹಾರದ ಕೊರತೆಯನ್ನು ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಬಿತ್ತನೆ ಬೀಜವನ್ನು ರೈತರಿಗೆ ಮಾರಾಟ ಮಾಡುವುದಕ್ಕೆ ಧಾರವಾಡ ಮುಂತಾದ ಪ್ರದೇಶಗಳಲ್ಲಿ ಯಾವ ರೀತಿಯ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆಯೋ ಅದೇ ರೀತಿ ಬೆಂಗಳೂರು ಜಿಲ್ಲೆಯಲ್ಲಿಯೂ ಮಾಡಬೇಕು. ಈಗ ನ್ಯಾಷನಲ್ ಸೀಡ್ ಕಾರ್ಪೋರೇಷನ್ನಿನವರು ನಮಗೆ ಬಿತ್ತನೆ

(ಶ್ರೀ ಕೆ. ವಿ. ಬೈರೇಗೌಡ)

ಬೀಜವನ್ನು ಸಪ್ಲೈ ಮಾಡುತ್ತಿದ್ದಾರೆ ಅದು ಚೆನ್ನಾಗಿ ನಡೆಯುತ್ತಿದೆ. ವ್ಯವಸಾಯ ಇಲಾಖೆಯಲ್ಲಿ ಕೆಲಸ ಕಾರ್ಯಗಳನ್ನು ಮಾಡುವಾಗ ಅಧಿಕಾರ ವರ್ಗದವರು ಇದು ಇಲಾಖೆಗೆ ಸಂಬಂಧಪಟ್ಟ ಕೆಲಸ, ಇದು ಅಗ್ರಿಕಲ್‌ಚರಲ್ ಯೂನಿವರ್ಸಿಟಿಗೆ ಸಂಬಂಧಪಟ್ಟ ಕೆಲಸ ಎಂದು ಜವಾಬ್ದಾರಿಯನ್ನು ಒಬ್ಬರ ಮೇಲೊಬ್ಬರು ಹಾಕದೆ ಅದು ನನ್ನ ಕೆಲಸ, ದೇಶದ ಕೆಲಸ, ಎಂದು ಭಾವನೆಯನ್ನಿಟ್ಟು ಕೊಂಡು ಕೆಲಸ ಮಾಡುವುದಾದರೆ ಬಹಳಮಟ್ಟಿಗೆ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಈ ಇಲಾಖೆಯಲ್ಲಿ ಅಧಿಕಾರಿಗಳ ಸೀನಿಯಾರಿಟಿಗೆ ಸಂಬಂಧಪಟ್ಟಹಾಗೆ ಕೆಲವು ಲೋಪ ದೋಷಗಳು ಇವೆ. ಆದ್ದರಿಂದ ಈ ಇಲಾಖೆಯ ಅನೇಕ ಅಧಿಕಾರಿಗಳು ಹೈಕೋರ್ಟಿಗೆ ರಿಟ್ ಹಾಕಿದ್ದಾರೆ. ಈಗ ನಮ್ಮ ಸರ್ಕಾರದಲ್ಲಿ ಲಾ ಪರಿಣತರಾದ ಅಧಿಕಾರಿಗಳು ಇದ್ದಾರೆ. ಮತ್ತು ಸೆಕ್ರೆಟೇರಿಯೆಟ್‌ನಲ್ಲಿಯೂ ಕೂಡ ಅನೇಕ ಪರಿಣತರಾದ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇವರೆಲ್ಲರೂ ಸಹ ಸೇರಿಕೊಂಡು ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಿಗೆ, ನೌಕರರುಗಳಿಗೆ ಪ್ರಮೋಷನ್ ಕೊಡತಕ್ಕ ವಿಷಯದಲ್ಲಿ ಯಾರುಯಾರಿಗೆ ವ್ಯತ್ಯಾಸವಾಗಿದೆ, ಯಾರುಯಾರಿಗೆ ನ್ಯಾಯವಾಗಿ ಪ್ರಮೋಷನ್ ದೊರೆಯಬೇಕು ಎನ್ನತಕ್ಕ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಿ ಅದರ ಬಗ್ಗೆ ಒಂದು ದೃಢವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಅಧಿಕಾರಿಗಳು, ನೌಕರರು ಸುಮ್ಮನೆ ಹೈಕೋರ್ಟಿಗೆ ರಿಟ್ ಹೋಗಿ ಅಲ್ಲಿ ಲಾಯರುಗಳನ್ನು ಇಟ್ಟುಕೊಂಡು ಕೇಸುಗಳನ್ನು ನಡೆಸುವುದರಲ್ಲಿಯೇ ತಮ್ಮ ಕಾಲವನ್ನು ಕಳೆಯುತ್ತಾರೆ. ಆಫೀಸಿನಲ್ಲಿ ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದರಿಂದ ರೈತರಿಗೂ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ದೊಡ್ಡ ದೊಡ್ಡ ಹುದ್ದೆಯಲ್ಲಿರತಕ್ಕವರು, ಸೆಕ್ರೆಟರಿಗಳು ಮತ್ತು ಡೈರೆಕ್ಟರುಗಳು ಇವರೆಲ್ಲರೂ ಸೇರಿಕೊಂಡು ಈ ಇಲಾಖೆಯ ಅಧಿಕಾರಿಗಳು ನೌಕರರು ಇವರುಗಳ ಸೀನಿಯಾರಿಟಿ ಪ್ರಮೋಷನ್ ಇತ್ಯಾದಿಗಳ ಬಗ್ಗೆ ಏನೇನು ಲೋಪದೋಷಗಳಿವೆ ಎಂಬುದನ್ನು ಕಂಡುಹಿಡಿದು ಅದನ್ನು ಬಗೆಹರಿಸುವುದಾದರೆ ಅವರು ತಮ್ಮ ಕೆಲಸದಲ್ಲಿ ನಿರತರಾಗುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಸರ್ಕಾರದವರು ರೈತರಿಗೆ ವ್ಯವಸಾಯಕ್ಕೆ ಸಂಭಂಧಪಟ್ಟ ಕೆಲವು ಮೆಷನರಿಗಳನ್ನು ಎಂದರೆ ಟ್ರ್ಯಾಕ್ಟರುಗಳು, ಪವರ್ ಟಿಲ್ಲರುಗಳು ಮುಂತಾದ ಉಪಕರಣಗಳನ್ನು ಒದಗಿಸಿದ್ದಾರೆ. ಈ ಟ್ರ್ಯಾಕ್ಟರುಗಳಿಗೆ ಒಂದೆರಡು ವರ್ಷಗಳಕಾಲ ರಿಪೇರಿ ವಗೈರೆಗಳಿಗೆ ಫ್ರೀ ಸರ್ವೀಸ್ ಕೊಡುತ್ತಾರೆ. ಆ ಟ್ರ್ಯಾಕ್ಟರುಗಳಿಗೆ ಸಣ್ಣ ಪುಟ್ಟ ರಿಪೇರಿಗಳನ್ನು ಮಾಡಿದರೂ ಸಹ ಅದರ ಹೊರೆಯನ್ನು ರೈತರ ಮೇಲೆ ಹೊರಿಸುತ್ತಾರೆ. ಈಗ ಸರ್ಕಾರದವರು ಪ್ರಯತ್ನ ಮಾಡಿ ಒಂದು ಇಂಜಿನಿಯರಿಂಗ್ ಇಲಾಖೆಯನ್ನು ಮಾಡಿದ್ದಾರೆ. ಅದರ ಮುಖಾಂತರ ಈ ಟ್ರ್ಯಾಕ್ಟರುಗಳ ರಿಪೇರಿಗೆ ಬೇಕಾದಂತಹ ಸಾಮಾನುಗಳನ್ನು ರೈತರಿಗೆ ನ್ಯಾಯವಾದ ಬೆಲೆಗೆ ಒದಗಿಸುವ ವ್ಯವಸ್ಥೆ ಮಾಡಬೇಕು; ಮತ್ತು ಅದನ್ನು ರಿಪೇರಿ ಮಾಡುವುದಕ್ಕೆ ಸರ್ಕಾರದವರು ಮೆಕ್ಯಾನಿಕಲ್ ವ್ಯವಸ್ಥೆಯನ್ನು ಜಾಗ್ರತೆ ಮಾಡಬೇಕು. ಇಲ್ಲದೇ ಹೋದರೆ ರೈತರಿಗೆ ಬಹಳ ಕಷ್ಟವಾಗುತ್ತದೆ.

ಇನ್ನು ಹಾರ್ಟಿಕಲ್‌ಚರಲ್ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಆ ಇಲಾಖೆಯವರು ಕೆಲವು ತೋಟಗಳನ್ನು ಬೆಳೆಸಿದ್ದಾರೆ. ಕೆಲವು ಗಿಡಗಳನ್ನು ಕೂಡ ಬೆಳೆಸಿದ್ದಾರೆ. ಇವೊತ್ತು ನಮ್ಮ ದೇಶದಲ್ಲಿ ಆಹಾರದ ಪರಿಸ್ಥಿತಿ ಸುಧಾರಿಸಬೇಕಾದರೆ ನಾವು ತಿನ್ನತಕ್ಕ ಅಕ್ಕಿ, ರಾಗಿ, ಜೋಳ ಮತ್ತು ಗೋಧಿ ಈ ಆಹಾರವನ್ನು ಸ್ವಲ್ಪ ಬದಲಾವಣೆ ಮಾಡಬೇಕು. ದೇಶದಲ್ಲಿ ಹಣ್ಣಿನ ತೋಟಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ದೇಶದ ಎಲ್ಲಾ ಮೂಲೆ ಮೂಲೆಗಳಲ್ಲಿಯೂ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ನರ್ಸರಿ ಪ್ಲಾಂಟುಗಳನ್ನು ಸರಿಯಾಗಿ ಒದಗಿಸುವ ವ್ಯವಸ್ಥೆಯನ್ನು ಮಾಡಿಲ್ಲ. ಇದರಿಂದ ತೊಂದರೆಯಾಗುತ್ತಿದೆ. ಈ ವಿಚಾರವನ್ನು ಹಿಂದೆ ಕೂಡ ನಾನು ಪ್ರಸ್ತಾಪ ಮಾಡಿದ್ದೇನೆ. ಆದ್ದರಿಂದ ಈ ಇಲಾಖೆಯವರು ಉತ್ತಮ ಜಾತಿಯ ನರ್ಸರಿಗಳನ್ನು ಬೆಳೆಸಿ ಅವುಗಳನ್ನು ರೈತರಿಗೆ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಈ ಇಲಾಖೆಯವರು ಕೊಟ್ಟಂತಹ ನರ್ಸರಿಗಳನ್ನು ತೆಗೆದುಕೊಂಡು ಹೋಗಿ ಬೆಳೆಸಿದಾಗ 3-4 ವರ್ಷಗಳಾದರೂ ಕೂಡ ಆ ಗಿಡಗಳಲ್ಲಿ ಉತ್ತಮವಾದ ಫಸಲು ಬಾರದೆ ಎಷ್ಟೋ ಸಾರಿ ನಮ್ಮ ರೈತರು ನೊಂದುಕೊಂಡಿದ್ದಾರೆ. ಆದ್ದರಿಂದ ನರ್ಸರಿಗಳನ್ನು ಬೆಳೆಸುವಾಗ ಉತ್ತಮ ಜಾತಿಯ ನರ್ಸರಿಗಳನ್ನು ಬೆಳೆಸಿ ಅವುಗಳನ್ನು ರೈತರಿಗೆ ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಬಿತ್ತನೆ ಬೀಜದ ವಿಷಯದಲ್ಲಿ ಕೆಲವರು ಬಿತ್ತನೆ ಬೀಜವನ್ನು ಉತ್ಪತ್ತಿ ಮಾಡುತ್ತಾರೆಂದು ಹೇಳುತ್ತಾರೆ. ಆದರೆ ಆ ಬೀಜಗಳ ಬಗ್ಗೆ ನನ್ನ ಮನಸ್ಸಿಗೆ ಸಮಾಧಾನ ಇಲ್ಲ. ವ್ಯವಸಾಯವನ್ನು ಮಾಡಿಕೊಂಡು ಜೀವನ ಮಾಡತಕ್ಕ ರೈತನಿಗೆ ಒಳ್ಳೆಯ ಬೀಜಗಳನ್ನು ಒದಗಿಸದಿದ್ದರೆ ಅವನಿಗೆ ಬಹಳ

ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ರೈತರಿಗೆ ಒಳ್ಳೆಯ ಬೀಜಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ವರ್ಷ ನಮಗೆ ಬಂದಿರತಕ್ಕ ಕಷ್ಟಕಾಲದಲ್ಲಿ ರೈತರು ಬಿತ್ತನೆ ಬೀಜವನ್ನು ಒದಗಿಸಿಕೊಳ್ಳುವುದು ಬಹಳ ಕಷ್ಟವಾಗಿದೆ. ಮೊನ್ನೆ ತಾನೆ ನಾವು ತಾಲ್ಲೂಕು ಬೋರ್ಡ್‌ವತಿಯಿಂದ ಬಿತ್ತನೆ ರಾಗಿಯನ್ನು ಕೊಂಡುಕೊಂಡು ಬರಬೇಕೆಂದು ಹಳ್ಳಿಗಳ ಕಡೆ ಹೋದಾಗ ಅದನ್ನು ಇಟ್ಟುಕೊಂಡಿದ್ದವರಿಗೆ ಒಂದು ಪಲ್ಲಕ್ಕೆ 125 ರೂಪಾಯಿಗಳಂತೆ ಕೊಡುತ್ತೇವೆಂದು ನಾವು ಹೇಳಿದರೂ ಕೂಡ ಅವರು ಬಿತ್ತನೆ ರಾಗಿಗೆ ಜೂನ್ ತಿಂಗಳಿನಲ್ಲಿ ಏನು ಬೆಲೆ ಆಗುತ್ತದೆಯೋ ಆ ಬೆಲೆಯನ್ನು ಕೊಟ್ಟು ತೆಗೆದುಕೊಂಡು ಹೋಗಿ ಎಂದು ನಮಗೆ ಅವರು ಹೇಳಿದರು. ಇಂಥಾ ಒಂದು ಪರಿಸ್ಥಿತಿ ಇರುವಾಗ ಸರ್ಕಾರದವರು ರೈತರಿಗೆ ಬಿತ್ತನೆ ಬೀಜವನ್ನು ಒದಗಿಸುವುದಕ್ಕೆ ವ್ಯವಸ್ಥೆಯನ್ನು ಮಾಡದೇ ಹೋದರೆ ಬಯಲು ಸೀವೆಯಲ್ಲಿ ರಾಗಿ ಬಿತ್ತನೆ ಬೀಜಕ್ಕೆ ಬಹಳ ತೊಂದರೆ ಬರುತ್ತದೆ.

ಇನ್ನು ಫರ್ಟಿಲೈಸರುಗಳ ಬಗ್ಗೆ ಇನ್ನೂ ಸ್ವಲ್ಪ ಪ್ರಗತಿಯಾಗುವ ಅವಶ್ಯಕತೆ ಇದೆ. ಜನಗಳಲ್ಲಿ ಇನ್ನೂ ಸಾಕಾದಷ್ಟು ಪ್ರಚಾರ ಮಾಡುತ್ತಿಲ್ಲ. ಅಲ್ಲದೆ ಹಳ್ಳಿಗಳಲ್ಲಿ ಫಾರಂ ಮೆನ್ಯೂರು ಹಾಗೂ ತಿಪ್ಪೆ ಕಸಗಳಿಂದ ಮಾಡುವ ಗೊಬ್ಬರ ಮತ್ತು ಗ್ರೀನ್ ಮೆನ್ಯೂರ್ ಇವುಗಳನ್ನು ಮಾಡಲು ಸಾಕಾದಷ್ಟು ವ್ಯವಸ್ಥೆ ಮಾಡಿಲ್ಲ. 1952ನೇ ಇಸವಿಯಲ್ಲಿ ಹಳ್ಳಿಗಳಲ್ಲಿ ಯಾವರೀತಿ ಇತ್ತೊ ಅದೇ ರೀತಿಯಲ್ಲಿ ಈಗಲೂ ಇದೆ ಮತ್ತು ಹತ್ತು ಗೊಬ್ಬರದ ಗುಂಡಿಗಳೂ ಹೆಚ್ಚಾಗಲು ತಕ್ಕ ಕ್ರಮಗಳಾಗಲಿಲ್ಲ. ಇವತ್ತೂ ಹಳ್ಳಿಗಳಲ್ಲಿ ಜನರು ಸುಲಭವಾಗಿ ಫರ್ಟಿಲೈಸರುಗಳನ್ನು ಉಪಯೋಗಿಸುವ ಅಭ್ಯಾಸ ಮಾಡಿಕೊಂಡಿದ್ದಾರೆ. ಕಾಲ ಕಾಲಕ್ಕೆ ಫರ್ಟಿಲೈಸರುಗಳ ಸಹಾಯವಾಗದೇ ಹೋದರೆ ಭೂಮಿಯಿಂದ ಬರುವ ಫಲವೂ ಕಡಿಮೆಯಾಗುತ್ತದೆ. ಆದುದರಿಂದ ಎಲ್ಲರೂ ಇವೊತ್ತು ಫ್ಯಾಕ್ಟರಿಗಳಿಂದ ಬರುವ ಫರ್ಟಿಲೈಸರುಗಳಿಗೇ ಕಾಯುತ್ತಿದ್ದಾರೆ. ಆದುದರಿಂದ ಹೆಚ್ಚು ಫರ್ಟಿಲೈಸರುಗಳನ್ನು ಉತ್ಪತ್ತಿ ಮಾಡಲು ಕಾರ್ಖಾನೆಗಳನ್ನು ತೆರೆಯಲು ಪ್ರಾರಂಭ ಮಾಡಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಬೇರೆ ಕಾರ್ಯಕ್ರಮಗಳನ್ನು ಮಾಡಲು ಸ್ವಲ್ಪಮಟ್ಟಿಗೆ ತಡಮಾಡಿದರೂ ವ್ಯವಸಾಯ ಮಾಡುವ ರೈತರಿಗೆ ಬೇಕಾಗುವ ಸೀಮೆಗೊಬ್ಬರಗಳನ್ನು ಸಕಾಲದಲ್ಲಿ ಒದಗಿಸಿ ಕೊಟ್ಟರೆ ಉತ್ತಮವಾದ ಬೆಳೆಯನ್ನು ಬೆಳೆದು ಜಾಸ್ತಿಮಾಡಲು ಸಹಾಯವಾಗುತ್ತದೆ. ಎಲ್ಲ ಸೌಲಭ್ಯಗಳನ್ನೂ ರೈತರಿಗೆ ಕೊಟ್ಟೇ ಕೊಡಬೇಕು. ಅಲ್ಲದೆ ರೈತ ಬೆಳೆಯುವ ಮಾಲಿಗೆ ಸೂಕ್ತವಾದ ಬೆಲೆಗಳನ್ನು ಕೊಡಬೇಕು. ಹತ್ತುವರ್ಷಗಳ ಹಿಂದೆ ಇದ್ದ ರೇಟುಗಳನ್ನು ಬದಲಾಯಿಸಿ ರೈತಬೆಳೆಯುವ ಮಾಲಿಗೆ ಇವೊತ್ತು ಸರಿಯಾಗಿ ಲೆಕ್ಕಾಚಾರ ಮಾಡಿಕೊಟ್ಟರೆ ಉತ್ಪತ್ತಿಯನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆ: ಮತ್ತು ಆಹಾರದ ಕೊರತೆ ನೀಗಲು ಸಾಧ್ಯವಾಗುತ್ತದೆ. ಅಲ್ಲದೆ, ಈಗಿರುವ ಉತ್ಪತ್ತಿಯಲ್ಲಿ ಶೇಕಡ 75ರಷ್ಟುಭಾಗ ಹೆಚ್ಚುಮಾಡಲು ಎಲ್ಲ ಸೌಲಭ್ಯಗಳೂ ರೈತಾಪಿ ಜನಕ್ಕೆ ದೊರಕಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಸೂಳ್ಯ).—ಮಾನ್ಯ ಅಧ್ಯಕ್ಷರೇ ನಮ್ಮ ಮುಂದೆ ಇಟ್ಟಿರುವ ಡಿಮ್ಯಾಂಡುಗಳನ್ನು ಸ್ವಾಗತಿಸುತ್ತಾ ಒಂದೆರಡು ವಿಚಾರಗಳನ್ನು ಹೇಳುತ್ತೇನೆ.

ಇಲ್ಲಿ ಇಬ್ಬರು ಮಾನ್ಯ ಸದಸ್ಯರು ಫಿಷರೀಸ್ ಬಗ್ಗೆ ಪಶ್ಚಿಮಕರಾವಳಿಯಲ್ಲೇ ಏಕೆ ಹೆಚ್ಚು ವೆಚ್ಚ ಮಾಡುತ್ತಿದ್ದಾರೆ ಒಳನಾಡಿಗೆ ಏಕೆ ಅಷ್ಟು ಮಾಡುತ್ತಿಲ್ಲ ಎಂದು ಕೇಳಿದರು. ಖರ್ಚುಗಳ ಅಂದಾಜು ಮಾಡುವಾಗಲೂ ಕೂಡ ಸೌತ್ ಕೆನರಾ ಜಿಲ್ಲೆಗೇ ಹೆಚ್ಚು ಖರ್ಚಾಗುತ್ತಿದೆ ಎಂದು ಹೇಳಿದರು. ನಮ್ಮ ಕರಾವಳಿ ಎರಡು ಜಿಲ್ಲೆಗಳಲ್ಲೇ ಸುಮಾರು 200 ಮೈಲಿಗಳಷ್ಟು ಕರಾವಳಿ ಪ್ರದೇಶ ಇದೆ. ಇಲ್ಲಿ ಮೀನುಗಾರಿಕೆಗಾಗಿ ಹೆಚ್ಚು ಖರ್ಚು ಮಾಡಿ ಹೆಚ್ಚು ಶ್ರಮ ಪಡಬೇಕಾಗುತ್ತದೆ. 200 ಮೈಲಿ ಕರಾವಳಿ ಪ್ರದೇಶ ಇರುವ ಕರಾವಳಿಯಿಂದ 30 ಮೈಲಿ ದೂರದವರೆಗೆ ಮೀನು ಹಿಡಿಯುವ ಪ್ರದೇಶ ಇದೆ. ಸುಮಾರು 600 ಚದುರ ಮೈಲಿಗಳ ಪ್ರದೇಶದಲ್ಲಿ ಮೀನು ಹಿಡಿಯುತ್ತಿದ್ದಾರೆ. ಇದರಲ್ಲಿ ನಾಲ್ಕು ಚದುರ ಮೈಲಿಗಳಿಗೆ ಒಂದುದೋಣಿ ಎಂದು ಅರಿಸಿಕೊಂಡರೆ ಸುಮಾರು 1,500 ದೋಣಿಗಳು ಬೇಕಾಗುತ್ತವೆ. ಇವೆಲ್ಲ ಯಾಂತ್ರಿಕವಾದ ದೋಣಿಗಳು. ಈಗ ಸುಮಾರು ನಮ್ಮಲ್ಲಿ 275 ದೋಣಿಗಳು ಇವೆ, ಇನ್ನೂ 1,200 ದೋಣಿಗಳನ್ನು ಇಲ್ಲಿ ಮಾಡಿಕೊಂಡರೆ ಮೀನಿನ ಉತ್ಪಾದನೆಯೂ ಕೂಡ ಜಾಸ್ತಿಯಾಗುತ್ತದೆ. ಇಡೀ ಕರ್ಣಾಟಕದಲ್ಲಿ ನಮ್ಮ ಭಾಗವೇ ಅತಿಹೆಚ್ಚು ಮೀನು ಉತ್ಪಾದನೆ ಮಾಡುವ ಸ್ಥಳ. ಇಲ್ಲಿ ಮೀನನ್ನುಆಹಾರವಾಗಿ ಉಪಯೋಗಿಸುತ್ತಿದ್ದಾರೆ. ಇಲ್ಲಿ ಈಗ ವರ್ಷಕ್ಕೆ 80 ಟನ್ನುಗಳಷ್ಟು ಮೀನನ್ನು ಹಿಡಿಯುವ ಅಂದಾಜು ಇದೆ. ಒಂದು ದೋಣಿಯಿಂದ ವರ್ಷಕ್ಕೆ 80 ಟನ್ನು ಗಳಷ್ಟು ಎಂದು ಉತ್ಪತ್ತಿ ಯಾದರೆ ಸುಮಾರು 600 ದೋಣಿಗಳಿಂದ 48 ಸಾವಿರ ಟನ್‌ಗಳಷ್ಟು ಮೀನನ್ನು ಉತ್ಪತ್ತಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇಂತಹ ಒಂದೊಂದು ದೋಣಿಮಾಡಲು ಸುಮಾರು 35 ರಿಂದ 45 ಸಾವಿರ ರೂಪಾಯಿಗಳಷ್ಟು

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಬೇಕಾಗುತ್ತದೆ. ಇದಕ್ಕಾಗಿ ಕೇಂದ್ರ ಸರಕಾರದವರು ಸಹಾಯ ಕೊಡುತ್ತಿದ್ದಾರೆ. ರಾಜ್ಯ ಸರಕಾರ ಹೆಚ್ಚಾಗಿ ಏನೂ ಕೊಡುತ್ತಿಲ್ಲ. ಇದರಿಂದ ನಮ್ಮ ರಾಜ್ಯಕ್ಕೆ ಅಷ್ಟು ಭಾರವೂ ಬೀಳುವುದಿಲ್ಲ. ಆದರೆ ಒಳನಾಡಿನಲ್ಲಿ ಹೆಚ್ಚು ಮೀನುಗಳನ್ನು ಹಿಡಿಯಲು ಸಮುದ್ರದಷ್ಟು ಅವಕಾಶಗಳಿಲ್ಲ. ಪಶ್ಚಿಮ ಕರಾವಳಿಯಲ್ಲಿ ಹಿಡಿಯುವ ಮೀನುಗಳನ್ನು ಸ್ಟೋರೇಜು ಮಾಡಲು ಐಸ್ ಸ್ಟೋರೇಜು ಗಳನ್ನು ಹೆಚ್ಚು ಹೆಚ್ಚಾಗಿ ಮಾಡಬೇಕು. ಈಗ ಮಂಗಳೂರು ಹಾಗೂ ಕಾರವಾರದಲ್ಲಿ ಮಾಡುತ್ತಿರುವುದು ಸಾಲದು. ಒಳನಾಡಿನಲ್ಲಿ ಎಲ್ಲೆಲ್ಲಿ ಇದನ್ನು ಸ್ಟಾಕು ಮಾಡಲು ಅನುಕೂಲ ಇದೆಯೋ ಅಲ್ಲಿ ಮಾಡಬಹುದು ಮತ್ತು ಮೈಸೂರು ರಾಜ್ಯದ ಜಿಲ್ಲೆಗಳಲ್ಲಿರುವ ಹೆಡ್ ಕ್ವಾರ್ಟರುಗಳಲ್ಲಿ ಸ್ಟೋರೇಜು ಮಾಡಲು ಮೀನುಗಳನ್ನು ಸಂಗ್ರಹಿಸಬೇಕು ಮತ್ತು ಜನಗಳು ಇದನ್ನು ಹೆಚ್ಚಾಗಿ ಉಪಯೋಗಿಸಲು ಅವಕಾಶ ಕೊಡಬೇಕು. ಅಲ್ಲದೆ, ಕಡಲಲ್ಲಿ ಒಂದೊಂದು ಸಲ ಮೀನುಗಳು ಬಹಳ ದೊಡ್ಡ ಪ್ರಮಾಣದಲ್ಲಿ ಸಿಗುತ್ತದೆ. ಇದು ಲಕ್ಷಾಂತರ ರೂಪಾಯಿಗಳಷ್ಟು ಬೆಲೆಯನ್ನು ತರುತ್ತದೆ. ಇದನ್ನೆಲ್ಲಾ ಸರಿಯಾಗಿ ಹಿಡಿದು ಶೀಘ್ರವಾಗಿ ಸಾಗಿಸಲು ತೀವ್ರವಾದ ಪ್ರಯತ್ನ ಮಾಡಬೇಕು ಮತ್ತು ಜನಕ್ಕೆ ಹೆಚ್ಚು ಉಪಯೋಗ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು.

ಅರಣ್ಯದ ವಿಚಾರವಾಗಿ ಒಂದು ವಿಚಾರ ಹೇಳಬೇಕಾಗಿದೆ. ಈಗಾಗಲೇ ಎಲ್ಲರಿಗೂ ತಿಳಿದಿರುವಂತೆ ನಮ್ಮ ಸೌತ್ ಕೆನರಾದಲ್ಲಿ ಹೆಚ್ಚು ಫಾರೆಸ್ಟು ಲ್ಯಾಂಡು ಇದೆ. ಈ ಭಾಗದಲ್ಲಿ ಇನ್ನು ಅರಣ್ಯ ಬೆಳೆಸುವುದು ಬೇಡ ಎಂದು ಹೇಳುತ್ತಿಲ್ಲ. ಆದರೆ ಈ ಕಾಡುಗಳಲ್ಲಿ ಕೆಲವು ಜನ ಗುಡ್ಡ ಬೆಟ್ಟಗಳನ್ನ ಕಡಿದು ಸ್ವಲ್ಪ ಭೂಮಿಯನ್ನು ಗದ್ದೆಗಳಾಗಿ ಮಾಡಿಕೊಂಡು ಅರಣ್ಯಕ್ಕೆ ಹೊಂದಿಕೊಂಡಂತೇ ಇದ್ದಾರೆ. ಅವರು ಅಲ್ಲೇ ವಾಸಮಾಡಲು ಅವಕಾಶ ಕೊಡುವುದರ ಕಡೆಗೆ ಸರಕಾರ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ರೆವೆನ್ಯೂ ಲ್ಯಾಂಡನ್ನು ಫಾರಸ್ಟು ಲ್ಯಾಂಡು ಆಗಿ ಮಾರ್ಪಡಿಸುತ್ತಿದ್ದಾರೆ. ಇದು ಬಂಜರಾಗಿರುವ ಜಮೀನು. ಇವನ್ನು ಅನುಸರಿಸಿಕೊಂಡು ಕೆಲವರು ನೀರಿನ ಆಸರೆಯಿಂದ ಕೃಷಿಮಾಡುತ್ತಿದಾರೆ. ಅದನ್ನು ಕೃಷಿಗಾಗಿ ಕೊಡುವುದು ಅಗತ್ಯ. ಇದರಿಂದ ಆಹಾರದವಸಗಳನ್ನು ಬೆಳಸಿಕೊಂಡು ಬರುತ್ತಿದ್ದಾರೆ. ಇಲ್ಲಿನ ಜನ ನಾಲ್ಕಾರು ವರ್ಷ ಶ್ರಮಪಟ್ಟು ಸಾಗುವಳಿ ಮಾಡಬೇಕೆಂದು ಮಾಡಿದರೂ ಹೆಚ್ಚು ಉತ್ಪತ್ತಿ ಒಂದು ವರ್ಷ ಸಿಗುತ್ತೆ, ಒಂದು ವರ್ಷ ಸಿಗುವುದಿಲ್ಲ. ಯಾರು ಇಲ್ಲಿ ಸಾಗುವಳಿ ಮಾಡುತ್ತಿದ್ದಾರೋ ಅಂತಹವರಿಗೆ ಈ ಭೂಮಿಯನ್ನು ಗೇಣಿಗೆ ಕೊಡಬೇಕು ಮತ್ತು ಆಹಾರದ ದವಸಗಳನ್ನು ಹೆಚ್ಚು ಬೆಳೆಯಲು ಅವಕಾಶ ಮಾಡಿಸಿಕೊಡಬೇಕು. ಇನ್ನೊಂದು ವಿಚಾರ ಇಲ್ಲಿ ಹೇಳಬೇಕು. ಇಲ್ಲಿ ಯಾರು ವ್ಯವಸಾಯ ಮಾಡುತ್ತಾರೋ ಅವರಿಗೆ ಗೇಣಿಗೆ ಕೊಡಬೇಕು. ಆದರೆ ಈಗ ಇಲ್ಲಿರುವ ರೈತರು ಕೇಳುತ್ತಿದ್ದರೂ ಅವರಿಗೆ ಕೊಡುತ್ತಿಲ್ಲ. ದರಖಾಸ್ತಿನಲ್ಲಿ ಜಮೀನು ತೆಗೆದುಕೊಂಡು 18 ವರ್ಷಗಳಾಗಿದ್ದರೂ ಅವರಿಗೆ ಗೇಣಿಗೆ ಸ್ಥಳ ಕೊಟ್ಟಿಲ್ಲ. ಇಲ್ಲದ ತೊಂದರೆಗಳಿಗೆ ಈ ಬಡ ಜನ ಸಿಕ್ಕಿ ತೊಂದರೆಪಡುತ್ತಿದ್ದಾರೆ. ಇವರ ಹೆಸರಿಗೆ ಪಟ್ಟೆಯನ್ನು ಮಾಡಿಸಿಕೊಡುವ ವ್ಯವಸ್ಥೆ ಮಾಡಬೇಕು. ಮತ್ತು ಇದರಲ್ಲಿ ಕೃಷಿ ಮಾಡುವರೆ ಬೇಕಾದ ಸವಲತ್ತುಗಳನ್ನೂ ಬೇಗನೆ ಒದಗಿಸಿಕೊಡಬೇಕು. ಯಾರು ಇಲ್ಲಿ ಬಹುದಿನಗಳಿಂದಲೂ ಬೇಸಾಯ ಮಾಡುತ್ತಿದ್ದಾರೋ ಅವರಿಗೆ ಪಟ್ಟೆ ಕೊಡಿಸಿಕೊಡಬೇಕು ಎಂದು ನನ್ನ ಸಲಹೆ. ಅಲ್ಲದೆ ನಮ್ಮ ಕಾಡುಗಳಲ್ಲಿ ಮಧ್ಯೆ ಇರುವ ಕೆಲವು ಸಣ್ಣ ಜಾಗಗಳಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಅವಕಾಶವಿದೆ. ಎಂದರೆ ಇಲ್ಲಿ ಅಡಕೆ ತೋಟಗಳನ್ನು ಮಾಡಿದರೆ ಆ ಮರಗಳು ಬಹಳ ಚೆನ್ನಾಗಿ ಬೆಳೆಯಲು ಅವಕಾಶ ಸಿಗುತ್ತದೆ ಮತ್ತು ಇಂತಹ ಸಣ್ಣ ಕಾಡುಗಳಲ್ಲಿ ಅಡಕೆ ವ್ಯವಸಾಯಕ್ಕೆ ಅವಕಾಶಮಾಡಿಕೊಡುವ ಸಲಹೆಯನ್ನು ಸರಕಾರ ಪರಿಶೀಲನೆ ಮಾಡಬೇಕು ಮತ್ತು ಇದರಿಂದ ಕಾಡುಗಳು ನಾಶವಾಗುವುದರ ಬದಲು ಅಡಿಕೆ ಕಾಡೂ ಬೆಳೆಯುತ್ತದೆ. ಅಡಕೆ ತೋಟಗಳನ್ನು ಮಾಡಲು ಅವಕಾಶ ಕೊಟ್ಟಂತೆಯೂ ಆಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲಿ ಸಣ್ಣ ಸಣ್ಣ ಕಣಿವೆ ಜಾಗಗಳು ಎಂದು ಇರುತ್ತವೆ. ಇಲ್ಲಿ ಅಡಿಕೆ ತೋಟವನ್ನು ಬೆಳೆಸಬಹುದು. ಇದಕ್ಕಾಗಿ ಅರಣ್ಯವನ್ನೇ ಸಂಪೂರ್ಣವಾಗಿ ನಾಶಮಾಡಬೇಕಾಗಿಲ್ಲ. ಅರಣ್ಯಗಳು ನಾಶವಾಗದ ರೀತಿಯಲ್ಲಿ ಅಡಕೆ ತೋಟಗಳು ಆಗುವಂತೆ ಪ್ರಯತ್ನ ಮಾಡಬೇಕು.

5-00 P.M.

ಕೃಷಿ ವಿಚಾರದಲ್ಲಿ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆ ಅತ್ಯಧಿಕ ಬತ್ತ ಬೆಳೆಯುವ ಪ್ರದೇಶ. ಸಾವಿರಾರು ರೈತರು ವ್ಯವಸಾಯ ಮಾಡುತ್ತಾ ಇದ್ದಾರೆ. ಇವತ್ತಿನ ದಿವಸ ಅವರಲ್ಲಿ ಪವರ್ ಟಿಲ್ಲರ್ಸ್ ಬೇಕೆಂಬ ಒಂದು ಬೇಡಿಕೆ ಇದೆ. ಆದ್ದರಿಂದ ಅದಕ್ಕೆ ಹೆಚ್ಚು ಗಮನ ಕೊಟ್ಟು ಅವುಗಳನ್ನು ಒದಗಿಸಬೇಕೆಂದು ಹೇಳುತ್ತೇನೆ.

ರೈತ ಹಿಂದಿನ ಪದ್ಧತಿಯಲ್ಲೇ ಗೊಬ್ಬರವನ್ನು ಹಾಕುತ್ತಾ ಇದ್ದಾನೆ. ಯಾವ ಬೆಳೆಗೆ ಯಾವ ಗೊಬ್ಬರ ಎಷ್ಟು ಹಾಕಬೇಕೆಂದು ಹೇಳಬೇಕಾದರೆ ಮಣ್ಣಿನ ಪರೀಕ್ಷೆ ಆಗಲೇ ಬೇಕು. ಅದಕ್ಕೆ ಸಾಯಿಲ್ ಟೆಸ್ಟಿಂಗ್ ಲ್ಯಾಬೋರೇಟರಿ ಅತ್ಯಗತ್ಯವಾಗಿದೆ. ಇದನ್ನು ನಮ್ಮ ಜಿಲ್ಲೆಗೆ ಕೂಡಲೇ ಕೊಡಬೇಕೆಂದು ಒತ್ತಾಯ ಮಾಡುತ್ತಾ ಇದ್ದರೂ ಕೂಡ ಇಲ್ಲಿಯವರೆಗೂ ಕೊಟ್ಟಿಲ್ಲ. ಮಣಿಪಾಲ್‌ದಲ್ಲಿ ಖಾಸಗಿಯಿಂದ ಮಾಡುತ್ತಾ ಇದ್ದಾರೆ. ಸರ್ಕಾರದವತಿಯಿಂದ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿಯನ್ನು ಅತ್ಯಗತ್ಯವಾಗಿ ಕೂಡಲೇ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ. ಆ ರೀತಿ ಮಾಡಿದ್ದೇ ಆದರೆ ಹೆಚ್ಚು ಬೆಳೆ ಬೆಳೆಯಲಿಕ್ಕೆ ಅನುಕೂಲವಾಗುತ್ತದೆ.

ಅರಣ್ಯದ ಭೂಮಿಯಲ್ಲಿ ಆಯುರ್ವೇದಕ್ಕೆ ಸಂಬಂಧಪಟ್ಟ ಗಿಡಮೂಲಿಕೆಗಳನ್ನು ಬೆಳೆಯಲು ತಕ್ಕ ತೋಟಗಳನ್ನು ಮಾಡಬಹುದು ಎಂದು ಕಾಣುತ್ತದೆ. ಏಕೆಂದರೆ ಹೆಚ್ಚು ಬೆಳೆಯೂ ಆಗುತ್ತದೆ ಮತ್ತು ಲಕ್ಷಾಂತರ ರೂಪಾಯಿ ಉತ್ಪನ್ನವೂ ಬರಬಹುದು, ಜನರಿಗೂ ಸಹಾಯವಾಗಬಹುದು.

ಅಜ್ಜಾವರ ಎಂಬ ಸ್ಥಳದಲ್ಲಿ ತೆಂಗಿನ ಪರಿಶೋಧನಾ ಕೇಂದ್ರ ಮತ್ತು ಹಾರ್ಟಿಕಲ್ಚರಲ್ ಫಾರಂ ಮಾಡುತ್ತೇವೆ ಎಂದು ಹೇಳಿ 2-3 ವರ್ಷದ ಕೆಳಗೆ ಮಾನ್ಯ ಮಂತ್ರಿಗಳು ಮತ್ತು ಡೈರೆಕ್ಟರವರು ಸ್ಥಳ ಪರಿಶೋಧನೆ ಮಾಡಿದರು. ಅಂತಹ ಕಡೆ ಕ್ಯಾಷ್ಯೂನೆಟ್ ಹಾಕುತ್ತಿರುವ ಹಾಗೆ ಕಾಣುತ್ತದೆ. ಅದನ್ನು ನೀರಾವರಿ ಇರತಕ್ಕ ಪ್ರದೇಶದಲ್ಲಿ ಹಾಕಿದರೆ ಹೆಚ್ಚು ಲಾಭದಾಯಕ ವಲ್ಲ. ಆದ್ದರಿಂದ ಹೆಚ್ಚು ಆಹಾರ ಬೆಳೆಯುವ ಅಥವಾ ತೆಂಗಿನ ತೋಟ ಇತ್ಯಾದಿಗಳನ್ನು ಅಂತಹ ಕಡೆ ಮಾಡಬೇಕು ಎಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಆರ್ ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ; ಈ ದಿವಸ ವ್ಯವಸಾಯಕ್ಕೆ ಸಂಬಂಧಪಟ್ಟ ಡಿಮ್ಯಾಂಡ್‌ನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಎರಡು ಮಾತುಗಳನ್ನು ಆಡಲು ಬಯಸುತ್ತೇನೆ. ಇದುವರೆಗೂ ನಮ್ಮ ಸ್ನೇಹಿತರು ಅನೇಕ ವಿಷಯಗಳನ್ನು ಹೇಳಿದ್ದಾರೆ, ನಾನಾದರೂ ಒಂದು ಅತಿ ಮುಖ್ಯವಾದ ವಿಷಯವನ್ನು ತಮ್ಮ ಮುಂದೆ ಇಡುತ್ತೇನೆ. ನಮ್ಮ ಇಂಡಿಯಾ ದೇಶದಲ್ಲಿ ನೋಡಿದರೆ ಈ ದೇಶ ಪ್ರಪಂಚದ ಇತರ ಎಲ್ಲಾ ರಾಷ್ಟ್ರಗಳಿಗಿಂತಲೂ ವ್ಯವಸಾಯದಲ್ಲಿ ಬಹಳ ಕನಿಷ್ಠ ಸ್ಥಿತಿಯಲ್ಲಿದೆ ಎಂದು ನಾನು ಯತ್ನವಿಲ್ಲದೆ ಹೇಳಬೇಕಾಗಿದೆ. ಪ್ರಪಂಚದ ಇತರರ ರಾಷ್ಟ್ರಗಳವರು ಯಾವ ಮಟ್ಟದಲ್ಲಿ ವ್ಯವಸಾಯವನ್ನು ತೆಗೆದುಕೊಂಡು ಹೋಗುತ್ತಾ ಇದ್ದರೆ ಎಂಬುದನ್ನು ನೋಡಿದರೆ ತಾವು ಕತ್ತು ಬಗ್ಗಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಹೆಚ್ಚು ಗಮನ ಕೊಡುತ್ತಾ ಇಲ್ಲ. ಈ ವ್ಯವಸಾಯವನ್ನು ನಾವು ಹೇಳುವಷ್ಟು ಸುಲಭವಾಗಿ ಮುಂದುವರಿಸುವುದಕ್ಕೆ ಸಾಧ್ಯವಿಲ್ಲ. ಪ್ರಪಂಚ ಜನಸಂಖ್ಯೆ ಬಹಳ ವೇಗದಲ್ಲಿ ಬೆಳೆಯುತ್ತಾ ಇದೆ. ಅದಕ್ಕೆ ತಕ್ಕಂತ ಆಹಾರ ಸಾಮಾಗ್ರಿಗಳನ್ನು ಒದಗಿಸುವುದು ಸುಲಭವಲ್ಲ. ರಷ್ಯಾ ದೇಶದಲ್ಲಿ 1919ರಿಂದ ಕಷ್ಟಪಟ್ಟರೂ ಕೂಡ ಆಹಾರವನ್ನು ಸಮತೂಗಿಸುವುದಕ್ಕೆ ಅವರಿಂದ ಸಾಧ್ಯವಾಗುತ್ತಾ ಇಲ್ಲ. ಫ್ರೀರೆವಲ್ಯೂಷನ್ ಕಾಲದಿಂದ ಪ್ರಾರಂಭ ಮಾಡಿ ಇಂಡಸ್ಟ್ರೀನಲ್ಲಿ ಅವರು 52ರಷ್ಟು ಮುಂದುವರಿದರು. ವ್ಯವಸಾಯದಲ್ಲಿ 1926ನೇ ಇಸವಿಯಲ್ಲಿ ಎಷ್ಟಿತ್ತು ಎಂಬುದನ್ನು ಹೋಲಿಸಿ ನೋಡಿದರೆ ಈಗ 130 ಪರ್ಸೆಂಟ್ ಮಾತ್ರ ಮುಂದುವರಿದಿದ್ದಾರೆ ಎಂದು ಹೇಳಬಹುದು. ಕೋಟ್ಯಾನುಗಟ್ಟಲೆ ರೂಬಲ್‌ಗಳನ್ನು ಖರ್ಚು ಮಾಡಿ ಇಡೀ ದೇಶವೇ ದುಡಿದು ಕಷ್ಟಪಟ್ಟರೂ ಕೂಡ ಹೆಚ್ಚು ಪ್ರಗತಿಯನ್ನು ಸಾಧನೆ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಅಂಕಿಅಂಶಗಳಿಂದ ದೇಶವನ್ನು ಮರುಳುಗೊಳಿಸುವುದಕ್ಕೆ ಸಾಧ್ಯವಿಲ್ಲ. ತಾವು ಈಗ ಹೋಗುತ್ತಿರುವ ವೇಗದಲ್ಲಿ ಹೋದರೆ ಖಂಡಿತವಾಗಿಯೂ ವ್ಯವಸಾಯವನ್ನು ಮುಂದುವರಿಸುವುದಕ್ಕೆ ಸಾಧ್ಯವಿಲ್ಲ. ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕ ರೈತರು ಕನಿಷ್ಠಮಟ್ಟದಲ್ಲಿದ್ದಾರೆ. ರೂರಲ್ ಪಾಪ್ಯುಲೇಷನ್ ಮೊದಲಿನಿಂದಲೂ ಕೂಡ ಸುಮಾರು 80 ಪರ್ಸೆಂಟ್ ಇದೆ. ರಷ್ಯಾದಲ್ಲಿ ಅರ್ಬನ್ ಪಾಪ್ಯೂಲೇಷನ್ 18 ಪರ್ಸೆಂಟ್ ಇದ್ದದ್ದು ಈಗ 47 ಪರ್ಸೆಂಟ್ ಆಗಿದೆ. ಇನ್ನು ಉಳಿದ 53 ಪರ್ಸೆಂಟ್ ರೂರಲ್ ಪಾಪ್ಯೂಲೇಷನ್ ಇದೆ. ಅಲ್ಲಿ ರೂರಲ್ ಪಾಪ್ಯೂಲೇಷನನ್ನು ಯಾವ ರೀತಿ ಕಡಿಮೆ ಮಾಡಿದರು ಎಂದರೆ ಯಂತ್ರಗಳ ಉಪಯೋಗವನ್ನು ವ್ಯವಸಾಯದಲ್ಲಿ ಹೆಚ್ಚು ಮಾಡಿ ಅಲ್ಲಿನ ಜನಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ. ಹಾಗೆ ಮಾಡಿ ಆ ಜನರ ಜೀವನ ಮಟ್ಟ ಜಾಸ್ತಿ ಮಾಡಿ, ಅವರಿಗೆ ಸುಖ ಶಾಂತಿಯನ್ನು ದೊರಕಿಸಿಕೊಟ್ಟಿದ್ದಾರೆ. ಹೀಗೆ ಅವರ ದೇಶ ಮುಂದುವರಿಯುತ್ತಾ ಇದೆ. ಜನರು ಸುಖವಾಗಿದ್ದಾರೆ. ಬೇಕಾದಷ್ಟು ಆಹಾರವನ್ನು ಸಮೃದ್ಧಿಯಾಗಿ ಬೆಳೆಯುತ್ತಾ ಇದ್ದಾರೆ. ನಮ್ಮಲ್ಲಿ ಇವತ್ತು ಗ್ರಾಮಾಂತರ ಪ್ರದೇಶಗಳಿಂದ ಹೋದರೆ uneconomic holding ಉಳ್ಳವರು ಎರಡು ಮೂರು ಅಥವಾ ನಾಲ್ಕು ಐದು ಎಕರೆ ಒಳಗೆ ಇರತಕ್ಕ ಜನರು ಬಹಳ ಜನ ಇದ್ದಾರೆ. ಪ್ರಪಂಚದ ಇತಿಹಾಸವನ್ನು ನೋಡಿದರೆ ಸ್ಮಾಲ್ ಎಕ್ಸ್‌ಟೆಂಟ್ (Extent) ಇರತಕ್ಕ ಜನರು ಎಲ್ಲೂ ಕೂಡ ಮುಂದೆ ಬಂದಿಲ್ಲ. ಉದಾಹರಣೆಗೆ ಹೇಳಬೇಕಾದರೆ ಅಮೆರಿಕಾ ದೇಶದಲ್ಲಿ 1950 ರಿಂದ 60ರ ವರೆಗೂ ಒಂದು ಮಿಲಿಯನ್ 463 ಸಾವಿರ ಸ್ಮಾಲ್‌ಫಾರಂ

(ಎಚ್. ಆರ್. ಕೇಶವಮೂರ್ತಿ)

ಗಳುಇವೆ average of one million small farmers in West Germany, 80 to 90 thousand in France and 1,20,000 in Italy. ಅನ್‌ಎಕನಾಮಿಕಲ್ ಹೋಲ್ಡಿಂಗ್ಸ್ ಇಟ್ಟುಕೊಂಡು ಯಾವ ದೇಶದ ಜನರೂ ಮುಂದುವರಿದಿಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಬಹಳ ದೀರ್ಘವಾಗಿ ಆಲೋಚನೆ ಮಾಡಿ ಎರಡು ತರಹ ಮಾಡಬೇಕು. ವ್ಯವಸಾಯವನ್ನು ಸೋಷಿಯಲೈಯಸ್ ಮಾಡಬೇಕು ಇಲ್ಲದೇ ಹೋದರೆ ಮ್ಯಾಕನೈಸ್ ಮಾಡಬೇಕು. ಇವೆರಡೂ ಇಲ್ಲದೇ ಹೋದರೆ ಅಮೇರಿಕಾದೇಶದ ಹಾಗೆ ಕ್ಯಾಪಿಟಲೈಸ್ ಮಾಡಬೇಕು. ಜನರನ್ನು ಸೇರಿಸಿಕೊಂಡು ಅವರಿಗೆ ಮೆಷಿನರಿ, ಕ್ಯಾಪಿಟಲ್ ಎಲ್ಲಾ ಕೊಟ್ಟು ವ್ಯವಸಾಯ ಮಾಡಿದರೆ ಹೆಚ್ಚು ಲಾಭ ಸಂಪತ್ತು ಬರುತ್ತದೆಯೇ ಹೊರತು ಈಗಿರತಕ್ಕ ಪದ್ಧತಿಯನ್ನೇ ಮುಂದುವರಿಸುತ್ತಾ ಹೋದರೆ ಸುಮ್ಮನೆ ಈ ಅಸೆಂಬ್ಲಿಯಲ್ಲಿ ಅಂಕಿಅಂಶಗಳನ್ನು ಹೇಳಿಕೊಂಡು ಹೋಗಿ ಅದನ್ನ ಕೇಳುವುದಕ್ಕೆ ಒಂದು ರೀತಿಯ ಕರ್ಣಾನಂದವಾಗುತ್ತದೆಯೇ ಹೊರತು ಖಂಡಿತವಾಗಿಯೂ ವ್ಯವಸಾಯ ಮುಂದುವರಿಯುವುದಿಲ್ಲ. ಇದನ್ನು ಗಮನಕ್ಕೆ ತೆಗೆದುಕೊಂಡು ಸರ್ಕಾರದವರು ವ್ಯವಸಾಯವನ್ನು ಕ್ಯಾಪಿಟೆಲೈಸ್ ಮಾಡಿ ಅಥವಾ ಸೊಷಿಯಲೈಸ್ ಮಾಡಿ ಇಲ್ಲದೆ ಹೋದರೆ ಮ್ಯಾಕೆನೈಸ್ ಮಾಡಿ ವ್ಯವಸಾಯೋತ್ಪನ್ನವನ್ನು ಹೆಚ್ಚು ಮಾಡಬೇಕೆಂದು ನಾನು ಸಲಹೆ ಮಾಡುತ್ತಾ ಇದ್ದೇನೆ.

ರಷ್ಯಾ ದೇಶದಲ್ಲಿ ಇವತ್ತು ವ್ಯವಸಾಯದ ಜಮೀನಗಳನ್ನೆಲ್ಲಾ ಎರಡು ಭಾಗ ಮಾಡಿದ್ದಾರೆ, ಸ್ಟೇಟ್ ಫಾರಂಸ್ ಮತ್ತು ಕಲೆಕ್ಟೀವ್ ಫಾರಂಸ್ ಅಂತ ಸಣ್ಣ ಸಣ್ಣ ಅನ್ ಎಕನಾಮಿಕಲ್ ಯುನಿಟ್‌ಗಳನ್ನೆಲ್ಲಾ ಸೇರಿಸಿ ಸಾವಿರಾರು ಸ್ಟೇಟ್ ಫಾರಂಸ್ ಮತ್ತು ಕಲೆಕ್ಟಿವ್ ಫಾರಂಸನ್ನು ಮಾಡಿದ್ದಾರೆ. ಮೊದಲು ಅನಿಮಲ್ ಪವರ್‌ನಿಂದ ವ್ಯವಸಾಯ ಮಾಡುತ್ತಾ ಇದ್ದರು, 1963ರಲ್ಲಿ ಅವರ ಹತ್ತಿರ ಒಂದೂವರೆ ಮಿಲಿಯನ್ ಟ್ರಾಕ್ಟರ್‌ಗಳನ್ನು ಇಟ್ಟುಕೊಂಡಿದ್ದರು, ಇದೇ ರೀತಿ ಅಮೆರಿಕಾದಲ್ಲಿ 90 ಪರ್ಸೆಂಟ್ ಫಾರಂಸ್ ಮ್ಯಾಕಿನೈಸ್ ಆಗಿದೆ. ಎಲ್ಲಾ ಫಾರಂಸ್‌ನಲ್ಲೂ 98 ಪರ್ಸೆಂಟ್ ಎಲೆಕ್ಟ್ರಿಸಿಟಿ ಬಂದಿದೆ. 50 ಪರ್ಸೆಂಟ್ ಟೆಲಿವಿಜನ್ ಕನೆಕ್ಷನ್ಸ್ ಇದೆ. ಈ ರೀತಿ ಇರುವುದರಿಂದ ಅವರೂ ಕೂಡ ಬೇರೆಯವರಿಗಿಂತ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಿ ಹೊರ ದೇಶಗಳಿಗೆ ಕಳುಹಿಸುತ್ತಾ ಇದ್ದಾರೆ. ಇದನ್ನು ಸರ್ಕಾರದವರು ಮನಗಾಣಬೇಕು. ನಾನು ಒಂದು ಸಲಹೆ ಮಾಡುತ್ತೇನೆ. ನಮ್ಮ ಇಂಡಿಯಾದೇಶದಲ್ಲಿ ಸ್ಯಾಂಪಲ್‌ಗಾದರೂ ನಮ್ಮ ಮೈಸೂರು ರಾಜ್ಯದಲ್ಲಿ ಒಂದು ಮ್ಯಾಕಿನೈಸ್ ಫಾರಂನ್ನು ಮಾಡಿ. ಹಿಂದೆ ಟಾಡ್ ಹಂಟರ್ ಅವರ ವರದಿಯಲ್ಲಿ ಈ ರೀತಿ ಮಾಡಿ ಆಹಾರದ ಕೊರತೆಯನ್ನು ಪೂರೈಸಿಕೊಳ್ಳಬಹುದು ಎಂದು ಹೇಳಿ ಸೂಚನೆ ಮಾಡಿದ್ದರು. ವ್ಯವಸಾಯದ ಬಾಬಿನಲ್ಲಿ ನಿಜವಾದ ಪ್ರಗತಿಯಾಗಿಲ್ಲ' ಡೈರೆಕ್ಟರು, ಜಾಯಿಂಟ್ ಡೈರೆಕ್ಟರು, ಅಗ್ರಿಕಲ್ಚರರ್ ಇನ್‌ಸ್ಪೆಕ್ಟರು ಮುಂತಾದ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆಯೇ ಹೊರತು ನಿಜವಾದ ಪ್ರಗತಿಯಾಗಬೇಕಾದರೆ ಯಾವರೀತಿ ಮುಂದುವರಿಯಬೇಕು ಎಂಬುದನ್ನು ಗಮನಿಸಿಲ್ಲ. ಸ್ಟೇಟ್ ಫಾರಂನಲ್ಲಿ ರಷ್ಯಾದಲ್ಲಿ ಯಾವರೀತಿ ಆಫೀಸರುಗಳನ್ನಿಟ್ಟಿದ್ದಾರೆಂಬುದನ್ನು ನೋಡಬೇಕು. ರಷ್ಯಾದಲ್ಲಿ 8,29,700 ಜನ ಟ್ರಾಕ್ಟರ್ ಡ್ರೈವರುಗಳು ಕಂ ಹಾರ್‌ವೆಸ್ಟರ್ಸ್, ಮೆಕ್ಯಾನಿಕಲ್ ಅಪರೇಟರ್ಸ್, 3 ಲಕ್ಷ 22 ಸಾವಿರ ಲಾರಿ ಡ್ರೈವರುಗಳು, 1 ಲಕ್ಷ 20 ಸಾವಿರ ಅಗ್ರಾನಮಿಸ್ಟ್‌ಗಳು, 200 ಜೂ ಟೆಕ್ನೀಷಿಯನ್ ಎಂಜಿನಿಯರುಗಳು ಇದ್ದಾರೆ. ಈ ಜನರು ಅಲ್ಲಿ ಕಲೆಕ್ಟಿವ್ ಫಾರಂಗಳಿಗೆ ಹೋಗಿ ಸಲಹೆಕೊಟ್ಟು ಲೇಬರ್ ಕಂಟ್ರೋಲ್‌ಮಾಡಿ ವ್ಯವಸಾಯ ಅದಷ್ಟು ಚೆನ್ನಾಗಿ ನಡೆಯುವಹಾಗೆ ನೋಡಿಕೊಳ್ಳುತ್ತಾರೆ. ಆದುದರಿಂದ ಅಲ್ಲಿ ವ್ಯವಸಾಯ ಚೆನ್ನಾಗಿ ಮುಂದುವರೆಯುತ್ತಿದೆ. ಅದೇ ನಮ್ಮಲ್ಲಿ ಆ ರೀತಿ ಏನೂ ಮಾಡಿಲ್ಲ. 22,400 ದನ, 800 ಹಂದಿ, 4,000 ಕುರಿ ಒಂದೇ ಫಾರಂನಲ್ಲಿ ಸಾಕುತ್ತಾರೆ. ಹೀಗೆ ಒಟ್ಟಿಗೆ ಸೇರಿ ವ್ಯವಸಾಯಮಾಡಿ ಹೆಚ್ಚು ಆದಾಯ ಪಡೆಯಲು ರಷ್ಯಾದಲ್ಲಿ ಅವಕಾಶವಿದೆ, ಎಲ್ಲಾ ಮೆಕನೈಜ್ ಮಾಡಿದ್ದಾರೆ. ಯಾವ ಷೀಪ್ ಫಾರಂ ಮೆಕನೈಜ್ ಮಾಡಿ 2800 ಹೆಕ್ಟಾರ್ ಭೂಮಿಯಲ್ಲಿ 30 ಸಾವಿರ ಕುರಿ ಸಾಕುತ್ತಾರೆ, ಅಲ್ಲಿ ಬಾವಿ ತೋಡುತ್ತಾರೆ, ಲಾರಿಗಳಲ್ಲಿ ಮೇವು, ನೀರು ತೆಗೆದುಕೊಂಡು ಹೋಗಿ ಕುರಿಗಳಿಗೆ ಒದಗಿಸುತ್ತಾರೆ. ಹುಲ್ಲು ಬೆಳೆಸಲು ಸ್ಪೆಷಲೈಜ್ಡ್ ಪ್ಯಾಸ್ಚರ್ ಇರುತ್ತದೆ. ಹೆಚ್ಚು ಮೇವು ಬೆಳೆಯುವಂತೆ ತಕ್ಕ ಕ್ರಮ ಕೈಕೊಳ್ಳುತ್ತಾರೆ. ಡೈರಿಗಳಲ್ಲಿ ರಾಸುಗಳನ್ನು ಚೆನ್ನಾಗಿ ಸಾಕುತ್ತಾರೆ. ಇಲ್ಲಿ ನಾವಾದರೆ ಕಟುಕರಿಗೆ ಸಾಯುವ ಸ್ಥಿತಿಯಲ್ಲಿರುವ ದನಗಳನ್ನು ಕೊಡುತ್ತೇವೆ, ಅದೇ ರಷ್ಯಾದಲ್ಲಿ ಕೆಲವು ಕಾಲ ರಾಸುಗಳನ್ನು ಸಾಕಿ ಹೆಚ್ಚು ತೂಕ ಇರುವಾಗ ಒಂದು ಸ್ಟೇಜಿನಲ್ಲಿ ಚೆನ್ನಾಗಿರುವ ದನಗಳನ್ನೇ ಕಟುಕರಿಗೆ ಕೊಡುತ್ತಾರೆ. ಸಾಯುವ ಸ್ಥಿತಿಗೆ ಬಂದಾಗ ಕೊಡುವುದು ಸರಿಯಲ್ಲ. ಕಡಿಯುವುದಕ್ಕೆ ಸರಿಯಾದ ದನಗಳನ್ನು ಕೊಡಬೇಕು. ಒಂದೊಂದು ಪೌಲ್‌ಟ್ರಿ ಫಾರಮ್ಮನ್ನೂ ಮೆಕನೈಜ್ ಮಾಡಿ ಸರಾಸರಿ 57 ಸಾವಿರ ಫೌಲ್‌ಗಳನ್ನು ಒಂದೊಂದು ಫಾರಂನಲ್ಲಿ ಸಾಕುತ್ತಾರೆ.

ಹೀಗೆ ಮಾಡಿ ಬೇಕಾದಷ್ಟು ವೊಟ್ಟೆ ಉತ್ಪತ್ತಿಮಾಡುತ್ತಾರೆ. ಇಲ್ಲೂ ಕೂಡ ಹಾಗೆ ಮಾಡಲು ಪ್ರಯತ್ನ ಮಾಡದಿದ್ದರೆ ಆ ಬಾಬು ಮುಂದುವರೆಯುವುದಿಲ್ಲ. ಇನ್ನ ಕ್ರೆಡಿಟ್ ಸರ್ವೆ ತೆಗೆದುಕೊಂಡರೆ ರಷ್ಯಾದಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಯು. ಎಸ್. ಎಸ್. ಆರ್. ಬ್ಯಾಂಕ್ ಇದೆ, ಅಲ್ಲಿ 5 ಪರ್ಸೆಂಟ್ ಬಡ್ಡಿ ಛಾರ್ಜ್‌ಮಾಡಿ ರೈತರಿಗೆ ಸಾಲಕೊಡುತ್ತಾರೆ. ಹೀಗೆ ಕಡಮೆ ಬಡ್ಡಿ ದರದಲ್ಲಿ ಬೇಕಾದಷ್ಟು ಸಾಲ ಒದಗಿಸುತ್ತಾರೆ. ರೂರಲ್ ಕ್ರೆಡಿಟ್ ಸರ್ವೆ ವರದಿ ಪ್ರಕಾರ ಇಂಡಿಯಾದೇಶಕ್ಕೆ 750 ಕೋಟಿ ರೂಪಾಯಿ ಸಾಲ ಬೇಕು. ಇದರಲ್ಲಿ ಸೇಕಡ ಆರರಷ್ಟು ಕೊಟ್ಟಿದ್ದಾರೆ. ಚೈನಾದಲ್ಲಿ 560 ಕೋಟಿ ಜಪಾನಿನಲ್ಲಿ 270 ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾರೆ. ಅದನ್ನು ನಮ್ಮ ದೇಶಕ್ಕೆ ಹೋಲಿಸಿದರೆ ಕೊಟ್ಟಿರುವುದು ಸಾಲದು.

ಈಗ ಟೌನುಗಳಲ್ಲಿ ಮತ್ತು ಸಿಟಿಗಳಲ್ಲಿ ಸ್ಯೂಯೇಜ್ ವೇಸ್ಟ್ ಆಗುತ್ತಿದೆ. ಅದನ್ನು ಹೊಲಗಳಿಗೆ ಗೊಬ್ಬರವಾಗಿ ಉಪಯೋಗಿಸಬಹುದು, ಅದನ್ನು ಕಾಂಪೋಸ್ಟ್ ಮಾಡಿ ರೈತರಿಗೆ ಸುಲಭ ದರದಲ್ಲಿ ಸಿಕ್ಕುವಹಾಗೆ ಒದಗಿಸಬೇಕು. ಲಾರಿ ಇಟ್ಟು ಅದರ ಮೂಲಕ ರೈತರ ಹೊಲಗಳಿಗೆ ಸರಬರಾಯಿ ಮಾಡಬೇಕು. ಗಾಡಿಗಳಲ್ಲಿ ಅದನ್ನು ಸಾಗಿಸಲು ಸಾಧ್ಯವಾಗುವುದಿಲ್ಲ, ಪ್ರತಿ ಜಿಲ್ಲೆಯಲ್ಲೂ ಹತ್ತಾರು ಲಾರಿಗಳನ್ನಿಟ್ಟು ಸುಲಭ ದರದಲ್ಲಿ ಹೊಲಕ್ಕೆ ಗೊಬ್ಬರ ಸಾಗಿಸಲು ಆ ಲಾರಿಗಳನ್ನು ಒದಗಿಸಬೇಕು. ಹಾಗೆ ಮಾಡಿ ಗೊಬ್ಬರದ ಸಮಸ್ಯೆಯನ್ನು ಪರಿಹಾರಮಾಡಬಹುದು.

ಅರಣ್ಯದಲ್ಲಿ ಈಗ ಯಾವುದೋ ಜಾತಿಯ ಮರಗಳನ್ನು ಬೆಳೆಸುತ್ತಿದ್ದಾರೆ, ಇದು ಸರಿಯಿಲ್ಲ, ಮಾವು, ಹಲಸು, ಹುಣಿಸೆ ಮುಂತಾದ ಮರಗಳ ಅಭಾವವಿದೆ, ಅವುಗಳನ್ನೂ ಹೊಂಗೆ ಹಿಪ್ಪೆ ಮುಂತಾದ ಮರಗಳನ್ನೂ ಬೆಳೆಸಬೇಕು ಎಂದು ಸಲಹೆಮಾಡುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ, ನಮ್ಮ ಮುಂದೆ ಮಂಡಿಸಿರುವ ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೂ ಅರಣ್ಯ ಶಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಅನುಮೋದಿಸುತ್ತೇನೆ. ಮುಖ್ಯವಾಗಿ ಮೊದಲು ವ್ಯವಸಾಯದ ಇಲಾಖೆ ವಿಚಾರ ಪ್ರಸ್ತಾಪಿಸುತ್ತೇನೆ. ಅನೇಕ ವರ್ಷಗಳಿಂದ ಈ ಮನೆಯಲ್ಲಿ ಮಾನ್ಯ ಸದಸ್ಯರೆಲ್ಲರೂ ಕೂಡ ವ್ಯವಸಾಯಾಭಿವೃದ್ಧಿಗೆ ಮಾತ ವರ್ಜಿ ಸಾಲದು, ಇಲಾಖೆ ಚೆನ್ನಾಗಿ ಕೆಲಸಮಾಡುತ್ತಿಲ್ಲ, ರೈತರಿಗೆ ಬೇಕಾಗಿರುವ ಸೌಲತ್ತು ಸಿಕ್ಕುತ್ತಿಲ್ಲ, ಇದನ್ನು ತ್ವರಿತಗೊಳಿಸಬೇಕು, ಎಲ್ಲಾ ಖಾತೆಗಳಿಗಿಂತ ವ್ಯವಸಾಯ ಖಾತೆ ಅಭಿವೃದ್ಧಿಯಾಗಬೇಕು, ಈ ಖಾತೆಯ ಅಭಿವೃದ್ಧಿಯಾದರೆ ಜನರ ಸಂಪತ್ತೂ ಅಭಿವೃದ್ಧಿಯಾಗುವುದು ಎಂದು ಹೇಳುತ್ತಿದ್ದೇವೆ. ಆದರೆ ಬರಿ ಭಾಷಣವಾಗಿದೆಯೇ ಹೊರತು ವ್ಯವಸಾಯ ಚೆನ್ನಾಗಿ ಆಗಿ ಹೆಚ್ಚು ಆಹಾರ ಬೆಳೆಯುತ್ತಿಲ್ಲ, ಗುರಿ ಮುಟ್ಟುತ್ತಿಲ್ಲ ಎಂದು ಒಪ್ಪಿಕೊಳ್ಳಬೇಕಾಗಿದೆ. ಆಹಾರ ಬೆಳೆಯಬೇಕಾದರೆ ಎಷ್ಟೋ ಕಷ್ಟವಿದೆ, ಸೌಲತ್ತು ಕೊಡುವುದು ಏನೂ ಸಾಲದು, ಅದರ ಬಗ್ಗೆ ಕ್ರಾಂತಿಕಾರಕವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇಲಾಖೆ ಅಧಿಕಾರಿಗಳು ಯಾರೇ ಆಗಲಿ, ಅವರವರ ಭಾಗದಲ್ಲಿ ಅವರು ಜವಾಬ್ದಾರಿಯಿಂದ ಕೆಲಸಮಾಡಿ ವ್ಯವಸಾಯಕ್ಕೆ ಹೆಚ್ಚು ಗಮನ ಕೊಡದಿದ್ದರೆ ಸರ್ಕಾರ ವರದಿ ನೋಡಿ ಅಂಕಿ ಅಂಶ ನೋಡಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಈಗ ಅಭಾವ ಬಂದಕಾರಣ ಎಲ್ಲಾ ಜಿಲ್ಲೆಗಳಲ್ಲೂ ನೀರಾವರಿ ಇರುವ ಕಡೆ ಬೇಸಿಗೆ ಫಸಲನ್ನು ಕಡ್ಡಾಯವಾಗಿ ಇಡಬೇಕು ಎಂದು ಒಂದೊಂದು ಜಿಲ್ಲೆಯನ್ನು ಒಬ್ಬೊಬ್ಬ ಮಂತ್ರಿ ವಹಿಸಿಕೊಂಡು ಅದನ್ನು ನೋಡಿಕೊಳ್ಳುತ್ತಿದ್ದಾರೆ. ಇದನ್ನು ವಹಿಸಿಕೊಂಡಮೇಲೆ ಆಯಾಯ ಜಿಲ್ಲೆಯಲ್ಲಿ ಎಷ್ಟರ ಮಟ್ಟಿಗೆ ನೀರಿನ ಸೌಲಭ್ಯ ಇದೆ, ನೀರು ಉಪಯೋಗ ಮಾಡಿದ್ದಾರೆಯೇ, ಎಷ್ಟು ಎಕರೆ ಬೆಳೆದಿದ್ದಾರೆ, ಬೇಸಿಗೆ ಫಸಲು ಹಾಕಿದ್ದಾರೆಯೇ ಎನ್ನತಕ್ಕಂಥ ವಿಚಾರವನ್ನು ಮಾನ್ಯ ಸಚಿವರು ಈ ಚರ್ಚೆಗೆ ಉತ್ತರ ಕೊಡುವಾಗ್ಗೆ ತಾಲ್ಲೂಕುವಾರು ಎಷ್ಟು ಫಸಲು ಮಾಡಿದ್ದಾರೆ ಎಂಬುದನ್ನು ಅಂಕಿಅಂಶಗಳಿಂದ ಇಲ್ಲಿ ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಕಟ್ಟಾಜ್ಞೆಯಾಗಿ ನೀರಾವರಿ ಪ್ರದೇಶದಲ್ಲಿ ಹೊರಗಡೆಯಿಂದ ಕೆಲವು ಅಧಿಕಾರಿಗಳನ್ನು ಡೆಪ್ಯೂಟ್ ಮಾಡಿದ್ದಾರೆ. ಈ ವಿಚಾರದಲ್ಲಿ ಗುರಿ ಮುಟ್ಟಿದ್ದಾರೆಯೇ ಇಲ್ಲವೇ ಯಾವ ತಾಲ್ಲೂಕಿನಲ್ಲಿ ಚೆನ್ನಾಗಿ ಮಾಡಿದ್ದಾರೆ ಎಂಬುದಕ್ಕೆ ಒಂದು ಸ್ಟೇಟ್‌ಮೆಂಟ್ ಕೊಟ್ಟರೆ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ರೈತ ಏತಕ್ಕಾಗಿ ಆಹಾರ ಧಾನ್ಯ ಹೆಚ್ಚಿಗೆ ಬೆಳೆಯುವುದರಲ್ಲಿ ಮನಸ್ಸು ಹಾಕಿಲ್ಲ ಎಂಬುದನ್ನು ಪ್ರಸ್ತಾಪ ಮಾಡುತ್ತೇನೆ. ಇಂದು ರೈತನಲ್ಲಿ ಉತ್ಸಾಹ ಇಲ್ಲ. ಯಾಕೆಂದರೆ ಬೆಳೆದಂಥ ಫಸಲಿಗೆ ಇಂದು ಸರಿಯಾದ ಧಾರಣೆ ಅಲ್ಲ. ಆದುದರಿಂದ ರೈತ ಬಾಗಾಯತು ವ್ಯವಸಾಯ ಮಾಡುವುದಕ್ಕೆ ಮನಸ್ಸು ಮಾಡಿದ್ದಾನೆ. ಬರೀ ಲಾಭದಾಯಕವಾದ ತೋಟ ಮಾಡುವುದರಲ್ಲಿ ಇದ್ದಾನೆ. ಇದನ್ನು ಸರ್ವೇ ಮಾಡಲಾಗಿದೆಯೇ ? ಒಂದು ಎಕರೆ ಭತ್ತ ಬೆಳೆಯುವುದಕ್ಕೆ ಎಷ್ಟು ಖರ್ಚು ಬರುತ್ತದೆ ಲೆಕ್ಕ ಹಾಕಿದರೆ ಇದು ಸರಿಯಾಗಿ ಗೊತ್ತಾಗುತ್ತದೆ. ಒಂದು ಎಕರೆಗೆ ಒಟ್ಟು ಖರ್ಚು 548 ರೂಪಾಯಿ ಬರುತ್ತದೆ

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಇದರಲ್ಲಿ ಉತ್ಪತ್ತಿ 12 ಪಲ್ಲಾ ಬರುತ್ತದೆಂದು ಲೆಕ್ಕ ಹಾಕಿದರೆ ಇವತ್ತಿನ ಧಾರಣೆಯಂತೆ ಒಂದು ಪಲ್ಲಾಕ್ಕೆ 50 ರೂಪಾಯಿನಂತೆ ಒಟ್ಟು 600 ರೂಪಾಯಿ ಉತ್ಪತ್ತಿ ಆಗುತ್ತದೆ. ಅಂದರೆ ರೈತನಿಗೆ ಖರ್ಚು ವೆಚ್ಚ ಹೋಗಿ 52 ರೂಪಾಯಿ ಉಳಿತಾಯವಾಗುತ್ತದೆ. ಇದು ಮುಂದಿನ ವರ್ಷದ ಬೀಜಕ್ಕೆ ಕೂಡ ಸಾಲುವುದಿಲ್ಲ. ರೈತ ಉಪವಾಸ ಸಾಯಬೇಕಾಗುತ್ತದೆ. ನಾನು ಸ್ವತಃ ರೈತನಾಗಿರುವುದರಿಂದ ಇದನ್ನು ಜವಾಬ್ದಾರಿಯಿಂದ ಹೇಳುತ್ತೇನೆ. ನಾನು ಬೇರೆ ವ್ಯವಹಾರ ಮಾಡುವುದಿಲ್ಲ ನನಗೆ ಬಿಜನೆಸ್ಸು ಇಲ್ಲ. ನಾನು ಸ್ವಂತ ವ್ಯವಸಾಯಗಾರನಾಗಿದ್ದು ನಾನು ಸ್ವಂತ ಕೆಲಸ ಮಾಡುತ್ತೇನೆ. ಆದುದರಿಂದ ನಾನು ಹೇಳುವ ಈ ಅಂಶವನ್ನು ಸರ್ಕಾರ ಪರಿಶೀಲಿಸಬೇಕು. ಸುಮ್ಮನೆ ಅನ್ಯಾಯವಾಗಿ ಪರದೇಶದಿಂದ ಗೋಧಿ ಮೊದಲಾದ ಆಹಾರ ಧಾನ್ಯ ಆಮದು ಮಾಡಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವುದರ ಬದಲು ರೈತನಿಗೆ ವ್ಯವಸಾಯಕ್ಕಾಗಿ ಬೇಕಾಗುವ ಅನುಕೂಲತೆ ಸಿಕ್ಕುವಂತೆ ವ್ಯವಸ್ಥೆ ಏತಕ್ಕೆ ಮಾಡಬಾರದು ಎಂಬುದನ್ನು ಸರ್ಕಾರ ಯೋಚನೆಮಾಡಬೇಕು. ಓಪನ್ ಮಾರ್ಕೆಟ್ಟಿನಲ್ಲಿ ಒಂದು ಕೆ. ಜಿ, ಅಕ್ಕಿಗೆ ಒಂದೂವರೆ ರೂಪಾಯಿ ಬೆಲೆ ಇದೆ. ಈ ರೇಟನ್ನು ರೈತನಿಗೆ ಏತಕ್ಕೆ ಕೊಡಬಾರದು ? ಒಂದು ಪಲ್ಲ ಭತ್ತಕ್ಕೆ 75 ರೂಪಾಯಿ ರೇಟು ಏತಕ್ಕೆ ಕೊಡಬಾರದು ಎಂದು ಕೇಳುತ್ತೇನೆ. ಹೆಚ್ಚು ಆಹಾರ ಬೆಳೆದು ನಾವು ಸಮೃದ್ಧಿಯಿಂದ ಇರಬೇಕಾದರೆ ಕೊನೆಯ ಪಕ್ಷ ಒಂದು ಪಲ್ಲ ಭತ್ತಕ್ಕೆ 75 ರೂಪಾಯಿ ರೇಟು ನಿಗದಿ ಮಾಡಬೇಕು ಮತ್ತು ಈ ರೇಟು ಕೊಡುತ್ತೇವೆಂದು ಪ್ರಕಟ ಮಾಡಿದರೆ ರೈತನ ಮುಂದಿನ ವರ್ಷಕ್ಕಾದರೂ ಚೆನ್ನಾಗಿ ಕೆಲಸ ಮಾಡಿ ಹೆಚ್ಚು ಆಹಾರ ಬೆಳೆಸಲು ಈಗಿನಿಂದಲೇ ಪ್ರಯತ್ನ ಮಾಡುತ್ತಾನೆ. ಒಟ್ಟಿನಲ್ಲಿ ರೈತನಿಗೆ ಪ್ರೋತ್ಸಾಹ ಮತ್ತು ಅನುಕೂಲತೆ ಮಾಡಿಕೊಡುವುದಕ್ಕಾಗಿ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆ ಬಗ್ಗೆ ಹೇಳುವುದಾದರೆ ಸಚಿವರು ತಮ್ಮ ಕೆಲಸ ಕಾರ್ಯಗಳನ್ನು ಬಹಳ ಚೆನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಸಾಗುವಳಿಗೆ ಜಮೀನು ರಿಲೀಜ್ ಮಾಡಿಕೊಡುತ್ತಿದ್ದಾರೆ. ಅವರ ಗಮನಕ್ಕೆ ಒಂದು ವಿಷಯ ತರಲು ಬಯಸುತ್ತೇನೆ. ಅರಣ್ಯ ಇಲಾಖೆಯಲ್ಲಿರುವ ಗೋಮಾಳ ಜಮೀನು ಸಾಗುವಳಿಗೆ ಲಾಯಖ್ ಜಮೀನು ಎಂದು ರಿಕಾರ್ಡು ಆಗಿದೆ. ಆದರೆ ಅದು ಇದುವರೆಗೆ ರಿಲೀಜ್ ಆಗಿಲ್ಲ. ಇದನ್ನು ಬೇಗನೆ ರಿಲೀಜ್ ದಯವಿಟ್ಟು ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಆ ಜಮೀನುಗಳ ಹೆಸರು ಹೇಳುತ್ತೇನೆ. ಗಂಗೂರು ಫಾರೆಸ್ಟು, ಭದ್ರಾವತಿ ತಾಲ್ಲೂಕು, ಬಿಸಿಲುಮನೆ ಫಾರೆಸ್ಟು, ಸಿದ್ದಾಪುರ, ಸ. ನಂ. 135-136 ಮಲ್ಲಿಗೇನಹಳ್ಳಿ, ಸರ್ವೇ ನಂಬರು 12. ಇದು ರಿಕಾರ್ಡು ಆಗಿ 5 ವರ್ಷವಾಯಿತು. ಕಂದಾಯ ಕೊಡುತ್ತಿದ್ದಾರೆ. ಈ ಜಮೀನಿನಲ್ಲಿ ಸಾಗುವಳಿ ಮಾಡಿದ್ದರೆ ಆಹಾರ ಉತ್ಪತ್ತಿಯಾಗುತ್ತಿತ್ತು. ಈ ಜಮೀನುಗಳ ರಿಕಾರ್ಡು ತರಿಸಿ ಕೂಡಲೇ ರಿಲೀಜ್ ಮಾಡಿ ವ್ಯವಸಾಯಕ್ಕೆ ಅನುಕೂಲಮಾಡಿಕೊಡಬೇಕು. ಈ ಪ್ರಕರಣಗಳನ್ನು ಇತ್ಯರ್ಥ ಮಾಡುವುದಕ್ಕಾಗಿ ಫೈಲ್ ಮತ್ತು ಸಿಬ್ಬಂದಿ ಜೊತೆಗೆ ಮಂತ್ರಿಗಳು ಸ್ಥಳಕ್ಕೆ ಪ್ರಯಾಣ ಮಾಡಿ ಅಲ್ಲಿಯೇ ಇತ್ಯರ್ಥ ಮಾಡಿದರೆ ಅನುಕೂಲವಾಗುತ್ತದೆ ಎಂದು ಸಚಿವರಿಗೆ ತಿಳಿಸಲು ಬಯಸುತ್ತೇನೆ. ಸಚಿವರು ತಹಶೀಲದಾರ್ ಮತ್ತು ಅಧಿಕಾರಿಗಳನ್ನು ನಂಬಿಕೊಂಡು ಕುಳಿತರೆ ಕಾಲಹರಣವಾಗುತ್ತದೆ ಎಂದು ಹೇಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

†Sri ALLUM KARIBASAPPA (Kurugodu).—While supporting the Demands, I should like to say a few words only on agriculture because I do not know anything about forest and fisherise. Sir, we are all aware that our country is having 80 per cent of Agriculturists and we are also aware that crores of rupees are being spent on agriculture. I have to mention here that many officers concerned, are not doing job with real spirit. I have got personal experience about this. In Bellary District, the Agricultural officer is not discharging his duties properly to help the ryots and support the food production. In many cases the ryots have to go to take the fertilizess and stay for 4 to 5 days at Bellary though the stock will be there. The Officer does not care that it is properly supplied in time to help the ryots. This is one of the greatest draw

backs that I have come across with many of the Officers in the Department. This has to go and until and unless the officers are concerned work sincerely I am doubtful that agriculture will succeed. Therefore I request the Government to see that the Department has to be tuned up throughout the state as far as possible. I do not say that all officers are bad. Some Officers are brilliant and discharging their duties properly but at the same time there are officers who do not do their duties properly. Such draw backs should be set right immediately in the interst of our country. Sir, I feel it is advisible that the Government should start a special Department with qualified officers to tour the interior parts of the State and to teach the royts the modern methods of agriculture because the Agriculturists are mostly illiterate and ignorant of the latest methods. This will help a great deal and there will be more production by this type of introduction of a special Department.

One more point I want to stress and finish is about the supply of fertilizers in time. I request the Government to supply the fertilizers in time, so that there will be no trouble for ryots. Thank you.

5-30 P.M.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಒಟ್ಟಿನಲ್ಲಿ ವ್ಯವಸಾಯದ ಬಗ್ಗೆ ಈಗಿರುವ ಪರಿಸ್ಥಿತಿಯಲ್ಲಿ ಏನಾಗಿದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಪ್ರಪಂಚದಲ್ಲೇ, ಎಲ್ಲಾ ದೇಶಗಳಲ್ಲೂ ಹೆಚ್ಚು ಬೆಳೆ ಬೆಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತು. ಈಗ ಏನಾಗಿದೆಯೆಂದರೆ, ಜಮೀನಿನ ವಿಸ್ತೀರ್ಣವನ್ನು ಜಾಸ್ತಿ ಮಾಡುವುದಕ್ಕೆ ಹೊರಟಿದ್ದಾರೆ. ಈ ರೀತಿ ಮಾಡಿದರೆ 2 ವರ್ಷದ ನಂತರ ಜಾಸ್ತಿ ಬೆಳೆಯುವುದಕ್ಕೆ ಸಾಧ್ಯವೆಂದು ತಿಳಿದುಕೊಂಡಿದ್ದಾರೆ. ಕೆಲವು ಕಡೆ ಕಾಡುಗಳನ್ನೆಲ್ಲಾ ತೆಗೆದು ವ್ಯವಸ್ಯಾಯಕ್ಕೆ ಜಮೀನನ್ನು ಪರಿವರ್ತನೆ ಮಾಡುತ್ತಾರೆ, 2 ವರ್ಷದ ನಂತರ ಆ ಭೂಮಿ ಒಂದು ರಾಸಾಯನಿಕ ಕಾರ್ಖಾನೆ ಇದ್ದ ರೀತಿಯಾಗುತ್ತದೆ. ಈಗ ಇನ್‌ಟೆನ್‌ಸಿವ್ ಕಲ್ಟಿವೇಷನ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹಿಂದಿನ ಕಾಲದ ಜನಜೀವನವನ್ನು ನೋಡಿದರೆ, ಯಾರಾದರೂ ಒಬ್ಬ ರೈತ ಮುಂದೆ ಬಂದರೆ, ಎಲ್ಲರೂ ಸೇರಿಕೊಂಡು ಅವನನ್ನು ಹಾಳು ಮಾಡುತ್ತಿದ್ದರು, ಆದರೆ ಈಗ ಆ ರೀತಿಯ ಭಾವನೆ ಯಾರಿಗೂ ಇರದೆ ಎಲ್ಲರೂ ಆಧುನಿಕ ಯಂತ್ರಗಳನ್ನು, ತಾಂತ್ರಿಕ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಒಟ್ಟಾಗಿ ಕೆಲಸಮಾಡುವ ಒಂದು ಭಾವನೆ ಮೂಡಿ ಬಂದಿದೆ. ಈಗ ಒಂದು ಕಡೆ ಅನ್‌ಇಕನಾಮಿಕ್ ಹೋಲ್ಡಿಂಗ್ಸ್ ಎಂದು, ಇನ್ನೊಂದು ಕಡೆ ಕನ್ಸಾಲಿಡೇಷನ್ ಎಂದು ಇದೆ. ಈ ರೀತಿ ಇರಬಾರದು. ವಾಸ್ತವ ಪ್ರಪಂಚದಲ್ಲಿ ಏನಾಗಿದೆ ನೋಡೋಣ. ಮುಂದುವರಿದ ದೇಶಗಳಲ್ಲಿ ರೈತನಿಗೆ ಬೇಕಾದ ಟ್ರಾಕ್ಟರ್‌ಗಳನ್ನು ಕೊಟ್ಟು ಹೆಚ್ಚು ಆಹಾರವನ್ನು ಬೆಳಿಯಲು ಅನುಕೂಲ ಮಾಡಿ ಕೊಡುತ್ತಾರೆ. ಹತ್ತಾರು ವರ್ಷಗಳ ನಂತರ ಆ ಜಮೀನನ್ನು ಸರ್ಕಾರದವರೇ ತೆಗೆದುಕೊಳ್ಳಬಹುದು. ಆದರೆ ನಮ್ಮದು ಬೇರೆ ದೇಶ. ಇಲ್ಲಿ ಸಮಾಜವಾದ ಇದೆ. ನಮ್ಮದು ಅಂಡರ್‌ಡೆವಲಪ್‌ಡ್ ಕಂಟ್ರಿ. ಕೈಗಾರಿಕೆ ಭಾಗದಲ್ಲಿ ಸಾಕಷ್ಟು ಮುಂದುವರೆದಿಲ್ಲ. ಈ ದೃಷ್ಟಿಯಿಂದ ಆಳವಾಗಿ ಯೋಚನೆ ಮಾಡಬೇಕಾದ್ದು ಒಳ್ಳೆಯದು. ನಮ್ಮಲ್ಲಿ ಎಲ್ಲೆಲ್ಲಿ ಮೈದಾನ ಪ್ರದೇಶಗಳು ಇವೆಯೋ ಅಲ್ಲಿ ಸರಿಯಾಗಿ ಮಳೆಯಾದರೆ ಹೆಚ್ಚು ಬೆಳೆಯಾಗುತ್ತದೆ. ಬೆಟ್ಟದ ಕಡೆಗಳಲ್ಲಿ ಈಗ ಮಳೆ ಕಡಿಮೆಯಾಗುತ್ತಾ ಹೋಗುತ್ತಿದೆ. ಈಗ 5-10 ವರ್ಷಕ್ಕೆ ಒಂದು ಸಾರಿ ಮೈದಾನದ ಕಡೆ ಮಳೆ ಬರುವುದು ಕಷ್ಟವಾಗಿದೆ. ಫಾರಿನ್ ಎಕ್ಸ್‌ಛೇಂಜ್ ಬೆಳೆಗಳನ್ನು ಮಳೆ ಕಡಿಮೆಯಾದಾಗ ಬೆಳೆಯುತ್ತಾರೆ. ಆದರೆ ಆಹಾರ ದೃಷ್ಟಿಯಿಂದ ನೋಡುವುದಾದರೆ, ನಮ್ಮ ಗುಬ್ಬಿ ತಾಲ್ಲೂಕ್ ಮೈದಾನ ಪ್ರದೇಶದಲ್ಲಿರುವರಿಂದ ಮಳೆ ಕಡಮೆ. ಹಾಗಲವಾಡಿ ಭಾಗದಲ್ಲಿ, ಸಿರಾದ ಭಾಗದಲ್ಲಿ ಯಾವಾಗಲೂ ಮಳೆ ಕಡಮೆ. 3-4-5-10 ವರ್ಷಕ್ಕೆ ಒಂದು ಸಾರಿ ಪೂರ್ಣ ಬೆಳೆ ಬರುವುದು ಕಷ್ಟವಿದೆ. ಇಂತಹ ಜಾಗಗಳಲ್ಲಿ ಮೇಜರ್, ಮೈನರ್ ಇರಿಗೇಷನ್ ಪ್ರಾಜೆಕ್ಟುಗಳನ್ನು ಕೈಗೊಳ್ಳುವುದರ ಜೊತೆಗೆ ಹೆಚ್ಚು ಹೆಚ್ಚು ಬಾವಿಗಳನ್ನು ತೋಡಿಸಬೇಕು. ಸರ್ಕಾರದವರನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ರೈತರೇ ದುಡ್ಡು ಕೊಟ್ಟು ಬಾವಿಗಳನ್ನು

(ಶ್ರೀ ಪಿ. ಎಂ. ದೇವ್)

ತೆಗೆಸಲು ತೊಂದರೆಯಾಗುವುದರಿಂದ ಸರ್ಕಾರದವರೇ ತೆಗೆಸಬೇಕು ಮತ್ತು ಒಬ್ಬ ಏಜೆಂಟ್‌ನನ್ನು ನೇಮಕ ಮಾಡಿ, ಅವನ ಮುಖಾಂತರ ರೈತರಿಗೆ ಬೇಕಾದ ಉಪಕರಣಗಳನ್ನು ಕೊಡಿಸಬೇಕು, ಕೆರೆಗಳ ಸುತ್ತಲೂ ನಾಲ್ಕು ನಾಲ್ಕು ಬಾವಿಗಳನ್ನು ತೆಗೆಸಿ, 100 ಹಾರ್ಸ್ ಪವರ್ ಇರುವ ಪಂಪ್‌ಗಳನ್ನು ಹಾಕಿ ಕೊಟ್ಟರೆ ಹೆಚ್ಚು ಬೆಳೆ ಬೆಳೆಯುತ್ತಾರೆ. ಹೆಚ್ಚು ಬೆಳೆ ಬೆಳೆದಾಗ ಹೆಚ್ಚು ಕಂದಾಯವನ್ನು ಕೊಡುತ್ತಾರೆ. ಇದೇ ಕಂದಾಯದ ಹಣದಿಂದ ಮತ್ತೆ ಬೇಕಾದರೆ ಬಾವಿಗಳನ್ನು ತೋಡಿಸಬಹುದು. ಈ ಕೆಲಸಗಳನ್ನು ದಳ್ಳಾಳಿ ಕಂಟ್ರಾಕ್ಟರ್‌ಗಳ ಮೂಲಕ ಮಾಡಿಸಿದರೆ ಉಪಯೋಗವಾಗುವುದಿಲ್ಲ. ದೂರದ ದೃಷ್ಟಿಯಿಂದ ನಾವು ಆಹಾರ ಸಮಸ್ಯೆಯನ್ನು ಬಗೆಹರಿಸುವುದು ಕಷ್ಟವಾಗುತ್ತದೆಯೆಂದು ನನ್ನ ಭಾವನೆ. ಇದನ್ನು ನಿವಾರಣೆ ಮಾಡಲು ಕೆಮಿಕಲ್ ಇಂಡಸ್ಟ್ರಿಗಳು ಹೆಚ್ಚಾಗಬೇಕು. ಪೂರ್ವ ಕಾಲದ ವ್ಯವಸಾಯ ಉಪಕರಣಗಳನ್ನು ಉಪಯೋಗಿಸದೆ ಅಧುನಿಕ ಉಪಕರಣಗಳನ್ನು ಉಪಯೋಗಿಸಬೇಕು. ರೋಗಗಳು ಬರದಂತೆ ಕ್ರಿಮಿನಾಶಕವಸ್ತುಗಳನ್ನು ಉಪಯೋಗಿಸಬೇಕು. ಈಗಿರುವ ವ್ಯವಸಾಯದ ಕ್ರಮ ಸಂಪೂರ್ಣವಾಗಿ ಬದಲಾಗಬೇಕು. ಯಾವ ರೀತಿ ಮಾರ್ಪಾಡು ಮಾಡಿದರೆ ಹೆಚ್ಚು ಬೆಳೆಯಬಹುದು ಎಂದು ಯೋಚನೆ ಮಾಡಬೇಕಾಗಿದೆ. ಈಗಾಗಲೆ ಅನೇಕ ರೈತರಿಗೆ ಸಾಲಗಳನ್ನು ಕೊಟ್ಟಿದ್ದೀರಿ. ಇದರ ಪೈಕಿ ಕೆಲವು ಭಾಗ ವಸೂಲು ಆಗುವುದಿಲ್ಲ. ಹಿಂದಿನ ಕಾಲದಲ್ಲಿ 10-20 ಹಳ್ಳಿಗಳಿಗೆ ಒಬ್ಬ ಗೌಡನಿರುತ್ತಿದ್ದ. ಅವನೇ ಎಲ್ಲರಿಗೂ ಸಾಲ ಕೊಟ್ಟು ಹತ್ತಾರುವರ್ಷಗಳ ನಂತರ ಎಲ್ಲಾ ಜಮೀನುಗಳನ್ನೂ ತನ್ನ ಹೆಸರಿಗೆ ಮಾಡಿಸಿಕೊಳ್ಳುತ್ತಿದ್ದ. ಸರ್ಕಾರದವರು ಕೊಡುವ ಸಾಲದಿಂದಲೂ ಸಹ ಅವನು ಸರಿಯಾಗಿ ಬೆಳೆ ಬೆಳೆಯದೆ ಅವನಿಗೆ ಸಾಲ ತೀರಿಸುವುದು ಕಷ್ಟವಾಗಿದೆ. ಈಗ ಸೀಡ್ಸ್ ಫಾರಮ್ ಮತ್ತು ಸ್ಟೇಟ್ ಫಾರಮ್ ಮಾಡಬೇಕೆಂದು ಮಾಡಿದ್ದೀರಿ. ಒತ್ತಾಯದಿಂದ ರೈತನಿಂದ ಬೆಳೆ ಬೆಳೆಸುವುದಕ್ಕೆ ಆಗುವುದಿಲ್ಲ. ಸೀಡ್ಸ್ ಫಾರಮ್ ಏನಾದರೂ ಮಾಡಿದರೆ ಒಂದು ಕಾನೂನಿನ ಮೇರೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಯಾರು ಯಾರು ಸಾಲವನ್ನು ಸರಿಯಾಗಿ ತೀರಿಸುವುದಿಲ್ಲವೋ ಅವರಿಂದ ಬಡ್ಡಿಯನ್ನು ಲೆಕ್ಕ ಹಾಕಿ ವಸೂಲು ಮಾಡುತ್ತಿದ್ದೀರಿ, ಅದು ತಪ್ಪು ಎಂದು ಹೇಳುತ್ತೇನೆ. ಹಿಂದಿನ ಕಾಲದಲ್ಲಿ ಕೆಲವರು ಜಮೀನನ್ನು ಮಾಡಿಸಲು ಕೂಲಿ ಕೊಟ್ಟು ಜನರನ್ನು ನೇಮಿಸಿಕೊಳ್ಳುತ್ತಿದ್ದರು. ಅದೇ ರೀತಿ ಸರ್ಕಾರದವರು ರೈತರುಗಳಿಗೆ ಸಂಬಳ ಕೊಟ್ಟು ಜಮೀನನ್ನು ಮಾಡಿಸಬೇಕು. ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಮೊದಲಾದವರನ್ನು ರೈತರಿಗೆ ಆಧುನಿಕ ವ್ಯವಸಾಯವನ್ನು ಹೇಳಿಕೊಡಲು ನೇಮಿಸಬೇಕು. 3-4-5-6 ವರ್ಷಗಳ ನಂತರ ಆ ರೈತರು ತಮ್ಮ ಹಣದಿಂದ ಜಮೀನನ್ನು ಬೇಕಾದರೆ ಕೊಳ್ಳಬಹುದು, ಮತ್ತು ನಿಮ್ಮ ಅಧಿಕಾರಿಗಳ ಎಫಿಸಿಯನ್ಸಿಯು ಕೂಡ ಗೊತ್ತಾಗುತ್ತದೆ. ದೇಶದಾದ್ಯಂತ ಭೂಮಿಯನ್ನು ಛಿದ್ರಛಿದ್ರವಾಗಿ ಮಾಡುವುದಕ್ಕೆ ಸರ್ಕಾರದವರು ಅವಕಾಶವನ್ನು ಕೊಟ್ಟರೆ ಹೆಚ್ಚಿನ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ದೊಡ್ಡ ಹಿಡುವಳಿ ಒಬ್ಬ ರೈತನಿಗೆ ಇದ್ದರೆ, ಒಬ್ಬನಿಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ಎಲ್ಲರನ್ನೂ ಸೇರಿಸಿಕೊಂಡು, ಎಲ್ಲರೂ ತನ್ನ ಅಣ್ಣತಮ್ಮಂದಿರು ಎಂದು ತಿಳಿದುಕೊಂಡು ಅಧುನಿಕ ವ್ಯವಸಾಯ ಉಪಕರಣಗಳನ್ನು ಉಪಯೋಗಿಸಿಕೊಂಡು ಹೆಚ್ಚು ಬೆಳೆ ಬೆಳೆಯುವುದಕ್ಕೆ ಇಷ್ಟ ಪಡುತ್ತಾನೆ. ಇನ್ನೊಂದು ವಿಚಾರ, ಇದಕ್ಕೆ ಒಂದಕ್ಕೊಂದಕ್ಕೆ ನಿಕಟವಾದ ಸಂಬಂಧವಿರುವುದರಿಂದ ವಿಲೇಜ್ ಲೆವೆಲ್ ಗೌರ್ನಮೆಂಟಿನವರು ಏನು ಹೇಳುತ್ತಾರೋ ಅದಕ್ಕೆ ಅನುಗುಣವಾದ ಬದಲಾವಣೆಗಳು ಆಗಬೇಕು. ಇಷ್ಟು ಹೇಳಿ ಅಧ್ಯಕ್ಷರು ನನಗೆ ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri R. M. DESAI (Bilgi).—Mr. Speaker, Sir in supporting the Demand on Agriculture for 1966-67. I wish to make some observations. If we look to the discussions held in this House, Sir, I think we have got a mind to grow foodgrains and the Government also is in a position to help the raiyats to a certain extent. The Department concerned is very eager to help us. I think there should be a sort of adjustment so that we may achieve the results. Looking to the State requirements of food, we require about 48 lakhs tons of foodgrains every year normally, and the shortage we are experiencing is not more than 3 to 4 lakhs tons. Looking to the cultivable area and the sown area and the area on which we are mainly growing the foodcrops, I do not think it will be a difficult problem to grow what we require, not in the three-year scheme that has

been thought of by our Government, but in the three crop seasons even. I am rather optimistic about it. Sir, in the book about the review of the working of Government Departments with special reference to Development in 1966, some points have been given to us on which we have laid a let of stress. I think they are self-explanatory. The eight points laid down under Agriculture are the following :

1. Reclamation of land by tractors and bulldozers.
2. Bringing more area under irrigation.
3. Developing local manurial resources.
4. Use of fertilisers
5. Use of improved seeds
6- Adoption of improved agronomic practices
7. Plant protection
8. Soil conservation.

I would like to add one more thing and that is economic aid to the farmer. Of course in the speech delivered by our Hon'ble Finance Minister he has stated in para 31 that short term loan to the former is also being thought of and for which our State Government are approaching the Central Government. I think they will get it. We have only to think of the inputs that are required to produce in the land. Sir, in the matter of agriculture, what we have to think in our country is rather from a different angle. First we have got to lay stress on our food problem and food production and how we are to graw more. Taking into consideration the inputs that we are going to have on the land, how best that can be adopted and where it should be adopted is a matter that should receive our serious attention. Why I state this is we should not go on the presumption that every former is eligible to recive all the help necessary. We should restrict the help as such or the input as such to such of those areas where we can achieve the best results. Let us not say that the big farmers should not get it and it must go to small marmers ; we must not be choosey about it. Whoever does the job and shows result should be helped and that should be the criterion. Ours is a socialistic pottern of society and we must cut down the pockets of big people should not be the criterion. For the present what all we want is more food production and we should not look to others in these matters.

Sir, after making these general observations, I must say that if we concentrate our efforts on certain areas to grow more food, I think we can overcome the difficulty. As regards our area, that is, Ghataprabha Left bank Channel irrigation area, it is really developing into a very prosperous area and it is giving us a very blooming picture. We are adopting almost all the modern techniques of agriculture and treatment of water ; improved agronomic practices are also being adopted there. But the supply of bulldozers is a question which will never be solved by us and cannot be solved practically. We have used the water to the best of our capacity by the simple method of border strip irrigation and

(SRI R. M. DESAI)

it has proved successful. I go to the extent of requesting our Government to think very seriously adopting it even on dry lands also. It helps the land and also it solves soil conservation problem. It really teaches the farmer how best to use water which has been allotted to him.

Much is talked of Tungabhadra area. Much has been given to the Tungabhadra area and much is being envisaged to be given to Tungabhadra area. I think some step-motherly attitude is being taken by the Government in respect of other projects. But Tungabhadra project has not shown good results though it was taken up since a long time. But Ghataprabha within a very short period has come up and it is full of promise to the cultivators. I request the Government to please consider this aspect and give the necessary encouragement to that area so that we will be able to really produce more. The total irrigable area under Ghataprabha is about 2 lakhs acres. Taking our normal production at 45 lakhs tons of foodgrains, the shortage is only 3 to 4 lakhs tons. If the necessary encouragement is given to us, I think we can produce 4 lakhs tons of food grains in that particular area only. I do not mean to say that Tungabhadra area should not be developed or Bhadra area should not be developed. But let them specialise themselves in certain production programmes which is very necessary now.

For food production programme, I wish to suggest one or two things

The disparity between the price structure of food crops and cash crops as we call is also inducing the farmer to switch on to cash crops rather than food crops. Government should devote its serious attention to see that this disparity is brought to the minimum. In the Thungabhadra area what I have observed is, most of the area is benefited by the cultivation of oil-reeds like ground-nut, because it has become very lucrative, because the price factor is very attractive. So, to remove this disparity or inducement to the farmer, I think a little higher price to the foodgrains is necessary.

Looking to our Food Minister's statement, whatever he has given as procurement price and ceiling price, at least that difference should be paid to us rather than the middle-man having it.

As regards plant protection scheme, I wish to say one thing. By way of illustration I would say that for oil-seeds production, some subsidy is given for the spraying and medicines. But there is no such subsidy in the case of foodgrains wherever we use these insecticides. Some policy should be adopted whereby in the case of foodgrains also, subsidy should be given for any insecticides and pesticides, in the same manner as it is done in the case of commercial crops.

I am really very sorry to say that our Chief Minister is not here. He has to answer to what we say today and unfortunately our Agriculture Minister is now in the U.S.A. who should have replied to the House. The Chief Minister also is absent. Any way, I hope our views will be taken by the Government very seriously and and attended to.

One or two matters with regard to hybrid seeds. Sir, this is closely related to the problem of food—the programme for growing hybrid seeds. In this book, Review of the Working of the Government Departments, there is a scheme mentioned wherein there is acreage figures given. Actually what we have done is something different this time. The total acreage under the seed programme this time has been given to the National Seed Corporation which supplies the fonudation seeds. The acreage under jawar, bajra, maize are given. The hybrid jawar scheme only for this year has been given as 2334 acres. Here we are feeling, on what basis we are actually making our programme as such. Some of the Hon'ble Members made an observation that the Government is unable to carry out seed programme. It is not such a very easy matter. We have to produce it by natural methods. It takes its own time. The hybrid system in the other countries has devoloped since 1917 and now they have come to a certain stage, wherein they have been able to grow to a substantial extent. Hardly we have started last year. It has caught our imagination only last year and it is to our credit to say that the State has risen to the call of the Nation and we have done 1400 acres. I have heard that Mysore State stands second in growing seeds in the whole of India.

In regard to the forests in North Kanara, Sri Phayade made a remark if some offices are shifted to certain other places, it will be better managed. We have given serious thought to it and after that only the three divisional offices were shifted to Dharwar. These three offices were in Dharwar and had been shifted to Dharwar some time in 1930 when the forest programme was very heavy there. Now I do not think they will be any better served if we think of shifting these offices to the respective places. Whereas 97 per cent of the contractors come from Dharwar, only 3 per cent of the contractors come from other places.

The second thing is, in the Forest Department, I am not coming across any encouraging para about any attempts to maintain national parks, to attract the foreigners, to maintain our own species of animals. It is very necessary. I request the Government to devote some time and energy and space to see that they are made very attractive so as to attract foreigners and so that we can increase our foreign tourism.

With these few remarks, I thank you, Sir.

MR. SPEAKER.—Siddaiah Kasimath is absent and Sri H. D. Deve Gowda may speak. Let the debate be over today.

SRI D. DEVARAJ URS (Minister for Transport and Tourism).—How long are we sitting ?

MR. SPEAKER.—I am prepared to sit as long as Hon'ble Members want me. It was agreed that the debate should be over today and tomorrow there will be reply and one hour should be made available to two Ministers. After that, we will take up the other Demand. That Demand is equally important.

SRI B. BHASKAR SHETTY.—It was agreed between the Opposition and the Whip of the Congress Party that we should sit till 7 P.M. today, Sir.

Sri B. RACHIAH.—We can sit till 7 P.M. today.

Sri D. DEVARAJ URS.—Is it agreed that we sit till 7 P.M. today ?

Mr. SPEAKER.—I am entirely in your hands. If it is decided that we should sit till 7 P.M. I have no objection.

6-00 P.M.

†**ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).**—ಸ್ವಾಮಿ, ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರತಕ್ಕ ವ್ಯವಸಾಯ ಮತ್ತು ಅರಣ್ಯ ಇಲಾಖೆಯ ಬೇಡಿಕೆಗಳ ಬಗ್ಗೆ ನಾನು ಕೆಲವು ವಿಷಯಗಳನ್ನು ಪ್ರಸ್ತಾಪಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ದಿವಸ ವ್ಯವಸಾಯ ಇಲಾಖೆಗೆ ಕೊಟ್ಟಿರತಕ್ಕ ಹಣ 56,55,000 ರೂಪಾಯಿ ಏನೇನೂ ಸಾಲದು. ನಮ್ಮ ಸರ್ಕಾರದ ಒಟ್ಟು 153 ಕೋಟಿ ರೂಪಾಯಿ ಆದಾಯದಲ್ಲಿ ವ್ಯವಸಾಯ ಖಾತೆಗೆ ಕೇವಲ ಐದೂವರೆ ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದನ್ನು ನೋಡಿದರೆ ಇತ್ತ ಕಡೆ ಸರ್ಕಾರದ ಗಮನ ಹರಿದಿಲ್ಲವೆಂದು ಗೊತ್ತಾಗುತ್ತದೆ. ವ್ಯವಸಾಯ ಇಲಾಖೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕೆಂದು ಹೇಳುತ್ತಿದ್ದರೂ ಅದರ ಕಡೆ ಸರ್ಕಾರದ ಗಮನ ಹರಿದಿಲ್ಲ ಎನ್ನುವುದು ವ್ಯವಸಾಯ ಬಾಬಿಗೆ ಒದಗಿಸಿರುವ ಸ್ವಲ್ಪ ಹಣದಿಂದಲೇ ಗೊತ್ತಾಗುತ್ತದೆ. ವ್ಯವಸಾಯ ಇಲಾಖೆಗೆ ಬಹಳ ಮಹತ್ತರವಾದ ಗಮನವನ್ನು ಕೊಡಬೇಕೆಂದು, ಹೆಚ್ಚಿನ ರೀತಿಯಲ್ಲಿ ವ್ಯವಸಾಯ ಇಲಾಖೆಯನ್ನು ರೀ ಓರಿಯಂಟೇಷನ್ ಮಾಡಿ ಉತ್ಪಾದನೆಯನ್ನು ದ್ವಿಗುಣಗೊಳಿಸಬೇಕು, ನಮ್ಮಲ್ಲಿರತಕ್ಕ ಆಹಾರದ ಕೊರತೆಯನ್ನು ನೀಗಲು ಹೆಚ್ಚು ಬೆಳೆಯನ್ನು ತೆಗೆಯುವ ಶಕ್ತಿಯನ್ನು ಪಡೆಯಬೇಕು ಎಂದು ಎಲ್ಲ ಕಡೆಯ ಸದಸ್ಯರೂ ಸರ್ಕಾರಕ್ಕೆ ಈ ಸಭೆಯಲ್ಲಿ ಮನವಿ ಮಾಡಿದ್ದಾರೆ. ವ್ಯವಸಾಯ ಇಲಾಖೆಯೊಂದೇ ಈ ಮಹತ್ತರ ಕಾರ್ಯವನ್ನು ಸಾಧಿಸಲು ಆಗುವುದಿಲ್ಲ. ಇದು ಮೂರು ನಾಲ್ಕು ಖಾತೆಗಳಲ್ಲಿ ಹಂಚಿಕೊಂಡು ಹೋಗಿದೆ. ಮೊದಲನೆಯದು ವ್ಯವಸಾಯ ಇಲಾಖೆ, ಎರಡನೆಯದು ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು ಮತ್ತು ಮೂರನೆಯದಾಗಿ ನೀರಾವರಿ ಇಲಾಖೆ. ಈ ಮೂರು ಖಾತೆಗಳಲ್ಲಿ ಹೊಂದಾಣಿಕೆ ಇರಬೇಕು ಎನ್ನುವುದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ. ವ್ಯವಸಾಯ ಇಲಾಖಾಧಿಕಾರಿಗಳ ಹತ್ತಿರ ಹೋಗಿ ಕೇಳಿದರೆ ಅವರು ತಮ್ಮ ಲಿಮಿಟೇಷನ್ ಏನಿದೆ ಅಷ್ಟನ್ನು ಮಾಡುತ್ತೇವೆ, ಅಷ್ಟನ್ನು ಮಾಡಿದರೆ ತಮ್ಮ ಜವಾಬ್ದಾರಿ ಮುಗಿದ ಹಾಗೆ, ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ ಹಾಗೆ ಆಯಿತು ಎಂದು ಹೇಳುತ್ತಾರೆ.

ಇವತ್ತು ಫೌಂಡೇಷನ್ ಸೀಡ್ಸ್ ಕೆಲಸವನ್ನು ಬ್ಲಾಕ್ ಏಜನ್ಸಿಗಳಿಗೆ ಕೊಟ್ಟ ಮೇಲೆ ಅಲ್ಲಿನ ಬೀಜವನ್ನು ಪುನಃ ದ್ವಿಗುಣಗೊಳಿಸುವುದರ ಬಗ್ಗೆ ನಮಗೆ ಸಂಬಂಧವಿಲ್ಲ ಎಂದು ಹೇಳುವುದನ್ನು ಕೇಳಿದ್ದೇನೆ. ಇವತ್ತು ವ್ಯವಸಾಯ ಇಲಾಖೆಯಲ್ಲಿರುವ ಯಾವ ಅಧಿಕಾರಿಯನ್ನು ತೆಗೆದುಕೊಂಡರೂ ಕೂಡ ತನ್ನ ಪಾತ್ರ ಎಲ್ಲಿಯವರೆಗೆ ಎಂದರೆ ಜಿಲ್ಲಾ ಮಟ್ಟದಲ್ಲಿ ಮಾತ್ರ ಎಂದು ತಿಳಿದುಕೊಂಡಿದ್ದಾರೆ. ಅಲ್ಲಿಂದ ಮುಂದೆ ಹೋದರೆ ಬ್ಲಾಕ್ ಏಜನ್ಸಿ ಬರುತ್ತದೆ ಎಂದು ಅವರ ಕಡೆಗೆ ತೋರಿಸುತ್ತಾರೆ. ಇದನ್ನೆಲ್ಲ ನೋಡಿದರೆ ಇವರಲ್ಲಿ ಸಾಕಷ್ಟು ಹೊಂದಾಣಿಕೆ ಇಲ್ಲ ಎನ್ನುವುದು ಅರ್ಥವಾಗುತ್ತದೆ. ರಾಷ್ಟ್ರೀಯ ವಿಸ್ತರಣಾ ಯೋಜನೆ ಇಲಾಖೆ ಮಹತ್ತರವಾದ ಪಾತ್ರವನ್ನು ವಹಿಸಬೇಕು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್, ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ ಹಾಗೂ ಗ್ರಾಮ ಸುಧಾರಕ ಇವರು ಮೂವರೂ ವ್ಯವಸಾಯದ ಉತ್ಪಾದನೆಯಲ್ಲಿ ಭಾರಿ ಜವಾಬ್ದಾರಿಯನ್ನು ಕೆಳಮಟ್ಟದಲ್ಲಿ ಹೊಂದಿರುವವರು ಎಂದರೆ ತಪ್ಪಾಗಲಾರದು. ಇವರು ಆಸಕ್ತಿ ವಹಿಸಿ ಕೆಲಸ ಮಾಡಬೇಕು ಮತ್ತು ಅವರ ಮೇಲೆ ಇಲಾಖೆಯ ಕೆಲಸ ನಿಂತಿದೆ ಎಂದರೆ ಸರ್ಕಾರ ಅದನ್ನು ಒಪ್ಪುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಗ್ರಾಮ ಸುಧಾರಕ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಮತ್ತು ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಕೊಡತಕ್ಕ ಬೂಸ್ಟೆಡ್ ಫಿಗರ್ಸ್ ಎಷ್ಟುಮಟ್ಟಿಗೆ ಸರಿಯಾಗಿವೆ ಎನ್ನುವುದರ ಕಡೆಗೆ ಸರ್ಕಾರ ಗಮನ ಕೊಡಬೇಕೆಂಬುದು ನನ್ನ ಅಭಿಪ್ರಾಯ. ಅಗ್ರಿಕಲ್ಚರಲ್ ಆಫೀಸರ್‌ನಂಥ ಕೆಲವು ತಜ್ಞರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾದ ಸಂದರ್ಭ ಇದೆ. ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಮತ್ತು ಗ್ರಾಮ ಸುಧಾರಕ ಇವರಿಗೆ ಒಂದೊಂದು ಗ್ರಾಮವನ್ನು ಒಬ್ಬೊಬ್ಬರಿಗೆ ಎಂದು ಕೆಲವಾರು ಗ್ರಾಮಗಳನ್ನು ಅವರಿಗೆ ನಿಗದಿ ಮಾಡಿ ಒಂದು ವರ್ಷಕ್ಕೆ ಸಂಬಂಧಪಟ್ಟಂತೆ ಒಂದು ಬೆಳೆಗೆ ಇಷ್ಟು ಬೆಳೆಸಬೇಕು ಎಂದು ನಿಗದಿ ಮಾಡದೆ ಹೋದರೆ, ಒಂದು ನಿರ್ಬಂಧವನ್ನು ಹಾಕದೆ ಹೋದರೆ ಬಹುಶಃ ನಮ್ಮ ಉತ್ಪಾದನೆ ಕಾರ್ಯಕ್ರಮ ಕುಂಠಿತವಾಗುತ್ತದೆ. ಆದುದರಿಂದ ಅಧಿಕಾರಿಗಳಿಗೆ ಕೆಲವು ಗ್ರಾಮಗಳನ್ನು ಒಪ್ಪಿಸಿ ಅವರ ಮೇಲೆ ಜವಾಬ್ದಾರಿಯನ್ನು ಹೊರಿಸುವುದು ಉತ್ತಮ ಎಂದು ನನ್ನ

ಅಭಿಪ್ರಾಯ. ಹೀಗೆ ಪ್ರತಿಯೊಬ್ಬರಿಗೂ ಕೆಲವು ಗ್ರಾಮಗಳನ್ನು ಕೊಟ್ಟು, ಒಂದು ಟಾರ್ಗೆಟ್ ಗೊತ್ತು ಮಾಡಿ ಆ ಪ್ರಕಾರವಾಗಿ ಅವರು ಫಲಿತಾಂಶವನ್ನು ತೋರಿಸದೆ ಹೋದರೆ ಅಂಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹೀಗೆ ಸರ್ಕಾರ ಒಂದು ಹಿಡಿತವನ್ನು ಹಾಕದೆ ಹೋದರೆ ಹೆಚ್ಚು ಉತ್ಪಾದನೆ ಮಾಡಬೇಕೆಂಬ ನಮ್ಮ ಆಸೆ ಏನಿದೆ ಅದು ಫಲಪ್ರದವಾಗಲಾರದು. ಅಲ್ಲದೆ ವ್ಯವಸಾಯ ಇಲಾಖೆ, ರಾಷ್ಟ್ರೀಯ ವಿಸ್ತರಣಾ ಯೋಜನೆ ಇಲಾಖೆ ಮತ್ತು ನೀರಾವರಿ ಇಲಾಖೆ ಇವು ಮೂರೂ ಹೊಂದಾಣಿಕೆಯಿಂದ ಕೆಲಸ ಮಾಡುವುದು, ಅಧಿಕಾರಿಗಳಿಗೆ ಕೆಲವು ಪ್ರದೇಶಗಳನ್ನು ವಹಿಸಿ ಅದರಲ್ಲಿ ಏನು ಉತ್ಪಾದನೆಯಾಗಬೇಕು ಎಂದು ನಿಗದಿ ಮಾಡುವುದು ಇಂಥ ವಿಷಯಗಳ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಈ ತರಹ ಜವಾಬ್ದಾರಿಯನು ಗೊತ್ತು ಮಾಡುವಾಗ ಒಂದು ಕಾನೂನು ಮಾಡಿ ಅದರ ಪ್ರಕಾರ ಜವಾಬ್ದಾರಿ ವಹಿಸಿ, ಅದರಂತೆ ಕೆಲಸ ಮಾಡಲು ತಪ್ಪಿದರೆ ಅವರ ಮೇಲೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತೇನೆ.

ಫರ್ಟಿಲೈಸರುಗಳ ಅಡಲ್ಟರೇಷನ್ ಆಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಗಮನ ಕೊಡಬೇಕೆಂದು ತಿಳಿಸುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ರೈತನಿಗೆ ಕೊಡತಕ್ಕ ರಸಾಯನಿಕ ಗೊಬ್ಬರವನ್ನು ಸರ್ಕಾರದವರು ಪೂರ್ಣವಾಗಿ ಒದಗಿಸುವುದಕ್ಕೆ ಶಕ್ತಿ ಇಲ್ಲ. ಈ ಖಾಸಗಿಯವರು, ಈ ರಸಾಯನಿಕ ಗೊಬ್ಬರದ ಮಿಕ್ಸ್‌ಚರ್ ಮಾಡುವವರು ಗೊಬ್ಬರವನ್ನು ಸರಿಯಾದ ಪ್ರಮಾಣದಲ್ಲಿ ಮಾಡಿ ರೈತರಿಗೆ ಕೊಡುತ್ತಿಲ್ಲ. ಇಂಥವರ ಬಗ್ಗೆ ಇಲಾಖೆಯವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳುವುದಾದರೆ ಸರ್ಕಾರದವರು ಮಾಡಿರುವ ಆರ್ಡರುಗಳು ಎಲ್ಲ ಪುಸ್ತಕಗಳಲ್ಲಿರಬಹುದು. ಎಷ್ಟು ಜನ ಗೊಬ್ಬರದಲ್ಲಿ ಅಡಲ್ಟರೇಷನ್ ಮಾಡುತ್ತಾರೆ, ಅಂಥವರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ಎಂದರೆ ವ್ಯವಸಾಯ ಇಲಾಖೆಯ ಇತಿಹಾಸದಲ್ಲಿ ಒಬ್ಬರ ಮೇಲೆಯೂ ಕ್ರಮ ತೆಗೆದುಕೊಂಡಿಲ್ಲ ಎಂದು ನನ್ನ ಅಭಿಪ್ರಾಯ. ಇಲಾಖಾಧಿಕಾರಿಗಳು ಇದರ ಬಗ್ಗೆ ಪೂರ್ಣ ಗಮನಕೊಡಬೇಕು ಇಲ್ಲದೆ ಹೋದರೆ ರೈತನಿಗೆ ರಸಾಯನಿಕ ಗೊಬ್ಬರಗಳ ವಿಚಾರದಲ್ಲಿ ಒಂದು ತರಹ ಉದಾಸೀನ ಉಂಟಾಗತಕ್ಕ ಸನ್ನಿವೇಶ ಬರುತ್ತದೆ. ಆದ್ದರಿಂದ ಸರ್ಕಾರದವರು ಇದರ ಕಡೆಗೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಫಿಷರೀಸ್ ಇಲಾಖೆಯಲ್ಲಿ ಕೆಲವಾರು ವರ್ಷಗಳಿಂದಲೂ 16 ಲಕ್ಷ ರೂಪಾಯಿಗಳ ಉತ್ಪತ್ತಿಯನ್ನು ತೋರಿಸಿದ್ದಾರೆ. ಖರ್ಚನ್ನು 30 ಲಕ್ಷ ರೂಪಾಯಿ ತೋರಿಸಿದ್ದಾರೆ. ಮಂತ್ರಿಗಳು ಉತ್ತರ ಕೊಡುವಾಗ 30 ಲಕ್ಷ ರೂಪಾಯಿಗಳ ಬಗ್ಗೆ ಸ್ವಲ್ಪ ವಿವರಗಳನ್ನು ಕೊಡಬೇಕು ಎಂದು ತಿಳಿಸುತ್ತೇನೆ.

ಅರಣ್ಯ ಇಲಾಖೆಯ ಸಂಬಂಧವಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಈ ಇಲಾಖೆಯ ರೆವೆನ್ಯೂ 10 ಕೋಟಿ ಚಿಲ್ಲರೆ ರೂಪಾಯಿ ಇದೆ. ಪೂರ್ವದಿಂದ ಬಂದಂಥ ಕಾಡುಗಳನ್ನು ಕಡಿದು ಮಾರಿದ್ದರಿಂದ 10 ಲಕ್ಷ ರೂಪಾಯಿಗಳಷ್ಟು ಆದಾಯವನ್ನು ತೋರಿಸುತ್ತಿದ್ದಾರೆ. ಇವರು ಕಡಿದಂತಹ ಕಾಡನ್ನು ಎಷ್ಟು ರಿಇಂಬರ್ಸ್ ಮಾಡಿದ್ದಾರೆಂಬುದನ್ನು ತಿಳಿಸಬೇಕು. ಹಿಂದೆ ನಮ್ಮ ದೇಶದಲ್ಲಿ ಎಷ್ಟು ಕಾಡು ಇತ್ತು, ಇವತ್ತು ಎಷ್ಟು ಕಾಡು ಇದೆ ಎಂಬುದನ್ನು ತಿಳಿಸಬೇಕು. ಇವತ್ತಿನ ದಿವಸ ಎಷ್ಟು ಕಾಡು ನಮ್ಮಲ್ಲಿತ್ತು, ಈಗ ಎಷ್ಟು ಕಡಿಮೆಯಾಗಿದೆ ಎಂಬುವನ್ನು ನಾವು ತಿಳಿಯಬೇಕಾಗಿದೆ. ಅರಣ್ಯದಲ್ಲಿರತಕ್ಕ ಟಿಂಬರನ್ನು ಮಾರಿರತಕ್ಕದ್ದರಲ್ಲಿ ಈಗ ಇವರು ಎಷ್ಟು ಕಾಡನ್ನು ರೆಸ್ಟೋರ್ ಮಾಡಿದ್ದಾರೆ, ಅದರಲ್ಲಿ ಪ್ರೊಪೋರ್‌ಷನ್ ಏನಿದೆಯೆಂಬುದನ್ನು ಕೇಳುತ್ತೇನೆ.

ಇನ್ನೂ ವುಡ್ ಪ್ರಿಜರ್‌ವೇಷನ್ wood preseravation ಪ್ಲಾಂಟಿಗೋಸ್ಕರ 58 ಲಕ್ಷ ರೂಪಾಯಿಗಳ ಖರ್ಚನ್ನು ತೋರಿಸಿದ್ದಾರೆ. 60 ಲಕ್ಷ ರೂಪಾಯಿಗಳ ಉತ್ಪತ್ತಿಯನ್ನು ತೋರಿಸಿದ್ದಾರೆ. ಹಾಗೆಯೇ ತುಮಕೂರಿನಲ್ಲಿ ಅಂತಹ ಒಂದು ಪ್ಲಾಂಟ್‌ನ್ನು ನಡೆಸುತ್ತೇವೆಂದು 16 ಸಾವಿರ ರೂಪಾಯಿಗಳ ಖರ್ಚನ್ನು ಮತ್ತು 20 ಸಾವಿರ ರೂಪಾಯಿಗಳ ಉತ್ಪತ್ತಿಯನ್ನೂ ತೋರಿಸುತ್ತಿದ್ದಾರೆ. ಅದರಿಂದ ಸಾಕದಷ್ಟು ಪ್ರಗತಿಪರ ಉತ್ಪತ್ತಿಯೇನೋ ಇಲ್ಲ. ಸರ್ಕಾರ ಹೆಚ್ಚಿಗೆ ನಷ್ಟದಲ್ಲಿ ಇದನ್ನು ನಡೆಸುತ್ತಿದ್ದಾರೆ. ಇದು ಈಗ ಅನಾವಶ್ಯಕ.

ಒಟ್ಟಿನಲ್ಲಿ ಈಗ ಅಫಾರೆಸ್ಟೇಷನ್ ಏನು ಆಗುತ್ತಿದೆಯೋ ಅವರ ಕೆಲಸ ಅಷ್ಟು ಪರಿಣಾಮಕಾರಿಯಾಗಿ ಆಗಿಲ್ಲ. ಈ ವರ್ಷ ಈ ಬಾಬಿಗೆ ಏನು ಮೊಬಲಗನ್ನು ಖರ್ಚುಮಾಡುತ್ತಾರೋ ಅದು ಅಷ್ಟು ಫಲಪ್ರದವಾಗಲಾರದೆಂದು ನಾನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri R. S. HEGDE (Honnavar).—I welcome all these demands. In my submission agriculture has made considerable expansion in the field of food and other agriculture products. When we speak of agriculture

(SRI R. S. HEGDE)

it has to be seen from three angles of vision. In my submission any planning of agriculture is sometimes not so easy of execution and implementation looking into the very nature of the subject the success of which has to depend upon the vicissitudes of nature. When I say that we have to see agriculture from three different points of view I mean a long range plan *i.e.*, guaranteeing assured water supply in places where there is scant rainfall and in times of failures of rainfall. Secondly to meet immediate requirements of the agriculturists in accelerating the progress of minor irrigation and thirdly arrangsments to meet the crisis on account of failure of rainfall as it has happened this year. Irrigation being an important aspect of agriculture production, one has to see how far the Government has tried to fulfill its obligations. In all countries of the world attempts have been made to plan agriculture in an authoritative way. But the results it is stated have been very very disappointing. Nevertheless our Government, in my submission, has done well in the advancement of agriculture and in trying to fulfill irrigational obligations in the budgetary framework of the State. It is stated that there is only 8 per cent of irrigational facilities in the State. But I am sure the Government is bent to turn the corner for more and more irrigation and there is less concentration on the productiou of power. Power, of course, is essential for the purpose of lighting and for the purpose of industries and also for irrigation. When all the units in the Sharavathi project are commissioned, I am sure there will be ample power. The Minister has stated that the thought with the Government is to concentrate more on irrigation and less on the manufacture of power. Even in the field of minor irrigation the target is exceeded. it may be a particular taluk gets more and a particular taluk gets less. But if we take the overall picture as far as minor irrigation facilities and also supply of pumpsets, taking up of new wells and desilting of tanks, satisfactory progress has been made as is revealed in the book called Review of Government Departments. Even to meet this year's drought I am sure the Government has made supreme efforts in the matter of supply of pumpsets. If there is so much demand on the companies for these pumpsets, it was not possible for the companies to supply them with all the accessories. So much so, the Department had to issue orders even to go for these pumps which are not approved by the Stores Purchase Committee. The two ministers toured the entire State with all the Governmental staff, engineering staff staff pertaining to Agriculture and Revenue Departments and discussed with the Taluk Boards, Presidents with a view to take certain decisions on the spot, to give immediate relief to save the existing crop and to boost up rabi crop. As far as North Canara is concerned I vouchsafe and say we have been very well benefited by the supply of pumpsets. Nearly 150 diesel sets have been supplied and they have been working well. I do not know if spare parts could not be supplied by a particular company from which pumpsets were

ordered. But the Government could not be blamed because those spare parts were in short supply. The Government cannot be expected to do mesmerism to manufacture pumpsets overnight. There was shortage in the companies and therefore there was delay in the supply of certain accessories. Taking into consideration the peculiar circumstance under which the Government institutions are placed, I do not know what better could have been ordered and who else could have done better. In advanced countries the following practices for the agriculture production is pursued.

(1) High degree of mechanisation to reduce the cost of agriculture production ;

(2) High standard of livestock ;

(3) Genctic improvement of crops by the supply of dood seeds.

(4) To give a support price to agriculturists to make agriculture a profitable industry.

(5) To reduce the pressure on land.

(6) Assured water supply in places of scant rainfall or failur of rainfall in devising and executing long range plans of irrigation.

(7) In devising and concentrating on Minor irrigation to keep food production at the normal level and to supply irrigation pumpsets.

(8) Arrangements for irrigation in case of emer failure of usual rains as it has happened this year.

(9) Soil conservation.

(10) Sheer good husbandory of the farmer.

These are seven practices that have been followed in England, America and also in U. S. S. R. and China. This information is available in a book called Fifteen Years of Agriculture by Iyengar available in the library. How far the Government has been able to achieve that in the framework of the seven points I have laid before the House ? It is stated in the Revew of Government Departments that there are 22 tractors, 66 bulldozers owned by the Government and 270 tractors has been supplied by the Department on hire purchase system. When we think of mechanisation of agriculture, it must be remembered that the condition of agriculture holding in the State, as far as we are concerned, is only fragments. In England the holding is more than 50 per cent are owned by land owners where the area is more than 1,000 acres. So also in America. But in India and especially in Mysore persons who have more than 100 acres is perhaps 5 to 10 per cent. So looking to the nature of fragmentation of land we have to think how far mechanisation can be successful. On the other day a suggestion was made that if mechanisation is put in, what about the labour, and there will be unemployment of labour and Government has to rehabilitate labour. So, there is a contradiction, and for mechanisation certain

(SRI R. S. HEGDE)

pre-conditions are necessary which are absent in the State. Of course, the State Government has been enacting the Fragmentation and Consolidation of Holdings Act. As far as Soil Conservation is concerned, Government has taken certain action.

With regard to support prices, in the United States of America and other countries a good price is given as an incentive to farmers, a economic price is given. But, as far as the State and the country is concerned, the producer thinks that the price he receives is not remunerative while the foodgrains are too high to the consumer. In Mysore, the highest price that is given to the producer is Rs. 45 *plus* Rs. 5 bonus, whereas the price is Rs. 97 to the consumer. So, there is a disparity and it should go. The producer should be given more. The price that is offered to him must be an economic and profitable price. I submit that instead of having controls, the price must find its place in the open market and there should not be much disparity between the cost of production and market price. In our State there is too much disparity in the price which should not be there.

Under agriculture, I would like to make the following suggestions -

(1) All the Extension officers in the blocks must be agriculture oriented, so that their services can be requisitioned in times of emergency ;

(2) There must be a Plant protection Squad, because whenever there is a chronic disease, mass spraying is necessary. Instead of arranging spraying on subsidy basis, let us have a Squad attached to every Revenue Sub-division so that their services can be requisitioned in times of emergency.

As far as Forests and Fisheries are concerned, I have got a word to say. With regard to forests, our revenue has increased from Rs. 6 crores to Rs. 10 crores and this year it is stated that it will be a little over Rs. 10 crores. Of course, there is afforstation. In Germany, the policy is, if one tree is cut, six trees are planted. I think the very same practice is followed here also, because a large number of our officers are trained in Germany.

As far as Fisheries are concerned, I do not attach so much importance on the giving of mechanised launches, but I stress upon the consciousness that has to be created amongst fishermen. Five years back, it was a problem as to how to distribute launches. Now, there is so much of demand for admission for training. After having trained, there is demand for launches. So, the 'will' is most important, just as we say, 'wherever there is a will there is a way'.

Finally, about five years back, it was a problem to distribute fertilisers. Today, there is so much of demand for fertilisers. It is due to the education that the Government is giving to the agriculturists.

Thank you, Sir.

†ಶ್ರೀ ಸಂಜೀವನಾಥ ಐಕಳ (ಸುರತ್‌ಕಲ್).—ಮಾನ್ಯ ಸಭಾಧ್ಯಕ್ಷರೇ, ಜಗತ್ತಿನ ಅಂತರರಾಷ್ಟ್ರೀಯ ಅಕ್ಕಿಯ ಉತ್ಪತ್ತಿಯ ವರ್ಷವನ್ನು ಈ ವರ್ಷ ಆಚರಿಸುತ್ತಿರುವಾಗ ನಮ್ಮ ಮೈಸೂರು ಸಂಸ್ಥಾನದಲ್ಲಿ ಅಕ್ಕಿ ಇಲ್ಲದೆ, ಅನ್ನ ಆಹಾರ ಇಲ್ಲದೆ ಜನ ಉಪವಾಸ ಬಿದ್ದು ಸಾಯುವ ಪರಿಸ್ಥಿತಿ ಬಂದಿದೆ. ಇದು ನಮ್ಮ ವ್ಯವಸಾಯ ಇಲಾಖೆಯ ಧೋರಣೆ ಅಥವಾ ಸಮರ್ಥತೆಯನ್ನು ಪ್ರತಿಬಿಂಬಿಸುತ್ತದೆ. ವ್ಯವಸಾಯ ಇಲಾಖೆ ಯೋಗ್ಯ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರೆ ಬಹುಶಃ 18 ವರ್ಷಗಳ ಅವಧಿಯಲ್ಲಿ ನಮ್ಮ ದೇಶದ ಜನತೆಗೆ ಬೇಕಾದ ಆಹಾರ ಧಾನ್ಯವನ್ನು ಉತ್ಪತ್ತಿ ಮಾಡುವಂತಹ ಒಂದು ಅವಕಾಶ ಇತ್ತು. ಮೈಸೂರು ಸಂಸ್ಥಾನ ಸಮೃದ್ಧವಾದ ರಾಜ್ಯ. ನೀರಿಗೆ ಅವಕಾಶವಿದೆ, ನದಿಗಳು ಬೇಕಾದಷ್ಟು ಇವೆ, ಫಲವತ್ತಾದ ಭೂಮಿ ಇದೆ. ಆದರೆ ಅವುಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಳವಡಿಸಿಕೊಳ್ಳುವ ಶಕ್ತಿ ಮತ್ತು ಜಾಣತನ ಮಂತ್ರಿಗಳಲ್ಲಾಗಲೀ ಅಧಿಕಾರಿಗಳಲ್ಲಾಗಲೀ ಇಲ್ಲದೆ ಇರುವುದರಿಂದ ಜನತೆಗೆ ಒಂದು ಹೊಸ ದಾರಿಯನ್ನು ತೋರಿಸುವುದಕ್ಕೆ ಸಾಧ್ಯವಿಲ್ಲವಾಗಿದೆ. ಮೊದಲನೆಯ, ಎರಡನೆಯ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಗಳನ್ನು ತ್ವರಿತವಾಗಿ ಕಾರ್ಯಗತ ಮಾಡುವುದರಲ್ಲಿ ನಮ್ಮ ಸರ್ಕಾರ ಅಸಮರ್ಥವಾಗಿದೆ. ಈಗ ನಮ್ಮ ರಾಜ್ಯದಲ್ಲಿ ತೀವ್ರತರ ಬೇಸಾಯ ಯೋಜನೆ ಎರಡು ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿಯೂ ಸಹ ತೀವ್ರತರ ಬೇಸಾಯ ಯೋಜನೆಯನ್ನು ಜಾರಿಗೆ ತರಬೇಕಾಗಿತ್ತು. ಈ ತೀವ್ರತರ ಬೇಸಾಯ ಯೋಜನೆಗಳನ್ನು ಜಾರಿಗೆ ತಂದಿರುವ ಪ್ರದೇಶಗಳಲ್ಲಿ ಅದಷ್ಟು ಬೇಗ ತೀವ್ರತರ ಬೇಸಾಯದ ಕಾರ್ಯಗಳನ್ನು ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಪ್ರಾರಂಭವಾಗಬೇಕಾಗಿದ್ದ ಯಾವ ಫೀಲ್ಡ್ ಪ್ರಿಪರೇಷನ್ ಕೆಲಸಗಳೂ ಆಗಿಲ್ಲ. ಅದಕ್ಕೆ ಕಾರಣ ಯೋಜನೆಗಳು ಪ್ರಾರಂಭವಾಗುವ ವರ್ಷದಲ್ಲಿ ಯೋಜನೆಯಲ್ಲಿರತಕ್ಕ ಕಾರ್ಯಕ್ರಮಗಳಲ್ಲಿ ಅಡ್ಡಿ ಆತಂಕಗಳು ಬೇಕಾದಷ್ಟು ಬರುತ್ತವೆ. ಏತಕ್ಕೆಂದರೆ, ಸರ್ಕಾರದವರು ಈ ಯೋಜನೆಗಳನ್ನು ತಯಾರು ಮಾಡುವಾಗ ಆಲೋಚನೆ ಮಾಡಿ ಅದಕ್ಕೆ ಬೇಕಾದ ಅನುಕೂಲತೆಗಳನ್ನು ಏರ್ಪಾಡು ಮಾಡಿಲ್ಲ. ಈಗ ಮುಖ್ಯವಾಗಿ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಪವರ್ ಟಿಲ್ಲರ್ಸ್ ಅನ್ನು ಜನಗಳು ಹೆಚ್ಚಿಗೆ ಅಪೇಕ್ಷಿಸುತ್ತಾರೆ. ಸಾವಿರಾರು ಪವರ್ ಟಿಲ್ಲರುಗಳನ್ನು ತೆಗೆದುಕೊಳ್ಳುವ ರೈತರು ನಮ್ಮಲ್ಲಿ ಇದ್ದಾರೆ. ಆದ್ದರಿಂದ ಅಲ್ಲಿಗೆ 70-80 ಪವರ್ ಟಿಲ್ಲರುಗಳನ್ನು ಕೊಟ್ಟರೆ ಸಾಕಾಗುವುದಿಲ್ಲ. ಅದನ್ನು ಹೆಚ್ಚು ಮಾಡಬೇಕು. ಪವರ್ ಟಿಲ್ಲರುಗಳಿಗೆ ಸೇಲ್ಸ್ ಟ್ಯಾಕ್ಸನ್ನು ತೆಗೆದು ಹಾಕಬೇಕೆಂದು ನನ್ನ ಅಭಿಪ್ರಾಯ.

ಆಹಾರವನ್ನು ಉತ್ಪತ್ತಿ ಮಾಡತಕ್ಕ ಯೋಜನೆಗಳಲ್ಲಿ ಸರ್ಕಾರದವರು ಆದಷ್ಟು ಮಟ್ಟಿಗೆ ರೈತರಿಗೆ ಸೌಲಭ್ಯವನ್ನು ಒದಗಿಸಿಕೊಡತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅದನ್ನು ಬಿಟ್ಟು ಕೃಷಿ ಉತ್ಪಾದನಾ ಡೆವಲಪ್‌ಮೆಂಟ್ ಬೋರ್ಡುಗಳು, ಕೃಷಿ ವಿಚಾರಣಾ ಗೋಷ್ಠಿಗಳು, ಸಿಟಿ ಕ್ಯಾಂಪುಗಳು, ಸೆಮಿನಾರಗಳು, ಶಿಬಿರಗಳು ಮುಂತಾದುವುಗಳನ್ನು ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಅವುಗಳಿಂದ ಆಹಾರ ಉತ್ಪಾದನೆಯನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇಂಥಾ ಒಂದು ಅಭಾವ ಪರಿಸ್ಥಿತಿ ದೇಶದಲ್ಲಿರುವಾಗ ಅಂಥಾ ವಿಚಾರಣಾ ಗೋಷ್ಠಿಗಳನ್ನು, ಶಿಬಿರಗಳನ್ನು, ಸೆಮಿನಾರಗಳನ್ನು ನಡೆಸುವ ಅಗತ್ಯ ಇಲ್ಲ. ಅವುಗಳಿಗೆ ಹಣವನ್ನು ಖರ್ಚು ಮಾಡುವುದರಿಂದ ಯಾವ ರೀತಿಯ ಫಲವೂ ನಮಗೆ ದೊರೆಯುವುದಿಲ್ಲ. ಆದಕಾರಣ ಅವುಗಳಿಗೆ ಹಣವನ್ನು ಖರ್ಚು ಮಾಡುವುದನ್ನು ಕಡಿಮೆ ಮಾಡಬೇಕು. ವ್ಯವಸಾಯ ರಂಗದ ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು ಮತ್ತು ಫಲಕಾರಿಯಾದಂತಹ ವ್ಯವಸಾಯದ ಕೆಲಸ ಕಾರ್ಯಗಳಿಗೆ ಸರ್ಕಾರದವರು ಹೆಚ್ಚಿಗೆ ಗಮನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

6-30 P.M.

ಇನ್ನು ಮೀನು ವ್ಯವಸಾಯ ಕುರಿತು ಹೇಳುವುದಾದರೆ, ಬಹುಶಃ ನಮ್ಮ ಎರಡು ಜಿಲ್ಲೆಗಳ ಬಗ್ಗೆ ಸಾಕಷ್ಟು ಪ್ರಗತಿಯೇನೋ ಆಗುತ್ತಿದೆ. ಅದಕ್ಕಾಗಿ ನಾನು ಮೀನುಗಾರಿಕೆ ಮಂತ್ರಿಗಳನ್ನು ಶ್ಲಾಘಿಸುತ್ತೇನೆ. ಅವರು ಈ ವಿಚಾರದಲ್ಲಿ ಸ್ವಲ್ಪ ಕೆಲಸ ಮಾಡುವ ಮನಸ್ಸಿನಲ್ಲಿದ್ದಾರೆ. ಮತ್ತು ಸ್ವಲ್ಪ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಆದರೂ ಈಗ ಆಗಿರುವ ಪ್ರಗತಿ ಸಾಲುವುದಿಲ್ಲ. ಇನ್ನೂ ಹೆಚ್ಚು ಪ್ರಗತಿಯಾಗಬೇಕಾಗಿದೆ. ನಮ್ಮಲ್ಲಿ ಸಿಗುವ ಮೀನನ್ನು ಹೆಚ್ಚು ಸಂಖ್ಯೆಯಲ್ಲಿ ಪಡೆದು ಅದನ್ನು ಜನ ಉಪಯೋಗಿಸಿದರೆ ಮತ್ತೂ ಒಳ್ಳೆಯದು. ಬಹುಶಃ ಜನ ಹೆಚ್ಚು ಹೆಚ್ಚಾಗಿ ಮೀನು ತಿಂದರೆ ಅಕ್ಕಿ ಮುಂತಾದ ಇತರ ಆಹಾರ ಪದಾರ್ಥಗಳನ್ನು ಉಪಯೋಗಿಸುವುದು ಕಡಿಮೆಯಾಗುತ್ತದೆ. ಮೀನು ಬಹಳ ಒಳ್ಳೆಯದು. ಇದೇನು ಮಾಂಸಾಹಾರವಲ್ಲ. ಇತರ ತರಕಾರಿಗಳಂತೆ ಇದೂ ಒಂದು ತರಕಾರಿ ಎಂದು ಉಪಯೋಗಿಸಬಹುದು. ಎಷ್ಟು ಬೇಕಾದರೂ ತಿನ್ನಬಹುದು. ನಮ್ಮ ಭಾಗದಲ್ಲಿರುವ ಜನ ಮೀನು ತಿನ್ನುತ್ತಿರುವುದರಿಂದ ಇವರು ಬಹಳ ಚುರುಕಾಗಿ ಕೆಲಸ ಮಾಡುವರು ಎಂದು ಒಂದು

(ಶ್ರೀ [illegible])

ಸಲ ಮಾನ್ಯ ಮುಖ್ಯ ಮಂತ್ರಿಗಳು ನಮ್ಮಲ್ಲಿ ಬಂದಿದ್ದಾಗ ಹೇಳಿದರು. ಅವರು ಮಂಗಳೂರು ಜನ ಒಳ್ಳೆಯವರು, ಬಹಳ ಬುದ್ಧಿವಂತರು, ಮೀನು ತಿನ್ನುವುದರಿಂದ ಅವರು ಬಹಳ ಚುರುಕಾಗಿದ್ದಾರೆ. ಯೋಗ್ಯರೂ ಆಗಿದ್ದಾರೆ ಎಂದು ಹೇಳಿದರು. ಅದೇರೀತಿ ಮೀನುಗಳನ್ನು ಇಲ್ಲಿರುವ ಈ ಭಾಗದ ಜನರೂ ಉಪಯೋಗಿಸಿ ಯೋಗ್ಯರೂ ಮತ್ತು ಚುರುಕಾದವರೂ ಆಗುವಂತೆ ಮಾಡಿದರೆ ವಿಧಾನ ಸೌಧದ ಕೆಲಸವೂ ಬೇಗನೆ ಆಗಬಹುದು. ಆರೀತಿ ಆಗಲಿ. ಮೀನು ತಿನ್ನುವುದರಿಂದ ಬುದ್ಧಿಯೂ ಹೆಚ್ಚಾಗುತ್ತದೆ. ಅದಷ್ಟು ಹೆಚ್ಚಾಗಿ ನಮ್ಮ ಭಾಗದಿಂದ ಮೀನುಗಳನ್ನು ಬೆಂಗಳೂರಿಗೂ ಒಂದು ಇಲ್ಲೂ ಎಲ್ಲರೂ ತಿನ್ನುವ ವ್ಯವಸ್ಥೆಮಾಡಬೇಕು. ಅಲ್ಲದೆ ಮೀನನ್ನು ಚಾಕಲೇಟುಗಳಲ್ಲಿ ವಾಸನೆ ಇಲ್ಲದಂತೆ ಉಪಯೋಗಿಸುತ್ತಾರೆ. ಜಪಾನು ಸರಕಾರದವರು ಮೀನನ್ನು ಹಾಗೂ ಮೀನುಗಳಿಂದ ಪದಾರ್ಥಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಮಾಡಿದ್ದಾರೆ. ಅಲ್ಲದೆ ಔಷಧಿ ರೀತಿಯಲ್ಲೂ ಮೀನನ್ನು ಉಪಯೋಗಿಸುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಿನ ಪ್ರಚಾರ ಮಾಡುವುದು ಅಗತ್ಯ. ಹೆಚ್ಚು ಹೆಚ್ಚಾಗಿ ಮೀನುಗಳನ್ನು ಹಿಡಿದು ಅದನ್ನು ಸರಿಯಾಗಿ ಶೇಖರಿಸಿಡಲು ಟಿನ್ನುಗಳನ್ನು ಒದಗಿಸಿ ಕೊಡಬೇಕು. ಎರಡು ವರ್ಷಗಳಿಂದಲೂ ಟಿನ್ನುಗಳ ಕೊರತೆ ಇದೆ ಎಂದು ಕೇಳುತ್ತಿದ್ದರೂ ಇನ್ನೂ ಒದಗಿಸಲು ಆಗಲಿಲ್ಲ. ಈಗಲಾದರೂ ಹೆಚ್ಚು ಟಿನ್ನುಗಳ ಪೆಟ್ಟಿಗೆಗಳನ್ನು ಒದಗಿಸಿ ಕೊಡಬೇಕು, ಅದೇ ರೀತಿಯಲ್ಲಿ ಇಲ್ಲಿಂದ ಮೀನಿನ ಮರಿಗಳನ್ನು ಒಳನಾಡಿಗೂ ಕಳುಹಿಸಬಹುದು. ಅಲ್ಲಿ ಒಂದು ಎಕರೆ ಜಮೀನಿನಲ್ಲಿ ಮೀನು ಬೇಸಾಯಮಾಡಿದರೆ ವರ್ಷಕ್ಕೆ ಒಂದು ಸಾವಿರದಷ್ಟು ಉತ್ಪಾದನೆ ಮಾಡಲಿಕ್ಕೆ ಅವಕಾಶವಾಗುತ್ತದೆ ವ ತ್ತು ಇದೊಂದು ಲಾಭದಾಯಕವಾದ ಕೈಗಾರಿಕೆಯಾಗಿಯೂ ಮಾಡಿಕೊಂಡಿದ್ದಾರೆ. ಈಗ ಒಳನಾಡಿನಲ್ಲಿ ಮೀನುಗಾರಿಕೆ ಯೋಜನೆಗೆ ಸಾಕಷ್ಟು ಪ್ರಧಾನ್ಯತೆ ಯನ್ನು ಕೊಟ್ಟಿಲ್ಲ. ನಮ್ಮಲ್ಲಿ ಅನೇಕ ಸಣ್ಣ ಹಾಗೂ ದೊಡ್ಡ ದೊಡ್ಡ ಕೆರೆಗಳೂ ಇವೆ. ಅಲ್ಲದೆ ನಮ್ಮ ಭಾಗದಲ್ಲಿರುವ ರಾಮಸಮುದ್ರದಲ್ಲಿ ರೀಸರ್ಚ್ ಸ್ಟೇಷನ್ ಎಂದು ಮಾಡಿದ್ದಾರೆ. ಇಲ್ಲಿ ಮೀನು ಸಾಕಾಣಿಕೆ ಬಗ್ಗೆ ಪ್ರಯೋಗ ನಡೆಸಬೇಕೆಂದು ಕೇಂದ್ರ ಸರಕಾರದ ಅಧಿಕಾರಿಗಳು ಇದರಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಬೇಕಾಗುವ ಸಹಾಯಗಳನ್ನು ಒದಗಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಅರಣ್ಯದ ವಿಚಾರದಲ್ಲಿ ಹೇಳುವುದಾದರೆ, ಕೆಲವು ಸದಸ್ಯರು ಆಗಲೇ ಹೇಳಿದಂತೆ ಮುಖ್ಯವಾಗಿ ನಮ್ಮಲ್ಲಿ ಬೆಳೆದಿರುವ ಒಳ್ಳೆ ಮರಗಳನ್ನು ಕಡಿದು ಸಾಗಾಣಿಕೆ ಮಾಡಿ ನಷ್ಟ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಮರಗಳನ್ನು ಕಡಿದು ಹಾಳು ಮಾಡುತ್ತಿದ್ದಾರೆ. ಬೆಲೆ ಬಾಳುವ ಮರಗಳನ್ನು ಕಡಿದು ಇಲ್ಲಿ ಸುಡುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ಇನ್ನು ಮುಂದಾದರೂ ಆಗದಂತೆ ತಡೆ ಮಾಡಬೇಕು. ಒಳನಾಡಿನಲ್ಲಿ ಮೀನುಗಾರಿಕೆಯನ್ನು ಹೆಚ್ಚು ಮಾಡಲು ಏನಾದರೂ ಒಂದು ಉಪಾಯವನ್ನು ಮಾಡಬೇಕು. ಕೇರಳದಿಂದ ವಲಸೆ ಬಂದಿರುವ ಜನರು ಕಾಡಿನಲ್ಲಿರುವ ಮರ ಗಳನ್ನು ಕಡಿದು ಅಲ್ಲಿರುವ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಅವರನ್ನು ಬಿಡಿಸ ಬೇಕೆಂದು ಮಾಡಿದ್ದಾರೆ. ಹಾಗೆ ಬಿಡಿಸಿದರೆ ಅವರಿಗೆ ಬೇರೆ ಸ್ಥಳಗಳನ್ನು ಕೊಡಲು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇವೆ. ಹಾರ್ಟಿಕಲ್‌ಚರ್ ಇಲಾಖೆ ಬಗ್ಗೆ ಹೇಳಬೇಕಾದರೆ ಬಹಳ ಹೆದರಿಕೆಯಾಗುತ್ತದೆ. ಈ ಇಲಾಖೆಯವರು ಇನ್ನೂ ಹೆಚ್ಚು ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಎಲ್ಲಾ ಕಡೆಗಳಲ್ಲೂ ಹೆಚ್ಚು ಹೆಚ್ಚು ಹಣ್ಣು ತರಕಾರಿಗಳನ್ನು ಬೆಳೆಯಲು ಪ್ರಯತ್ನ ಮಾಡಬೇಕು. Soft fruitsಗಳು ಎಂದರೆ ಪಪಾಯಿ, ಗೇರುಬೀಜ, ಪೈನ್ ಆಪಲ್ ಇವುಗಳನ್ನು ನಮ್ಮ ಜಿಲ್ಲೆಯಲ್ಲಿ ಬೆಳೆಸಲು ನಿಗಾ ಕೊಡಬೇಕು. ಮತ್ತು ಹಾರ್ಟಿಕಲ್‌ಚರ್ ಇಲಾಖೆಗೆ ಇನ್ನೂ ಹೆಚ್ಚು ಪ್ರೋತ್ಸಾಹ ಕೊಡಬೇಕು.

ಇನ್ನು ಎಲೆಕ್ಟ್ರಿಸಿಟಿ ಬೋರ್ಡಿನವರು ನಮ್ಮ ಭಾಗದಲ್ಲಿ ತೆಗೆದುಕೊಂಡ ಪೋಲ್‌ಗಳಿಗೆ ಎಂದರೆ ಮರದ ಕಂಬಗಳ ದುಡ್ಡನ್ನು ಕೊಟ್ಟಿಲ್ಲ ಎಂದು ಕೇಳುತ್ತೇನೆ. ಇದರ ಬಗ್ಗೆ ಪರಿಶೀಲನೆ ಮಾಡಿ ಸಾಧ್ಯವಾಗುವುದಿದ್ದರೆ ಕೊಡಿಸಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಹಿ. ಎನ್. ಪಾಟೀಲ್ (ತಾಳಿಕೋಟೆ).—ಸ್ವಾಮಿ, ಇವೊತ್ತಿನ ದಿವಸ ನಮ್ಮ ಮುಂದೆ ಇಟ್ಟಿರುವ ಅಗ್ರಿಕಲ್‌ಚರ್ ಹಾಗೂ ಫಾರೆಸ್ಟ್ ಡಿಮ್ಯಾಂಡುಗಳನ್ನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಮಾಡುವುದಕ್ಕೆ ಇಚ್ಛಿಸುತ್ತೇನೆ.

ಮೊದಲು ನಮ್ಮ ದೇಶದೊಳಗೆ ಒಕ್ಕಲುತನ ನೆಟ್ಟಗಿದ್ದರೆ ನಾವು ಇವೊತ್ತಿನ ದಿವಸ ಆಹಾರ ಧಾನ್ಯದ ಕೊರತೆ ನೀಗಲಿಕ್ಕೆ ಸಾಧ್ಯವಾಗುತ್ತದೆ. ನಮ್ಮಲ್ಲಿ ಬೇಕಾದಷ್ಟು ಜಮೀನಿದ್ದರೂ ಅದಷ್ಟು ಇರಿಗೇಷನ್ ಫೆಸಿಲಿಟೀಸ್‌ಗಳು ಇದ್ದರೂ ಇವೊತ್ತಿನ ದಿನ ಇದನ್ನು ಅಭಿವೃದ್ಧಿ ಮಾಡಲಿಕ್ಕೆ ಆಗದೇ

ಇರುವುದು ಬಹಳ ಶೋಚನೀಯವಾದ ಸಂಗತಿ ಎಂದು ಇಲ್ಲಿ ಹೇಳಬೇಕಾಗಿದೆ. ಮುಖ್ಯವಾಗಿ ಒಕ್ಕಲುತನದಲ್ಲಿ ಉತ್ಪಾದನೆ ಮಾಡಲು ನಮಗೆ ನೀರು ಮುಖ್ಯವಾಗಿ ಬೇಕಾಗುತ್ತದೆ. ಶೇಕಡ 8.5 ರಷ್ಟು ಮಾತ್ರ ನೀರಾವರಿ ಎಂದು ಈಗ ಇದೆ. ಇದರಲ್ಲಿ ಸುಮಾರು 25 ಲಕ್ಷ ಎಕರೆಗೆ ನೀರಾವರಿ ಮಾಡಲು ಅನುಕೂಲ ಸಿಗುತ್ತದೆ. ಮುಂದಕ್ಕೆ ಶೇಕಡಾ 25 ರಷ್ಟು ಭಾಗಕ್ಕೆ ನೀರಿನ ಸಹಾಯ ಒದಗಿಸಿದರೆ ಅದರಿಂದ ಸುಮಾರು 75 ಲಕ್ಷ ಎಕರೆಯಷ್ಟು ಭೂಮಿಗೆ ನೀರಾವರಿ ಸೌಕರ್ಯ ಸಿಕ್ಕಿ ಹೆಚ್ಚು ಬೆಳೆ ಬೆಳೆಯಲು ಸಾಧ್ಯವಾಗುತ್ತದೆ. ಇವೊತ್ತಿನ ದಿವಸ ದೊಡ್ಡ ದೊಡ್ಡ ಯೋಜನೆಗಳು ಇತ್ಯರ್ಥವಾಗದೆ ಇರುವುದರಿಂದ ನೀರಾವರಿಯಲ್ಲಿ ಹಿಂದೆ ಬಿದ್ದಿದ್ದೇವೆ. ಈ ದೆಸೆಯಿಂದ ನಾವು ಕೇಳಿಕೊಳ್ಳುವುದು ನಮ್ಮ ಭಾಗದಲ್ಲಿರುವ ಅಪ್ಪರ್ ಕೃಷ್ಣಾ ಯೋಜನೆ ಈಗಲಾದರೂ ಬೇಗನೆ ಬರಲಿ ಎಂದು ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು ಇದನ್ನೂ ಬೇಗನೆ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದ ನಮ್ಮಲ್ಲಿ ಸುಮಾರು 75 ಲಕ್ಷ ಎಕರೆಯಲ್ಲಿ ನೀರಾವರಿ ಮಾಡಲು ಅನುಕೂಲವಾದೀತು. ಇದರಿಂದ ಒಕ್ಕಲುತನ ಮಾಡುವವರಿಗೂ ಸಹಾಯವಾಗುತ್ತದೆ. ನಮಗೆ ಅಭಾವದ ಕಾಲದಲ್ಲಿ ಈಗ ಬೇಕಾಗಿರುವುದು ಬಂಡಿಂಗ್ ಕೆಲಸಗಳೂ ಜಾಸ್ತಿಯಾಗಬೇಕು. ಬಂಡಿಂಗ್‌ನಲ್ಲಿ ಕೆಲಸ ಮಾಡುವ ಕೂಲಿ ಜನಗೆ ಕೂಲಿ ಕಡಿಮೆ ಕೊಟ್ಟರೆ ಜನ ಬರುವುದಿಲ್ಲ ಎಂದು ಇಲ್ಲಿ ಮಾತನಾಡುತ್ತ ನಿನ್ನೆ ಮಾನ್ಯ ಸದಸ್ಯರಾದ ಶ್ರೀಮತಿ ಬಸವರಾಜೇಶ್ವರಿಯವರು ಹೇಳಿದರು. ಇವೊತ್ತಿನ ದಿನ ಕೂಲಿ ಜನಕ್ಕೆ ಕೊಡುವ ಕೂಲಿ ಹೆಚ್ಚು ಮಾಡಿದರೆ ಅದರ ಹೆಚ್ಚು ಭಾರ ಬಡ ರೈತನ ಮೇಲೇ ಬೀಳುವುದು. ಇದು ಬಹು ಕಷ್ಟವಾಗುತ್ತದೆ. ಎಕರೇಜು ಬೇಸಿಸ್ ಮೇಲೆ ಕಲ್ಟಿವೇಷನ್ನು ಮಾಡುವಾಗ ಸುಮಾರು 50 ರಿಂದ 55 ರೂಪಾಯಿಗಳ ಹೆಚ್ಚುವರಿ ಹೊರೆಯೂ ಬಡ ರೈತರ ಮೇಲೆ ಬೀಳುತ್ತದೆ. ಈ ದೆಸೆಯಿಂದ ಕೂಲಿ ಹೆಚ್ಚು ಮಾಡಿದರೆ ಹೆಚ್ಚು ಭಾರ ರೈತನ ಮೇಲೇನೇ ಬೀಳುತ್ತದೆ. ವ್ಯವಸಾಯದಲ್ಲಿ ಇವೊತ್ತಿನ ದಿನ ರೈತಾಪಿ ಜನ ಕೆಲವು ಕಡೆ ಬಹಳ ದಿವಗಳಿಂದಲೂ ಬೇಸಾಯ ಮಾಡುತ್ತಿದ್ದರೂ ಅವರಿಗ್ನು ಲೀಗೈಸು ಮಾಡಿಲ್ಲ. ಇದರಿಂದ ಇವರು ಇನ್ನು ನೂರಾರು ವರ್ಷಕಾಲ ಕಾಯುವ ಪರಿಸ್ಥಿತಿ ಬರುತ್ತದೆ. ಇವರನ್ನೂ ನ್ಯಾಷನಲ್ ವೆಲ್‌ಫೇರ್ ಸ್ಕೀಂನಂತೆ ಗಣನೆಗೆ ತೆಗೆದುಕೊಂಡು ಸರಕಾರ ತಮ್ಮ ಕಡೆಯಿಂದಲೇ ರೈತರಿಗೆ ಭೂಮಿ ಕೊಡಿಸಿದರೆ ಒಕ್ಕಲುತನ ಮಾಡಿ ಹೆಚ್ಚು ಉತ್ಪತ್ತಿ ಮಾಡಲಿಕ್ಕೆ ಸಾಧ್ಯ. ರೈತ ಹೆಚ್ಚು ಭಾರ ಹೊರಲು ಆಗುವುದಿಲ್ಲ. ಇವೊತ್ತಿನ ದಿವಸ ಹೆಚ್ಚು ಉತ್ಪತ್ತಿಮಾಡಲು ರೈತನ ಆರ್ಥಿಕ ಸ್ಥಿತಿಯ ದೆಸೆಯಿಂದ ಆಗುತ್ತಿಲ್ಲ. ರೈತರು ಉಳಿಯಬೇಕಾದರೆ ಅವರಿಗೆ ಸರಕಾರ ಕೆಲವು ಕಡೆ ಮುಫತ್ತಾಗಿ ಭೂಮಿಯನ್ನು ಕೊಡಿಸಿಕೊಡಬೇಕೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಒಂದುವೇಳೆ ಅವರು ಮುಫತ್ತು ಮಾಡಿದರೆ ಸರಿಇಲ್ಲದೇ ಹೋದರೆ ಆಡ್ಮಿನಿಸ್ಟ್ರೇಟೀವ್ ಚಾರ್ಜಸ್‌ನ್ನು ಆದರೂ ಕಡಿಮೆಯಾಗಿ ಚಾರ್ಜ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಸರ್ಕಾರದವರು 2.8 ಲಕ್ಷ ಟನ್ ಗೊಬ್ಬರ ಕೊಟ್ಟಿದ್ದಾರೆ ಎಂದು ನಾವು ಕೇಳುತ್ತಾ ಇದ್ದೇವೆ. ಅದರಲ್ಲಿ ಸೆಂಟ್ರಲ್ ಗವರ್ನಮೆಂಟಿನವರು ನಮಗೆ ಸಪ್ಲೈ ಮಾಡಿದ್ದು 1.1. ಅಜಮಾಯಿಷಿ ಮಾಡಿದ್ದರಲ್ಲಿ 60 ಸಾವಿರ ಎಕರೆಗೆ ಅದನ್ನು ಸಪ್ಲೈಮಾಡಿದಂತಾಗುತ್ತದೆ. ನಮ್ಮಲ್ಲಿ ಇರುವುದು 25 ಸಾವಿರ ಎಕರೆ ನೀರಾವರಿ. ಉಳಿದ ಪ್ರದೇಶಗಳಿಗೆ ಸಾಲದ ಒಂದು ರೂಪದಲ್ಲಿ ಗೊಬ್ಬರವನ್ನು ಸಪ್ಲೈ ಮಾಡಬೇಕಾಗುತ್ತದೆ. ಅದಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರವನ್ನು ತರಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕೆಂದು ಸರ್ಕಾರದವರಲ್ಲಿ ವಿನಂತಿಸಿಕೊಳ್ಳುತ್ತಾ ಇದ್ದೇನೆ.

ನಮ್ಮ ಜಿಲ್ಲೆಯಲ್ಲಿ ದೋಣಿ ರಿವರ್ ಇದೆ. ಆ ಪ್ರದೇಶದಲ್ಲಿ ಸರಾಸರಿ 30 ಸಾವಿರ ಎಕರೆ ಸವಳು ಆಗಿದೆ. ಇದು ಬಹಳ ಉತ್ತಮವಾದ ಬ್ಲ್ಯಾಕ್ ಕಾಟನ್ ಸಾಯಿಲ್. ಇವತ್ತು ಅದು ಬಂಜರು ಆಗಿರುವುದರಿಂದ ಅದನ್ನು ರೆಕ್ಲಮೇಷನ್ ಮಾಡಬೇಕಾದ್ದು ಬಹಳ ಹೆಚ್ಚಿನ ಅವಶ್ಯಕತೆಯುಂಟಾಗಿದೆ ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರದವರು 16 ಲಕ್ಷ ರೂಪಾಯಿಗಳನ್ನು ಸಾಯಿಲ್ ರೆಕ್ಲಮೇಷನ್‌ಗಾಗಿ ಸಾಲವಾಗಿ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಅದನ್ನು ಎಕ್ಸ್‌ಪರಿಮೆಂಟ್ ಸಲುವಾಗಿ ಕೊಟ್ಟಿದ್ದಾರೆ ಎಂದು ಕೇಳುತ್ತಾ ಇದ್ದೇವೆ. ಅದನ್ನು ದೋಣ್ ರಿವರ್ ಪ್ರದೇಶದಲ್ಲಿ ಮಾಡಬೇಕೆಂದು ಹೇಳುತ್ತಾ ಇದ್ದೇನೆ. ಅಲ್ಲಿ ಬ್ರಿಡ್ಜ ಕಟ್ಟುವುದರಿಂದಾಗಲಿ ಅಥವಾ ಮತ್ತೇನಾದರೂ ಮಾಡುವುದರಿಂದಾಗಲಿ ಏನೂ ಪ್ರಯೋಜನವಾಗುವುದಿಲ್ಲ. ನನ್ನ ಸಲಹೆ ಏನೆಂದರೆ ದೋಣ್ ರಿವರ್ ಬಹಳ ಹೂತು ಹೋಗಿದೆ ಅದು ಭೂಮಿಯ ಲೆವಲ್‌ಗೆ ಬಂದಿದೆ. ಆದ್ದರಿಂದ ಆ ಪ್ರದೇಶದಲ್ಲಿ ತಗ್ಗು ತೋಡಿಸಿ ಅದನ್ನು ಆಳವಾಗಿ ಮಾಡಿಸಿದರೆ ಉಪ್ಪಿನ ಅಂಶ ಕಡಿಮೆಯಾಗುತ್ತದೆ. ಮತ್ತು ಅದರಿಂದಾಗಿ ಬೆಳೆ ಹತ್ತಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ತಮ್ಮ ಕೆಲಸ ಕಾರ್ಯಗಳಲ್ಲಿ ಇದನ್ನು ಸೇರಿಸಿಕೊಂಡು ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಅಂಡರ್‌ಗ್ರೌಂಡ್ ಡ್ರೈನೇಜ್, ವಾಟರ್ ಸಪ್ಲೈ ಇವುಗಳ ಬಗ್ಗೆ ಸಾಕಾದಷ್ಟು ಆಸ್ಥೆ ವಹಿಸಿದ್ದಾರೆ. ಇನ್ನೂ ಹೆಚ್ಚು ಆಸ್ಥೆ ವಹಿಸಿ ಬಾವಿ ತೋಡಿಸುವ ಕಡೆಗೆ ಹೆಚ್ಚಿನ ಗಮನವನ್ನು ಕೊಡ

(ಶ್ರೀ ಜಿ. ಎನ್. ಪಾಟೀಲ್)

ಬೇಕೆಂದು ಹೇಳುತ್ತೇನೆ. ಬಾವಿಸಲುವಾಗಿ ರೈತರಿಗೆ ತಗಾಯಿ ಸಾಲ ಅಥವಾ ಯಾವುದಾದರೂ ರೂಪದಲ್ಲಿ ಹಣವನ್ನು ಒದಗಿಸಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಇಚ್ಛೆ ಮಾಡಿ, ಮಾನ್ಯ ಸ್ಪೀಕರ್ ಅವರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರಿ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಅರಣ್ಯದ ವಿಷಯ ಯಾರೂ ಹೆಚ್ಚಾಗಿ ಮಾತನಾಡಲಿಲ್ಲ. ಇವತ್ತಿನ ದಿವಸ ವ್ಯವಸಾಯ, ಕಾಡು ಇವುಗಳು ಅತಿ ಮುಖ್ಯವಾದ ವಿಷಯ ಗಳಾದ್ದರಿಂದ ತಾವು ನನಗೆ ಕೊಟ್ಟಿರತಕ್ಕ ಟೈಂ ಸಾಲದು. ಆದರೂ ಕೂಡ ಇನ್ನು ಮುಂದೆ ಯಾವಾಗಲಾದರೂ ಶಾಸನ ಸಭೆ ನಡೆಯುವಾಗ ಈಗ ತಾವು ಕೊಟ್ಟಿರುವುದಕ್ಕಿಂದ ಹೆಚ್ಚು ಟೈಂ ಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅರಣ್ಯದಲ್ಲಿ ಏನು ಉತ್ಪನ್ನ ಬರಬೇಕಾಗಿತ್ತೊ ಅದರಲ್ಲಿ ಕಾಲು ಭಾಗ ಬರುತ್ತಾ ಇದೆ. ಇದಕ್ಕೆ ಕಾರಣವೇನೆಂದರೆ, ಇಲಾಖೆಯವರು ಬಹಳ ಅತ್ಯುತ್ತಮವಾದ ಉನ್ನತ ಬೆಲೆ ಬಾಳತಕ್ಕ ಮರಗಳನ್ನು ಕಡಿದು ಹಾಕುವುದಕ್ಕೆ ಅವಕಾಶ ಮಾಡಿ ಕೊಡುತ್ತಿರುವುದೇ ಆಗಿದೆ. ಕಾಡಿನಲ್ಲಿ ಮರಗಳನ್ನು ಕಡಿದು ಡಿಪೋಗಳಿಗೆ ಸಾಗಿಸುವಾಗ 35—40 ಸಾವಿರ ಬೆಲೆ ಬಾಳತಕ್ಕ ತೇಗ, ಹೊನ್ನೆ ಮೊದಲಾದ ಮರಗಳನ್ನು ತಂದು ಕೇರಳ ಅಥವಾ ಇತರ ಹೊರ ಪ್ರಾಂತ್ಯಗಳಿಗೆ ಕಳುಹಿಸಿಕೊಡುತ್ತಾ ಇದ್ದಾರೆ. ಇದನ್ನು ಹಿಂದಿನ ಸಭೆಯಲ್ಲೂ ಕೂಡ ಹೇಳಿದ್ದೆ. ಒಂದು ವೇಳೆ ಆ ರೀತಿ ಸಾಗಿಸುತ್ತಾ ಇರುವಾಗ ಯಾರನ್ನಾದರೂ ಹಿಡಿದಿದ್ದರೂ ಕೂಡ ಅವರನ್ನು ಕಾಂಪೌಂಡ್ ಮಾಡಿ ಬಿಟ್ಟು ಬಿಡುತ್ತಾರೆ. ಕನ್‌ವಿಕ್ಷನ್ ಆಗಿದ್ದರೂ ಕೂಡ ಅವರನ್ನು ಬಿಟ್ಟುಬಿಡಬೇಕಾದರೆ ಯಾವ ರೀತಿ ಬಿಡುತ್ತಾರೋ ಅರ್ಥವಾಗುವುದಿಲ್ಲ. ಅಂತಹ ಸಂಧರ್ಭದಲ್ಲಿ ಶಿಕ್ಷೆಗೆ ಅವರನ್ನು ಅರ್ಹರನ್ನಾಗಿ ಮಾಡಿ ನಮ್ಮ ದೇಶದ ಕಾಡಿನ ಉತ್ಪನ್ನವನ್ನು ಹೆಚ್ಚು ಮಾಡ ಬೇಕೆಂದು ನಾನು ಸಲಹೆ ಮಾಡುತ್ತೇನೆ.

ಕೆಲವು ಸೊಸೈಟಿಗಳಿಗೆ ತಂಗಡಿ ಚಕ್ಕೆ ಕಂಟ್ರಾಕ್ಟ್ ಕೊಟ್ಟಿದ್ದೀರಿ. ಹರಿಜನ ಅರ್ಥಿಕಾಭಿವೃದ್ಧಿ ಸೊಸೈಟಿ ಚಿತ್ರದುರ್ಗ ಅಂತ ಇದೆ. ಈ ತರಹ ದೇಶವ ಆಸ್ತಿ ತೆಗೆದುಕೊಂಡು ಹೋಗಿ ಯಾವುದೋ ಒಂದು ಜನಾಂಗಕ್ಕೆ ಅದು ಬಹಳ ಬಡತನದಲ್ಲದೆ ಎಂದು ಹೇಳಿ ಕಂಟ್ರಾಕ್ಟ್ ಕೊಟ್ಟರೆ ಯಾರ ಉದ್ಧಾರವೂ ಆಗುವುದಿಲ್ಲ. ಈ ರೀತಿ ಮಾಡುವುದು ಬಹಳ ಅನ್ಯಾಯ.

ಗಂಧದ ಮರದ ವಿಷಯದಲ್ಲಿ ಬಹಳ ದಿವಸದಿಂದ ಹೇಳುತ್ತಾ ಇದ್ದೇನೆ. ಒಂದು ಟನ್‌ಗೆ 6—7 ಸಾವಿರ ರೂಪಾಯಿ ಆಗುತ್ತದೆ. ಇಂತಹ ಮರಗಳನ್ನು ತುಂಡು ತುಂಡು ಮಾಡಿ ಡಿಪೋ ಗಳಿಗೆತೆಗೆದು ಹೋಗುವ ನೆಪದಲ್ಲಿ ಹೊರಕ್ಕೆ ಸಾಗಿಸುತ್ತಾ ಇದ್ದಾರೆ. ರಾತ್ರಿ ಹೊತ್ತು ಸೈಕಲ್ ಮೇಲೆ ಕಂಟೋನ್‌ಮೆಂಟ್ ಕಡೆಯಿಂದ ಹೋಗುತ್ತಾ ಇದೆ. ರೈತನ ಭೂಮಿಯಲ್ಲಿ ಬೆಳೆದ ಗಂಧದ ಮರವನ್ನು ಅವನು ಜೋಪಾನ ಮಾಡಬೇಕು ಆದರೆ ಅವನಿಗೆ ಕೊಡಬೇಕಾದ ಪರಿಹಾರವನ್ನು ಮಾತ್ರ ಕೊಡುತ್ತಾ ಇಲ್ಲ. ಒಂದು ವೇಳೆ ಅವನು ಅದನ್ನೇನಾದರೂ ಕಡಿದು ಹಾಕಿದರೆ ಪೋಲೀಸ್‌ನವರಿಗೆ ದೂರು ಹೋಗಿ ಅವನು ಶಿಕ್ಷೆಗೆ ಗುರಿಯಾಗ ಬೇಕಾಗುತ್ತದೆ, ಹೀಗಾಗಿ ಅವನು ಈ ಕಷ್ಟ ಏಕೆ ಎಂದು ಹೇಳಿ ಗಿಡ ಬಂದ ತಕ್ಷಣ ಸಸಿ ಇರುವಾಗಲೇ ಅದನ್ನು ಕಿತ್ತು ಹಾಕುತ್ತಾ ಇದ್ದಾನೆ. ಗಿಡ ಬೆಳೆಸಿದ ರೈತರಿಗೆ ಪರಿಹಾರವನ್ನು ಕೊಡುವ ವಿಷಯ ಬೇಕಾದಷ್ಟು ಜನರು ಹೇಳಿದ್ದಾರೆ. ಕೊಡುವುದಕ್ಕೆ ತೀರ್ಮಾನ ಮಾಡಿದ್ದೇವೆ ಎಂದು ಹೇಳುತ್ತಾ ಇದ್ದೀರಿ ಬರೀ ತೀರ್ಮಾನದಿಂದ ಪ್ರಯೋಜನವಿಲ್ಲ, ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ.

ಕೆಲವು ಸಾಮಿಲ್ಸ್‌ಗಳಿಂದ 5—10 ಲಕ್ಷ ರೂಪಾಯಿಗಳನ್ನು ಡಿಪಾರ್ಟ್‌ಮೆಂಟಿನವರು ಪಡೆದದ್ದು ಇದೆ. ಒಂದು ಸಾರಿ ಕಾಂಪೌಂಡ್ ಮಾಡುವುದಂತೂ ಸ್ವಾಭಾವಿಕ. 4—5 ಸಾರಿ ಕಾಂಪೌಂಡ್ ಮಾಡಿದ್ದಾರೆ. ಸಾಮಿಲ್‌ನವರು ಎಷ್ಟು ಬಂಡವಾಳ ಹಾಕಿದ್ದಾರೆ, ಅವರಿಗೆ ಎಷ್ಟು ಆದಾಯ ಇದೆ ಎಂಬುದನ್ನು ತಾವು ನೋಡಬೇಕು.

ಕಾಡಿನಲ್ಲಿ ಜಮೀನು ಕೊಡುವಾಗ ಕೆಲವರಿಗೆ 62 ನೇ ಇಸವಿ ರೇಟ್ ಪ್ರಕಾರ ಕೆಲವರಿಗೆ 65ನೇ ಇಸವಿ ರೇಟ್ ಪ್ರಕಾರ ಕೊಟ್ಟಿದ್ದೀರಿ. ಇವರಲ್ಲೂ ರಾಜಕೀಯ ನಡೆದಿದೆ. ಇದನ್ನು ತಪ್ಪಿಸಬೇಕು ಎಲ್ಲರಿಗೂ ಒಂದೇ ರೀತಿಯ ರೇಟ್‌ನಲ್ಲಿ ಕೊಡಬೇಕು.

ಟಿಂಬರ್ ಮತ್ತು ಸಾಫ್ಟ್ ವುಡ್ ಕೊಡುವಾಗ ಮೈಸೂರು ಸ್ಟೇಟ್‌ನಲ್ಲಿರತಕ್ಕ ಭದ್ರಾವತಿ ಫ್ಯಾಕ್ಟರಿಗಾಗಲಿ ಅಥವಾ ಬೆಂಗಳೂರಿನಲ್ಲಿರತಕ್ಕ ರೆಂಕೋ ಮುಂತಾದ ಫ್ಯಾಕ್ಟರಿಗಳಿಗೆ ಯಾವ ರೇಟ್ ಪ್ರಕಾರ ಕೊಟ್ಟಿದ್ದೀರಿ ? ಇವತ್ತು ಮಾರುಕಟ್ಟೆಯ ರೇಟ್ ಏನಿದೆ ಅದಕ್ಕಿಂತ ಕಡಿಮೆ ಬೆಲೆಗೆ ಕೊಡುವುದಕ್ಕೆ ಕಾರಣವೇನು ? ಅರಣ್ಯ ಖಾತೆ ವಿಷಯದಲ್ಲಿ ಕೆಲವು ಟೀಕೆಗಳಿವೆ, ಅವನ್ನು ಆದಷ್ಟು ಬೇಗ ಗಮನಿಸಿ ಇರುವ ಲೋಪದೋಷಗಳನ್ನು ಸರಿಪಡಿಸಬೇಕು.

ವ್ಯವಸಾಯದ ವಿಷಯ ಹೇಳಬೇಕಾದರೆ ಸಂಬಂಧಪಟ್ಟ ಸಚಿವರಿಲ್ಲ, ಪಾರ್ಲಿಮೆಂಟರಿ ಸೆಕ್ರೆಟರಿಗಳಿದ್ದಾರೆ, ಅವರಿದ್ದರೂ ಪ್ರಯೋಜನವಿಲ್ಲ, ಆರ್. ಎಂ. ಪಾಟೀಲರು, ನೀರಾವರಿ ಸಚಿವರು ಇರಬೇಕಾಗಿತ್ತು. ಈ ಇಲಾಖೆ ನಾಲ್ಕಾರು ಸಚಿವರಿಗೆ ಸಂಬಂಧಪಟ್ಟಿದೆ. ಬಾವಿ ತೆಗೆಯಬೇಕಾದರೆ ಬಿ. ಡಿ. ಒ. ಕೇಳಿದರೆ ವ್ಯವಸಾಯದ ಇಲಾಖೆಯವರನ್ನು ಕೇಳಿ ಎಂದು ಹೇಳುತ್ತಾರೆ, ಅಲ್ಲಿ ಹೋದರೆ ತಾಲ್ಲೂಕುಬೋರ್ಡು ಪ್ರೆಸಿಡೆಂಟರನ್ನು ಕೇಳಬೇಕೆನ್ನುತ್ತಾರೆ, ಅವರ ಹತ್ತಿರ ಹೋದರೆ ಹಣ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಹೀಗೆ ದಿಕ್ಕು ದೆಶೆ ಇಲ್ಲದೆ ಇಲಾಖೆ ಇದೆ. ವ್ಯವಸಾಯದ ಇಲಾಖೆಯು ಹಾವು ಕಪ್ಪೆ ನುಂಗಿ ಒದ್ದಾಡುವ ಹಾಗೆ ಕೆಲಸಮಾಡುತ್ತದೆ, ತಿಂಗಳಾದರೆ ಸಲೀಸಾಗಿ ಅಧಿಕಾರಿಗಳಿಗೆ ಸಂಬಳ ಮಾತ್ರ ಬಂದುಬಿಡುತ್ತದೆ. ಬಾವಿಗೆ ಹಣ ಪಡೆಯಬೇಕಾದರೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಹೋಗಬೇಕು, ಅಲ್ಲಿಗೆ ಹೋದರೆ ಅರ್ಜಿ ತೆಗೆದುಕೊಳ್ಳುವವರೇ ಇರುವುದಿಲ್ಲ. ತಾಲ್ಲೂಕುಗಳಲ್ಲಿ ಸೊಸೈಟಿ ಇದೆ, ಎರಡು ತಿಂಗಳಲ್ಲಿ ಹಣ ದೊರೆಯುತ್ತದೆ ಎಂದು ಹೇಳುತ್ತಾರೆ. ಆದರೆ ಮೂರು ವರ್ಷವಾದರೂ ದೊರೆಯದಿರುವ ಸಂದರ್ಭಗಳಿಗೆ, ಬೇಕಾದರೆ ತಿಳಿಸುತ್ತೇನೆ. ಹೀಗಾದರೆ ವ್ಯವಸಾಯ ಹೇಗೆ ಮುಂದುವರಿಯುವುದು ? ಗೊಬ್ಬರ ಕೇಳಿದರೆ ಸೊಸೈಟಿಯವರು ತರಿಸಿಲ್ಲವೆಂದು ಹೇಳುತ್ತಾರೆ, ಕೆಲವುವೇಳೆ ಅವರು ಕೊಡುವುದದು ಸಾಲದೆ ಸಿಟಿಗೆ ಹೋಗಿ ತೆಗೆದುಕೊಳ್ಳಬೇಕಾಗುತ್ತದೆ. ಗ್ರಾಮಗಳಲ್ಲಿ ಮಲಮೂತ್ರ, ಕಸಕಡ್ಡಿ ಕೂಡಿ ಹಾಕಿ ಗೊಬ್ಬರ ಮಾಡಬೇಕೆಂದು ಹೇಳಿದರೂ ಕೂಡ ಎನ್. ಇ. ಎಸ್.ನವರು ಇದುವರೆಗೂ ಕೂಡ ಪ್ರಯತ್ನ ಮಾಡಿಲ್ಲ. ಇಂಥ ಇಲಾಖೆ ಏಕಿರಬೇಕು ? ಕಸಕಡ್ಡಿ ಒಂದು ಕಡೆ ಸೇರಿಸಿ ಕಾಂಪೋಸ್ಟ್ ಮಾಡಿ ಹಂಚಲು ಏರ್ಪಾಡು ಮಾಡಿದ್ದೀರಾ? ಯಾಂಗೂ ಕೂಡ ವ್ಯವಸಾಯದ ಇಲಾಖೆಯನ್ನು ಉತ್ತಮಪಡಿಸಿ ವ್ಯವಸಾಯಾಭಿವೃದ್ಧಿ ಮಾಡಲು ಮನಸ್ಸಿರುವಂತೆ ಈಗ ಮಾಡುತ್ತಿರುವ ಕೆಲಸ ನೋಡಿದರೆ ಕಂಡುಬರುವುದಿಲ್ಲ. ಅನೇಕ ಜನ ರಾಜ್ಯ ಸಭೆ ಸದಸ್ಯರು ನಿನ್ನೆಯಿಂದ ಓಡಾಡುತ್ತಿದ್ದಾರೆ, ಓಟು ತೆಗೆದುಕೊಂಡು ಹೊರಟು ಹೋಗುತ್ತಾರೆ. ನಮ್ಮ ಸಂಸ್ಥಾನಕ್ಕೆ ಸಲ್ಲಬೇಕಾದ ಹಣ ಸೌಲಭ್ಯ ಕಡಮೆಯಾಗಿ ನಮ್ಮ ದೇಶದ ಕೀರ್ತಿ ಕಡಮೆಯಾಗಿರುವುದಕ್ಕೆ ಅವರೇ ಕಾರಣ. ನಾವು ನೋಡಿದ ಹಾಗೆ ಅವರು ನಮ್ಮ ದೇಶದ ಕೀರ್ತಿಯನ್ನು ಸರಿಯಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡಿಲ್ಲ. ದೇಶ ಹೀಗೆ ಅಧೋಗತಿಗೆ ಬರುವಾಗ ಅವರೇಕೆ ಇರಬೇಕು ? ಆಂಧ್ರದವರು 300 ರೂಪಾಯಿಗಳಿಗೆ ನಮ್ಮ ಜಮೀನನ್ನು ಕೊಂಡು ಇಂದು ನಮ್ಮವರಿಗೇ 4—5 ಸಾವಿರ ರೂಪಾಯಿಗಳಿಗೆ ಮಾರುತ್ತಿದ್ದಾರೆ, ಅವರಿಗೆ ಸೌಲತ್ತು ಕೊಡುತ್ತಿದ್ದಾರೆ. ಕೇರಳದವರಾದರೋ ದರಖಾಸ್ತು ಕೊಡದೆ ಜಮೀನನ್ನು ಸ್ವಾಧೀನಪಡಿಸಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡಬಾರದು. ನೀರಿನ ಅನುಕೂಲವಿರುವ ಕಡೆ ಹೆಚ್ಚಾಗಿರುವ ಜಮೀನನ್ನು ರಿಲೀಸ್ ಮಾಡಿಕೊಡಬೇಕು ಎಂದು ಇಷ್ಟು ಹೇಳಿ, ಈ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಟಿ. ಕೆ. ಕಂಬಳಿ (ಕುಂದ್‌ಗೋಳ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರುವ ವ್ಯವಸಾಯ, ಅರಣ್ಯ ಮೀನುಗಾರಿಕೆ ಯಾವತ್ತೂ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ವ್ಯವಸಾಯದ ಉದ್ಯೋಗ ಮಾಡುವ ನಮ್ಮ ರಾಜ್ಯದಲ್ಲಿ ಕನಿಷ್ಠ ಸೇಕಡ 75 ಜನ ವ್ಯವಸಾಯ ಮಾಡುತ್ತಿದ್ದರೂ ಕೂಡ ಬೆಳೆಯುವ ಆಹಾರ ನಮಗೆ ಸಾಲುವುದಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಇದಕ್ಕೇನು ಕಾರಣ ಎಂಬುದನ್ನು ಕಂಡುಹಿಡಿಯಬೇಕು. ಈ ಉದ್ಯೋಗವನ್ನು ಈಗ ಬಿಡುವ ಸ್ಥಿತಿ ಬಂದಿದೆ. ಇದು ಲಾಭದಾಯಕವಾಗಬೇಕಾದರೆ, ನಮ್ಮ ದೇಶದ ಆಹಾರದ ಉತ್ಪತ್ತಿ ಹೆಚ್ಚಬೇಕಾದರೆ ಏನು ಮಾಡಬೇಕೆಂದು ಎಲ್ಲರೂ ಹೇಳುತ್ತಿದ್ದರೂ ಕೂಡ ಇಲ್ಲಿಯವರೆಗೆ ಸರಿಯಾದ ಒಂದು ವ್ಯವಸ್ಥೆ ಕಾರ್ಯರೂಪಕ್ಕೆ ಬಂದಿಲ್ಲ. ಕೋಟ್ಯಾಂತರ ರೂಪಾಯಿ ಖರ್ಚುಮಾಡಿದರೆ ಇದು ಸರಿಹೋಗುವುದಿಲ್ಲ. ಈಗಿರುವ ಸೇಕಡ 75 ಮಂದಿ ರೈತರಿಗೆ ಸೇಕಡ 25 ಮಂದಿಗೆ ಕೂಡ ಹೊಟ್ಟೆಗೆ ಹಾಕುವುದಕ್ಕಾಗಿಲ್ಲ. ಬೆಳೆಯುವ 75 ಮಂದಿಗೂ ಕೂಡ ಅವರು ಬೆಳೆಯುವುದು ಸಾಕಾಗುತ್ತಿಲ್ಲ. ವ್ಯವಸಾಯಗಾರರಿಗೆ ಬೇಕಾಗಿರುವುದು ಬೀಜ, ಗೊಬ್ಬರ, ಉತ್ಪತ್ತಿಮಾಡುವ ಹೊಲ. ಈ ಮೂರು ಸರಿಯಾಗಿಲ್ಲ ಎಂಬುದು ನನ್ನ ಮಾತು. ಈ ಮೂರೂ ಸರಿಯಾಗಬೇಕಾದರೆ ದೇವರು ಮನಸ್ಸು ಮಾಡಬೇಕು. ಅತ ಕೃಪೆ ಮಾಡಬೇಕು. ಅವನ ಕೃಪೆಯಿಲ್ಲದೆ ಈಗ ತೊಂದರೆಯಾಗಿದೆ. ಹಿಂದಿನಿಂದಲೂ ನಮ್ಮ ಕೊರತೆ

(ಶ್ರೀ ಟಿ. ಕೆ. ಕಂಬಳಿ)

ತಪ್ಪಿಲ್ಲ. ಈಗ ಸರಕಾರದವರು ನೀರಾವರಿ, ಬೀಜ, ಗೊಬ್ಬರ ಮುಂತಾದುವುಗಳ ಸಹಾಯ ನೀಡುತ್ತಿದ್ದಾರೆ. ಹೈಬ್ರಿಡ್ ಬಿತ್ತನೆ ಮಾಡಿದರೆ ಹೆಚ್ಚು ಬೆಳೆ ಬರುತ್ತದೆಂದು ಕೆಲವರು ಹೇಳಿದರು. ಅದು ನಿಜ, ನಾನೂ ವ್ಯವಸಾಯಗಾರ. ಆದರೆ ಒಂದು ಕಷ್ಟವಿದೆ, ಹೈಬ್ರೀಡ್ ಬೀಜ ಸಿಕ್ಕುವುದಿಲ್ಲ. ನಮ್ಮಲ್ಲಿ ಜೋಳ, ಮೈಜ್, ಸಜ್ಜೆ ಎಂದು ಮುಖ್ಯವಾಗಿ ಮೂರು ಹೈಬ್ರಿಡ್ ಬೀಜ ಇದೆ. ಹೀಗೆ ಎಲ್ಲಾ ಧಾನ್ಯಗಳ ವಿಚಾರದಲ್ಲೂ ಸುಧಾರಣೆಯಾಗಬೇಕು. ರಾಗಿ, ಬತ್ತ, ನವಣೆ ಮುಂತಾದ ಎಲ್ಲಾ ಧಾನ್ಯಗಳ ಸಮಸ್ಯೆಯೂ ಬಗೆಹರಿಯಬೇಕು. ಪ್ರಯತ್ನ ಮಾಡಿದರೆ ಸಾಧ್ಯವಾಗುತ್ತದೆ. ನಮ್ಮ ದೇಶದಲ್ಲಿ ಇದನ್ನು ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಮೊನ್ನೆ ಕೆಲವರು ಬರೀ ಗಂಡುಜಾತಿ ಬೀಜ ದೊರೆಯುತ್ತದೆ, ಹೆಣ್ಣು ಜಾತಿ ಬೀಜವಿಲ್ಲ ಎಂದು ಹೇಳಿದರು. ಅದನ್ನು ಹೊರ ದೇಶದಿಂದ ತರಿಸುವುದಕ್ಕೆ ಬದಲಾಗಿ ಇಲ್ಲೇ ಏಕೆ ತಯಾರಿಸಬಾರದು ?

ಅಧ್ಯಕ್ಷರು.—ಹೊರದೇಶದಿಂದ ಯಾವುದನ್ನು ತರಿಸಬೇಕು ?

ಶ್ರೀ ಟಿ. ಕೆ. ಕಂಬಳಿ.—ಕೆಲವು ಕಡೆ ಹೆಣ್ಣು ಬೀಜ ದೊರೆಯುವುದಿಲ್ಲ, ಗಂಡುಬೀಜ ದೊರೆಯುತ್ತದೆ, ಎರಡನ್ನೂ ಈಗ ತರಿಸಬೇಕು. ಇದನ್ನು ತರಿಸುವುದಕ್ಕೆ ಬದಲಾಗಿ ಇಲ್ಲೇ ಉತ್ಪತ್ತಿ

7-00 P.M.

ಮಾಡಬೇಕು. ಹೊರಗಿನಿಂದ ತರುವುದಕ್ಕಿಂತ ಈ ಬೀಜ ಇಲ್ಲಿಯೇ ಉತ್ಪತ್ತಿ ಮಾಡುವುದು ಒಳ್ಳೆಯದು. ಈ ಹೈಬ್ರಿಡ್ ಬೀಜದ ಬಗ್ಗೆ ರಿಸರ್ಚ್ ಮಾಡಬೇಕಾದ ಅಗತ್ಯ ಇದೆ. ರಿಸರ್ಚ್ ವಿಷಯದಲ್ಲಿ ನಮ್ಮ ರಾಜ್ಯ ಹಿಂದೆ ಉಳಿದಿದೆ. ನಮ್ಮಲ್ಲಿ ಇನ್ನೂ ಸೀಡ್ ಫಾರ್ಮ್ ಆಗಿಲ್ಲ. ಈ ಸೀಡ್ ಫಾರ್ಮನ್ನು ತಾಲ್ಲೂಕ್ ವೈಸ್ ಆಗಿ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಕುಂದಗೋಳ್ ತಾಲ್ಲೂಕಿನಲ್ಲಿ ಸೀಡ್ ಫಾರ್ಮ್ ಮಾಡಬೇಕೆಂದು ಮೂರು ಸಲ ಕೇಳಿದರೂ ಕೂಡ ಇದುವರೆಗೆ ಸೀಡ್ ಫಾರ್ಮ್ ಆಗಿಲ್ಲ. ತಾಲ್ಲೂಕ್ ವೈಸ್ ಸೀಡ್ ಫಾರ್ಮ್ ಮಾಡುವುದರಿಂದ ಕೆಳಮಟ್ಟದಲ್ಲಿರತಕ್ಕ ಸಮಸ್ಯೆಗಳು ದೂರವಾಗುತ್ತವೆ. ರಿಸರ್ಚ್ ಮಾಡಿ ಹೈಬ್ರಿಡ್ ಜೋಳದ ಬೀಜ ಇಲ್ಲಿಯೇ ಪಡೆಯಬಹುದು. ಗೋಧಿಗೆ ಹೈಬ್ರಿಡ್ ಇಲ್ಲವಾದುದರಿಂದ ಅದನ್ನು ಅವಶ್ಯ ತರಿಸಬೇಕಾಗುತ್ತದೆ. ಒಂದು ಕ್ರಾಪ್ ಫೆಲ್ಯೂರ್ ಆದರೆ ಇದರಲ್ಲಿ ಕಷ್ಟವಾಗುತ್ತದೆ. ಇಂದು ದೇಶದಲ್ಲಿ ಅಭಾವ ಇದೆ. ಕ್ಷಾಮದಲ್ಲಿ ಫಾರ್ಮ್ ಸಂರಕ್ಷಣೆ ಮಾಡತಕ್ಕದ್ದು ಸರಕಾರದ ಹೊಣೆ. ಪರದೇಶದಲ್ಲಿ ಯಾವ ರೀತಿ ಕ್ರಾಪ್ ಪ್ರೊಟೆಕ್ಷನ್ ವ್ಯವಸ್ಥೆ ಇದೆಯೋ ಅದೇ ರೀತಿ ನಮ್ಮ ದೇಶದಲ್ಲಿಯೂ ಕೂಡ ವ್ಯವಸ್ಥೆಯಾಗಬೇಕಾದುದು ಅಗತ್ಯವಾಗಿದೆ ಎಂದು ಹೇಳುತ್ತೇನೆ. ಕೇಂದ್ರ ಸರಕಾರದೊಳಗೆ ಎರಡು ಮೂರು ವರ್ಷಗಳ ಹಿಂದೆ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಮಾತನಾಡುತ್ತಿದ್ದರು. ಈಗಿನ ಕಾಲದಲ್ಲಿ ಇದು ಬಹಳ ಅವಶ್ಯಕವಾಗಿದೆ. ಕ್ರಾಪ್ ಪ್ರೊಟೆಕ್ಷನ್‌ಗಾಗಿ ಒಂದು ವಿಮಾ ಯೋಜನೆಯ ವ್ಯವಸ್ಥೆ ಮಾಡಬೇಕಾದ ಅಗತ್ಯವಿದೆ ಎಂದು ಸಲಹೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಇದನ್ನು ಅಗತ್ಯವಾಗಿ ಮಾಡಬೇಕೆಂದು ನನ್ನ ಮತ.

ಇನ್ನೊಂದು ವಿಚಾರ. ನಮ್ಮ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರಬೇಕಾಗುತ್ತದೆ. ಗೊಬ್ಬರದ ಉತ್ಪತ್ತಿ ಎಷ್ಟು ಮಾಡಿದರೂ ಅದು ಕಡಿಮೆಯಾಗಿದೆ. ರಾಸಾಯನಿಕ ಗೊಬ್ಬರದ ತಯಾರಿಸುವುದಕ್ಕೆ ನಾಲ್ಕಾರು ಕಾರಖಾನೆಗಳನ್ನು ಪ್ರಾರಂಭಿಸಿ ಸರಕಾರದವರು ರೈತರಿಗೆ ಗೊಬ್ಬರ ಪೂರೈಸಬೇಕು. ಇದಲ್ಲದೆ ತಾಲ್ಲೂಕುಗಳಲ್ಲಿ ರೈತನಿಗೆ ಕಡಿಮೆ ಬೆಲೆಯಲ್ಲಿ ರೆಂಟೆ ಕುಂಟೆ ಮೊದಲಾದ ಉಪಕರಣಗಳನ್ನು ಒದಗಿಸಿ ಕೊಡಬೇಕು. ಈ ರೀತಿ ಒಂದು ವ್ಯವಸ್ಥೆ ಬೇರೆ ಪ್ರಾಂತಗಳಲ್ಲಿ ಇದೆ. ಆದರೆ ನಮ್ಮ ರಾಜ್ಯದಲ್ಲಿ ಇಲ್ಲ. ಈ ಬಗ್ಗೆ ವ್ಯವಸಾಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಅದನ್ನು ತಾಲ್ಲೂಕಿಗೆ ಒಂದು ವ್ಯವಸ್ಥೆ ಮಾಡಬೇಕು ಮತ್ತು ಕಾರ್ಯ ರೂಪದಲ್ಲಿ ತಂದು ಪೂರೈಸಬೇಕು.

ಕೊನೆಯದಾಗಿ ಒಂದು ಮಾತು ಹೇಳಿ ನನ್ನ ಮಾತು ಮುಗಿಸುತ್ತೇನೆ. ಈಗ ಅರಣ್ಯ ಇಲಾಖೆಯ ರೇಂಜು ಆಫೀಸು ಅಂದರೆ ಡಿ.ಎಫ್.ಓ. ಆಫೀಸು ಧಾರವಾಡ ನಗರದಲ್ಲಿ ಇದೆ. ಧಾರವಾಡವು ಜಿಲ್ಲಾ ಕೇಂದ್ರಸ್ಥಾನವಾಗಿದ್ದು ಸೆಂಟ್ರಲ್ ಪ್ಲೇಸ್ ಆಗಿರುವುದರಿಂದ ಇಲ್ಲಿ ಕಂಟ್ರಾಕ್ಟರ್ಸ್ ಹೆಚ್ಚು ಜನ ಇದ್ದಾರೆ. ಇಲ್ಲಿ ಈ ಆಫೀಸು ಇರುವುದರಿಂದ ಬಹಳ ಉಪಯೋಗವಾಗುತ್ತದೆ.

ಆದುದರಿಂದ ಈ ಆಫೀಸು ಬೇರೆ ಕಡೆ ಹಾಕಬಾರದು. ಇಲ್ಲಿಯೇ ಈ ಆಫೀಸು ಇರುವುದನ್ನು ಕಾಯಂ ಮಾಡಬೇಕು ಎಂದು ಹೇಳಿ ಇದನ್ನು ಅಧ್ಯಕ್ಷರ ಮೂಲಕ ಸರಕಾರಕ್ಕೆ ಬಿನ್ನವಿಸಿಕೊಳುತ್ತೇನೆ. ಕೊನೆಯದಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

Mr. SPEAKER.—The House will now rise and meet again tomorrow at 8-30 A.M.

The House adjourned at Five Minutes past Seven of the Clock to meet again at Thirty Minutes past Eight of the Clock on Tuesday the 29th March 1966.